ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 23 ಮಂಗಳವಾರ 2025

ಸಂಪುಟ: 46 | ಸಂಚಿಕೆ: 157 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿ, ಪುಷ್ಪಾರ್ಚನೆಯೊಂದಿಗೆ ಬೂಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್‌ರಿಂದ ಉದ್ಘಾಟನೆ

ಮೈಸೂರು ದಸರಾ ಆರಂಭ

- ಹಿಂದೂ ಧಾರ್ಮಿಕತೆ, ಸಾಂಪ್ರದಾಯಿಕತೆ ಅಚ್ಚುಕಟ್ಟಾಗಿ ಪಾಲಿಸಿ ನಿಬ್ಬೆರಗಾಗಿಸಿದ ಸಾಹಿತಿ
- ಅಸ್ತ್ರ ಬದಲು ಅಕ್ಷರ, ಹಗೆ ಬದಲು ಪ್ರೀತಿಯಿಂದ ಬದುಕು ಗೆಲ್ಲಿ; ದಸರಾ ಸಂದೇಶ
- ತಳಿರು ತೋರಣ, ಬಣ್ಣದ ಚಿತ್ತಾರದಲ್ಲಿ ಕಂಗೊಳಿಸಿದ ಚಾಮುಂಡಿಬೆಟ್ಟ
- ನಾಡಿನ ಸಂಸ್ಕೃತಿ, ಪರಂಪರೆ, ಐತಿಹಾಸಿಕ ಹಿನ್ನೆಲೆ ಅನಾವರಣ
- ವಿಶ್ವಕ್ಕೆ ದಸರಾ ಶಾಂತಿ, ಸಹಬಾಳ್ವೆ ಪ್ರತಿಧ್ವನಿಸಲಿ; ಮಹಾ ಆಶಯ



ಮೈಸೂರು, ಸೆ.22(ಬಿಎಲ್‌ಯು)– ನಾಡಿನ ಸಾಂಸ್ಕೃತಿಕ ಪರಂಪರೆ, ಐತಿಹಾಸಿಕ ಹಿನ್ನೆಲೆ, ರಾಜರ ಕಾಲದ ವೈಭವ, ದುಷ್ಟ ಸಂಹಾರ, ಶಿಷ್ಟ ರಕ್ಷಣೆಯ ಬೆಳಕು ಪ್ರಜ್ವಲಿಸುವ 11 ದಿನಗಳ ವಿಶ್ವ ವಿಖ್ಯಾತ ಮೈಸೂರು ದಸರಾ ಸೋಮವಾರ ಆರಂಭವಾಯಿತು. ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಬಾನು ಮುಷ್ತಾಕ್ ಅವರು ಬೆಳ್ಳಿ ರಥದಲ್ಲಿ ಪ್ರತಿಷ್ಠಾಪನೆಗೊಂಡಿದ್ದ ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಮೈಸೂರು ದಸರಾಗೆ ವಿಧ್ಯುಕ್ತ ಚಾಲನೆ ನೀಡಿದರು.

ಇದೇ ವೇಳೆ ಮಾತನಾಡಿದ ಬಾನು ಮುಷ್ತಾಕ್ ಅವರು, ಅಸ್ತ್ರಗಳ ಬದಲು ಅಕ್ಷರದಿಂದ ಬದುಕು ಗೆಲ್ಲಬೇಕು, ಹಗೆಗಳ ಬದಲು ಪ್ರೀತಿಯಿಂದ ಬದುಕನ್ನು ಅರಳಿಸಬೇಕು ಎಂದು ನಾಡಿನ ಜನರಿಗೆ ಸಂದೇಶ ಸಾರಿದರು. ಇದಕ್ಕೂ ಮೊದಲು ಚಾಮುಂಡಿಬೆಟ್ಟದ ಮಹಿಷಾಸುರ ಪ್ರತಿಮೆ ಬಳಿಯ ಪ್ರವೇಶ ದ್ವಾರದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಆಗಮಿಸಿದ ಬಾನು ಮುಷ್ತಾಕ್ ಅವರಿಗೆ ಸಾಂಪ್ರದಾಯಿಕ ಪೂರ್ಣಕುಂಭ ಸ್ವಾಗತ ಕೋರಲಾಯಿತು. ತರುವಾಯ ಚಾಮುಂಡೇಶ್ವರಿ ದೇವಸ್ಥಾನ ಪ್ರವೇಶಿಸಿದ ಬಾನು ಮುಷ್ತಾಕ್ ಅವರು, ದೇವಿಯ ಗರ್ಭಗುಡಿ ಬಳಿಯ ಪ್ರಾಂಗಣದಲ್ಲಿ ಮುಂಚೂಣಿಯಲ್ಲಿ ನಿಂತು ಶಕ್ತಿ ದೇವತೆ ■6ನೇ ಪುಟಕ್ಕೆ

ಗಡಿ ಅಳಿಸಿ, ಪ್ರೀತಿ ವಾತ್ಸಲ್ಯ ಮೂಡಿಸಿ

ಮನುಷ್ಯ ತನ್ನ ಸುತ್ತ ಹಾಕಿರುವ ಗಡಿಯನ್ನು ಅಳಿಸಿ ಪ್ರೀತಿ, ವಾತ್ಸಲ್ಯವನ್ನು ಬೆಳೆಸಿಕೊಳ್ಳಬೇಕು ಎಂದು ಬಾನು ಮುಷ್ತಾಕ್ ಸಲಹೆ ನೀಡಿದರು.

ನಾವೆಲ್ಲರೂ ಒಂದೇ ಗಗನದಡಿಯ ಪಯಣಿಗರು. ಆಕಾಶ ಯಾರನ್ನು ಬೇರ್ಪಡಿಸಲ್ಲ, ಭೂಮಿ ಯಾರನ್ನು ತಳ್ಳುವುದಿಲ್ಲ. ಆದರೆ ಮನುಷ್ಯ ತನಗೆ ಬೇಕಾದಂತೆ ಸೀಮಿತ ಗಡಿ ಹಾಕಿಕೊಂಡಿದ್ದಾನೆ. ಇದನ್ನು ಅಳಿಸಿ ಪರಸ್ಪರ ಸಹಬಾಳ್ವೆಯಿಂದ ಬದುಕಬೇಕು ಎಂದು ಹೇಳಿದರು.

ಇತಿಹಾಸದ ಒಳಹೊಕ್ಕಿ ನೋಡಿದಾಗ ನಾಲ್ವಡಿ ಕೃಷ್ಣರಾಜ ಒಡೆಯರ್ ಎಂದೆಂದಿಗೂ ಪ್ರಸ್ತುತರಾಗುತ್ತಾರೆ. ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಔದಾರ್ಯದ ದೊರೆಯಾಗಿದ್ದ ನಾಲ್ವಡಿ ಅವರು ಅನರ್ಘ್ಯ ರತ್ನವಾಗಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಸಂಸ್ಕೃತಿ ನಮ್ಮ ಬೇರು, ಸೌಹಾರ್ದತೆ ನಮ್ಮ ಶಕ್ತಿ, ಇದೆಲ್ಲವೂ ನಮ್ಮ ಭರತ ಭೂಮಿ ನೆಲೆಯಲ್ಲಿ ಸೇರಿ ಮಾನವೀಯ ಮೌಲ್ಯದಿಂದ ಹೊಸ ಸುಧಾರಿತ ಸಮಾಜ ಕಟ್ಟೋಣ ಎಂದು ಬಾನು ಮುಷ್ತಾಕ್ ಹೇಳಿದರು.



ಚಾಮುಂಡಿಬೆಟ್ಟದಲ್ಲಿ ಸೋಮವಾರ ಈ ಸಾಲಿನ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಸಾಹಿತಿ ಬಾನು ಮುಷ್ತಾಕ್ ಅವರು, ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವ ಮೂಲಕ ವಿಧ್ಯುಕ್ತ ಚಾಲನೆ ನೀಡಿದರು.

ಹಗೆಯ ಬದಲು ಪ್ರೀತಿಯಿಂದ ಬದುಕು ಅರಳಿಸಬಹುದು...

ಬಾನು ಮುಷ್ತಾಕ್‌ರ ದಸರಾ ಸಂದೇಶ

ಮೈಸೂರು, ಸೆ.22– ಅಸ್ತ್ರಗಳ ಬದಲು ಅಕ್ಷರದಿಂದ ಬದುಕನ್ನು ಗೆಲ್ಲಬಹುದು. ಹಗೆಯ ಬದಲು ಪ್ರೀತಿಯಿಂದ ಬದುಕನ್ನು ಅರಳಿಸಬಹುದು ಎಂದು ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಬಾನು ಮುಷ್ತಾಕ್ ಅಭಿಪ್ರಾಯಪಟ್ಟರು.

ಚಾಮುಂಡಿಬೆಟ್ಟದಲ್ಲಿ ದಸರಾ ಉದ್ಘಾಟನೆ ನೆರವೇರಿಸಿದ ನಂತರ ಮಾತನಾಡಿದ ಅವರು, ದಸರಾ ಶಾಂತಿಯ ಹಬ್ಬ, ಸೌಹಾರ್ದತೆಯ ಮೇಳ. ಈ ಮೂಲಕ ದಸರಾ ಸರ್ವಜನಾಂಗದ ತೋಟವಾಗಿದೆ. ನನ್ನ ಜೀವನದ ದರ್ಶನ ಎಂದೆಂದಿಗೂ ಜೀವ ಪರವಾಗಿದೆ ಎಂದು ಹೇಳಿದರು.

ತಮ್ಮ ಭಾಷಣದುದ್ದಕ್ಕೂ ಮೈಸೂರು ದಸರಾದ ಮಹತ್ವ, ಹಿರಿಮೆ–ಗರಿಮೆಯನ್ನು ಸಮಗ್ರವಾಗಿ ವಿವರಿಸಿದ ಬಾನು ಮುಷ್ತಾಕ್ ಅವರು, ವಿಶ್ವ ಪ್ರಸಿದ್ಧ ಮೈಸೂರು ದಸರಾ ಕೇವಲ ಹಬ್ಬವಾಗಿರದೆ ನಾಡಿನ ಜನರ ಸಂಸ್ಕೃತಿಯ ಉತ್ಸವವಾಗಿದೆ. ದಸರಾ ಎಲ್ಲರನ್ನು ಒಗ್ಗೂಡಿಸುವ ಸಮನ್ವಯದ ಮೇಳವಾಗಿದೆ ಎಂದು ಅಭಿಪ್ರಾಯಪಟ್ಟರು.

ಸಂಸ್ಕೃತಿ ಎಂದರೆ ವಿಭಿನ್ನ ಧ್ವನಿಯ ಸಂಗಮ ಮಾತ್ರವಲ್ಲದೆ ವೈವಿಧ್ಯತೆಯಲ್ಲಿ ಏಕತೆ ಸಾರುವ ಸುಗಂಧವಾಗಿದೆ. ದಸರಾಗೆ ತನ್ನದೆ ಆದ ಐತಿಹಾಸಿಕ, ಪಾರಂಪರಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆ ಇದ್ದು, ಪ್ರತಿಯೊಬ್ಬರ ಹೃದಯವನ್ನು ಒಗ್ಗೂಡಿಸುವ ಸೇತುವೆಯಾಗಿದೆ ಎಂದು ಹೇಳಿದರು.

ದ್ವೇಷವನ್ನು ಬೆಳೆಸುವ ಬದಲು ಪ್ರೀತಿಯನ್ನು ಬೆರೆಸುವ, ಯಾರನ್ನು ನೋಯಿಸದ ಮಹತ್ತರ ಕಾಲಘಟ್ಟದಲ್ಲಿ ದಸರಾ ಹಬ್ಬದ ಬೆಳಕು ಪ್ರಜ್ವಲಿಸುತ್ತದೆ. ಈ ಮೂಲಕ ಪ್ರತಿಯೊಬ್ಬರಲ್ಲಿ ಪರಸ್ಪರ ಗೌರವವನ್ನು ವಿನಿಮಯ ಮಾಡಿಕೊಳ್ಳುವ ಭೂಮಿಕೆಯನ್ನು ದಸರಾ ಸಿದ್ಧಪಡಿಸುತ್ತದೆ ಎಂದು ಬಾನು ಮುಷ್ತಾಕ್ ಅಭಿಪ್ರಾಯಪಟ್ಟರು.

ಪ್ರಜಾಪ್ರಭುತ್ವದ ಮೌಲ್ಯ, ನಂಬಿಕೆ, ಸಂಸ್ಕೃತಿಯನ್ನು ಗೌರವಿಸುವ ಮೂಲಕ ನಮ್ಮ ಬದುಕನ್ನು ಶ್ರೀಮಂತಗೊಳಿಸಬೇಕಿದ್ದು, ಇಂತಹ ಮಹತ್ಕಾರ್ಯ ಮೈಸೂರಿಗೆ ಮಾತ್ರ ಸೀಮಿತವಾಗದೆ ಇಡೀ ಜಗತ್ತಿಗೆ ವಿಸ್ತರಣೆಗೊಳ್ಳಬೇಕು. ಈ ಮೂಲಕ ವಿಶ್ವದ ಮನುಕುಲಕ್ಕೆ ಶಾಂತಿ, ನೆಮ್ಮದಿ, ಪ್ರೀತಿ ಮತ್ತು ನ್ಯಾಯದ ದೀಪವನ್ನು ಬೆಳಗಿಸಬೇಕು ಎಂದು ಸಲಹೆ ನೀಡಿದರು.

ಹಿಂದೂ ಧಾರ್ಮಿಕ ಆಚರಣೆಗೆ ವಿರುದ್ಧವಾಗಿರುವ ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟನೆ ಮಾಡಿಸಬಾರದು ಎಂದು ಬಿಜೆಪಿ ಸೇರಿದಂತೆ ಸಂಘ ಪರಿವಾರದವರಿಂದ ವಿರೋಧ ವ್ಯಕ್ತವಾಗಿದ್ದನ್ನು ಪರೋಕ್ಷವಾಗಿ ಉಲ್ಲೇಖಿಸಿದ ಬಾನು ಮುಷ್ತಾಕ್ ಅವರು, ಮೈಸೂರು ಮಹಾರಾಜರಾಗಿದ್ದ ಜಯಚಾಮರಾಜೇಂದ್ರ ಒಡೆಯರ್ ಅವರು ಮುಸ್ಲಿಂರನ್ನು ನಂಬಿ, ಅವರನ್ನು ಅವಮಾನಿಸದೆ ಅಂಗರಕ್ಷಕ ಪಡೆಯ ಸದಸ್ಯರನ್ನಾಗಿ ನೇಮಕ ಮಾಡಿಕೊಂಡಿದ್ದರು. ಇದು ನಮಗೆ ಹೆಮ್ಮೆಯ ಹಾಗೂ ■6ನೇ ಪುಟಕ್ಕೆ

ಸಂಗೀತ ಸಾಧಕ ಪಂಡಿತ್ ಎಂ.ವೆಂಕಟೇಶ್‌ಕುಮಾರ್ ಅವರಿಗೆ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ಪ್ರದಾನ



ಮುಖ್ಯಮಂತ್ರಿ ಸಿದ್ದರಾಮಯ್ಯ ಅರಮನೆ ಮುಂದಿನ ವೇದಿಕೆಯಲ್ಲಿ ಹಿಂದೂಸ್ತಾನಿ ಸಂಗೀತ ಸಾಧಕ ಪಂಡಿತ್ ಎಂ.ವೆಂಕಟೇಶ್ ಕುಮಾರ್ ಅವರಿಗೆ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ಪ್ರದಾನ ಮಾಡಿದರು.

ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮುಖ್ಯಮಂತ್ರಿ ಚಾಲನೆ

ಮೈಸೂರು, ಸೆ.22(ಎಸ್‌ಬಿಡಿ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿ, ಹಿಂದೂಸ್ತಾನಿ ಸಂಗೀತ ಸಾಧಕ ಪಂಡಿತ್ ಎಂ. ವೆಂಕಟೇಶ್ ಕುಮಾರ್ ಅವರಿಗೆ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ಪ್ರದಾನ ಮಾಡಿದರು.

ಅಂಬಾವಿಲಾಸ ಅರಮನೆಯ ವಿದ್ಯುತ್ ದೀಪಗಳು ಪ್ರಜ್ವಲಿಸುವ ಹೊತ್ತಿಗೆ ಇಲ್ಲಿನ ಭವ್ಯ ವೇದಿಕೆಯಲ್ಲಿ ದೀಪ ಬೆಳಗುವ ಮೂಲಕ ವೈವಿಧ್ಯಮಯ ಸಾಂಸ್ಕೃತಿಕ ವೈಭವಕ್ಕೆ ವಿಧ್ಯುಕ್ತವಾಗಿ ಚಾಲನೆ ನೀಡಿದ ಮುಖ್ಯಮಂತ್ರಿಗಳು, ಇತರ ಗಣ್ಯರೊಡಗೂಡಿ ಪಂಡಿತ್ ವೆಂಕಟೇಶ್ ಕುಮಾರ್ ಅವರಿಗೆ ಸ್ಮರಣಿಕೆ, 5 ಲಕ್ಷ ಗೌರವ ಮೊತ್ತ, ಪ್ರಶಸ್ತಿ ಫಲಕವನ್ನೊಳಗೊಂಡ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ಪ್ರದಾನ ಮಾಡಿ, ಮೈಸೂರು ಪೇಟ ತೊಡಿಸಿ ಅಭಿನಂದಿಸಿದರು.

ಈ ವೇಳೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ದಸರಾ ಆಚರಣೆ 400 ವರ್ಷಗಳಿಗೂ ಹಿಂದಿನಿಂದ ನಡೆದುಬಂದಿದೆ. ಮುಖ್ಯಮಂತ್ರಿಯಾಗಿ 8ನೇ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆತಿರುವುದು ನನ್ನ ಪುಣ್ಯ. ಪಂಡಿತ್ ಪುಟ್ಟರಾಜ ಗವಾಯಿ ಅವರ ಗರಡಿಯಲ್ಲಿ ಪಳಗಿರುವ ಎಂ.ವೆಂಕಟೇಶ್ ಕುಮಾರ್ ಅವರಿಗೆ ಈ ಬಾರಿಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಇವರಿಗೆ ಬಹಳ ವರ್ಷಗಳ ಹಿಂದೆಯೇ ಈ ಪ್ರಶಸ್ತಿ ದೊರಕಬೇಕಿತ್ತು. ತಡವಾಗಿಯಾದರೂ ಸಂದಿರುವುದು ಸಂತೋಷ ತಂದಿದೆ. ಶ್ರದ್ಧೆ, ಏಕಾಗ್ರತೆ, ಪರಿಶ್ರಮ ■6ನೇ ಪುಟಕ್ಕೆ

ಶಾಸಕ ಶ್ರೀವತ್ಸ ಮನವಿಗೆ ಸಿಎಂ ಸಮ್ಮತಿ


ಶಾಸಕ ಶ್ರೀವತ್ಸ ತಮ್ಮ ಭಾಷಣದ ವೇಳೆ, ಸಂಗೀತ ಕಲಾನಿಧಿ ಮೈಸೂರಿನ ವಾಸುದೇವಾಚಾರ್ಯರು ಕರ್ನಾಟಕ ಸಂಗೀತದಲ್ಲಿ ಇನ್ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಪಿಟೀಲು ಚೌಡಯ್ಯನವರ ಸಮಕಾಲೀನರಾಗಿದ್ದ ಅವರು ಜಯಚಾಮರಾಜೇಂದ್ರ ಒಡೆಯರ್ ಅವರಿಗೂ ಸಂಗೀತ ಗುರುಗಳಾಗಿದ್ದರು. ಅಭಿನವ ತ್ಯಾಗರಾಜ ಎನಿಸಿಕೊಂಡಿದ್ದ ವಾಗ್ಗೇಯಕಾರ ವಾಸುದೇವಾಚಾರ್ಯರ ಜನ್ಮದಿನ ಅಥವಾ ಸಂಸ್ಮರಣೆ ದಿನದಂದು ಸರ್ಕಾರದಿಂದ ಕಾರ್ಯಕ್ರಮ ನಡೆಸುವಂತೆ ಕೋರಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಪತ್ರ ನೀಡಿದರು. ಅದನ್ನು ಓದಿದ ಮುಖ್ಯಮಂತ್ರಿಗಳು, ತಾವು ಮಾತನಾಡುವಾಗ ವಿದ್ವಾನ್ ವಾಸುದೇವಾಚಾರ್ಯರ ಜನ್ಮದಿನ ಅಥವಾ ಕಾಲವಾದ ದಿನದಲ್ಲಿ ಯಾವುದು ಸೂಕ್ತ ಎಂದು ನಿರ್ಧರಿಸಿ, ಅವರ ಹೆಸರಿನಲ್ಲಿ ಕಾರ್ಯಕ್ರಮ ಮಾಡೋಣ ಎಂದು ಭರವಸೆ ನೀಡಿದರು.

ಮೈಸೂರು ಅರಮನೆಯಲ್ಲಿ ಸಾಂಪ್ರದಾಯಿಕ ಧಾರ್ಮಿಕ ಆಚರಣೆಗಳು ಆರಂಭ

ಗತವೈಭವ ಬಿಂಬಿಸುವ ಖಾಸಗಿ ದರ್ಬಾರ್

ಮೈಸೂರು, ಸೆ.22(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಮೈಸೂರು ಅರಮನೆಯ ದರ್ಬಾರ್ ಹಾಲ್‌ನಲ್ಲಿ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸೋಮವಾರ ರತ್ನ ಖಚಿತ ಸಿಂಹಾಸನವೇರಿ ಖಾಸಗಿ ದರ್ಬಾರ್ ಆರಂಭಿಸಿ, ಯದುವಂಶದ ಆಳ್ವಿಕೆಯ ಗತವೈಭವ ಮೆರೆದರು.

ನವರಾತ್ರಿ ಪೂಜಾ ಮಹೋತ್ಸವದಲ್ಲಿ ರಾಜವಂಶಸ್ಥರು ಅರಮನೆಯಲ್ಲಿ ನಡೆಸುವ ಸಾಂಪ್ರದಾಯಿಕ ಧಾರ್ಮಿಕ ಕಾರ್ಯದಲ್ಲಿ ಖಾಸಗಿ ದರ್ಬಾರ್‌ಗೆ ಮಹತ್ವವಿದ್ದು, ರಾಜರ ಆಳ್ವಿಕೆ ಕಾಲದ ಆಚರಣೆಯನ್ನು ಪ್ರತಿಬಿಂಬಿಸಲಿದೆ. ಈ ಹಿನ್ನೆಲೆಯಲ್ಲಿ ಇಂದಿನಿಂದ ಆರಂಭವಾದ ಖಾಸಗಿ ದರ್ಬಾರ್ ಆಯುಧಪೂಜೆವರೆಗೂ ಪ್ರತಿದಿನ ಸಂಜೆ ನಡೆಯಲಿದೆ. ಅರಮನೆಯ ದರ್ಬಾರ್ ಹಾಲ್ ಹಾಗೂ ಕನ್ನಡಿ ತೊಟ್ಟಿ ಸೇರಿದಂತೆ ವಿವಿಧೆಡೆ ನಡೆದ ಧಾರ್ಮಿಕ ಕಾರ್ಯದಲ್ಲಿ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್, ಆದ್ಯವೀರ್ ನರಸಿಂಹರಾಜ ಒಡೆಯರ್, ಯುಗಾಧ್ಯಕ್ಷ ಕೃಷ್ಣರಾಜ ಒಡೆಯರ್ ಪಾಲ್ಗೊಂಡರು.



ಖಾಸಗಿ ದರ್ಬಾರ್ ಮುಗಿಸಿದ ಬಳಿಕ ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರಿಗೆ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ನಮಿಸುತ್ತಿರುವುದು.

ವಿಜೃಂಭಣೆಯ ಖಾಸಗಿ ದರ್ಬಾರ್: ನವರಾತ್ರಿ ಮೊದಲ ದಿನವಾದ ಇಂದು ಅರಮನೆಯಲ್ಲಿ ಮುಂಜಾನೆ 4.30ಕ್ಕೆ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಎಣ್ಣೆಶಾಸ್ತ್ರ, ಬೆಳಗ್ಗೆ 5.30ರಿಂದ 5.45ರೊಳಗೆ ದರ್ಬಾರ್ ಹಾಲ್‌ನಲ್ಲಿದ್ದ ಸಿಂಹಾಸನಕ್ಕೆ ಸಿಂಹ(ಸಿಂಹದ ತಲೆ) ಜೋಡಣೆ, ಬಳಿಕ ಅರಮನೆಯ ಚಾಮುಂಡಿ ತೊಟ್ಟಿಯಲ್ಲಿ ಬೆಳಗ್ಗೆ 9.55ರಿಂದ 10.15ರೊಳಗೆ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ, ವಾಣಿ ವಿಲಾಸ ದೇವರ ಮನೆಯಲ್ಲಿ ತ್ರಿಷಿಕಾ ಕುಮಾರಿ ಒಡೆಯರ್ ಅವರಿಗೆ ಕಂಕಣಧಾರಣೆ ಮಾಡಲಾಯಿತು. ಬಳಿಕ ಯದುವೀರ್ ಗಣಪತಿ, ಕುಲದೇವತೆ ಶ್ರೀ ಚಾಮುಂಡೇಶ್ವರಿ, ವಿಷ್ಣು, ಶಿವ, ದಿಕ್ಪಾಲಕರು, ನವಗ್ರಹಗಳ ದರ್ಶನ ಪಡೆದರು. ಪೂಜಾ ಕಾರ್ಯದ ನಂತರ ಬೆಳಗ್ಗೆ 11.45ಕ್ಕೆ ಪಟ್ಟದ ಆನೆಗಳಾದ ಶ್ರೀಕಂಠ, ಪಟ್ಟದ ನಿಶಾನೆ ಆನೆ ಏಕಲವ್ಯ, ಪಟ್ಟದ ಕುದುರೆ, ಪಟ್ಟದ ಹಸು, ಒಂಟೆ, ಸವಾರಿ ತೊಟ್ಟಿಗೆ ಕರೆತರಲಾಯಿತು. ಅರಮನೆಯ ಆವರಣದಲ್ಲಿರುವ ಶ್ರೀ ಕೋಡಿ ಸೋಮೇಶ್ವರ ದೇವಾಲಯದ ಕಳಸದೊಂದಿಗೆ ದೇವರನ್ನು ತರಲಾಯಿತು. ಪಟ್ಟದ ಆನೆ, ಕುದುರೆ, ಹಸು ಸೇರಿದಂತೆ ಅರಮನೆಯ ಪುರೋಹಿತರು ಕಂಕಣ ಧರಿಸಿದ್ದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಹರಸಿದರು.

ಸವಾರಿ ತೊಟ್ಟಿಯಿಂದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ದರ್ಬಾರ್ ಹಾಲ್‌ಗೆ ಕಟ್ಟೆಗೆಯವರು, ಚೋಪ್ದಾರ್, ದೀವಟಿಗೆ ಹಾಗೂ ರಾಜಮನೆತನದವರು ಸಕಲ ಬಿರುದು ಬಾವಲಿಯೊಂದಿಗೆ ಬಹುಪರಾಕ್ ಹಾಕಿ ದರ್ಬಾರ್ ಹಾಲ್‌ಗೆ ಕರೆತಂದರು. ಸಿಂಹಾಸನಾರೋಹಣಕ್ಕೂ ಮುನ್ನ ಕಳಸ, ಸಿಂಹಾಸನ ಪೂಜೆ ಜರುಗಿತು. ಸಿಂಹಾಸನದ ಸಮೀಪವೇ ನಡೆದ ಕಳಸ ಪೂಜೆಯಲ್ಲಿ ಯದುವೀರ್ ವಿಧಿ ವಿಧಾನದಂತೆ ಪೂಜೆ ನೆರವೇರಿಸಿದರು. ನಂತರ ಸಿಂಹಾಸನಕ್ಕೆ ಮೂರು ಸುತ್ತು ಪ್ರದಕ್ಷಿಣೆ, ಸಿಂಹಾಸನಕ್ಕೆ ಜೋಡಿಸಲಾಗಿದ್ದ ಸಿಂಹಕ್ಕೆ ಪೂಜೆ ಸಲ್ಲಿಸಿದರು. ಮಧ್ಯಾಹ್ನ 12.42ರಿಂದ 12.58ರ ನಡುವೆ ಶುಭಲಗ್ನದಲ್ಲಿ ರತ್ನ ಖಚಿತ ಸಿಂಹಾಸನವೇರಿದರು. ನಂತರ ಯದುವೀರ್‌ಗೆ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಾಲಯ, ಪರಕಾಲ ಮಠ, ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ದೇವಾಲಯ, ಉತ್ತನಹಳ್ಳಿ ತ್ರಿಪುರಸುಂದರಿ ಜ್ವಾಲಾಮುಖಿ ದೇವಾಲಯ, ಶ್ರೀರಂಗಪಟ್ಟಣದ ಶ್ರೀರಂಗನಾಥೇಶ್ವರ ದೇವಾಲಯ, ಮೇಲುಕೋಟೆಯ ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯ, ಅರಮನೆಯ ಆವರಣದಲ್ಲಿರುವ ಎಲ್ಲಾ ದೇವಾಲಯಗಳು ಸೇರಿದಂತೆ ಸುಮಾರು 23 ದೇವಾಲಯಗಳಿಂದ ತಂದಿದ್ದ ತೀರ್ಥ–ಪ್ರಸಾದವನ್ನು ನೀಡಿ, ಶುಭ ಕೋರಿದರು.

ಎಲ್ಲಾ ದೇವಾಲಯಗಳಿಂದ ಆಗಮಿಸಿದ್ದ ಅರ್ಚಕರಿಂದ ಪ್ರಸಾದ ವಿನಿಯೋಗ ವಾದ ಬಳಿಕ ಸಿಂಹಾಸನದ ಮುಂದೆ ಪರದೆಯನ್ನು ಬಿಟ್ಟು ಯದುವೀರ ಅವರಿಗೆ ದೃಷ್ಟಿ ತೆಗೆಯಲಾಯಿತು. ನಂತರ ಯದುವೀರ್ ಅವರು ■6ನೇ ಪುಟಕ್ಕೆ



ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಅರಮನೆಯ ದರ್ಬಾರ್ ಹಾಲ್‌ನಲ್ಲಿ ಸೋಮವಾರ ಆರಂಭವಾದ ಖಾಸಗಿ ದರ್ಬಾರ್‌ನಲ್ಲಿ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ರತ್ನಖಚಿತ ಸಿಂಹಾಸನದಲ್ಲಿ ನಿಂತು ವಂದನೆ ಸ್ವೀಕರಿಸಿದರು.

ಮೈಸೂರು ಜಿಲ್ಲೆಯಲ್ಲಿ ಜಾತಿಗಣತಿ ಆರಂಭ



ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗವು ರಾಜ್ಯಾದ್ಯಂತ ನಡೆಸುತ್ತಿರುವ ಸಾಮಾಜಿಕ-ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯು ಮೈಸೂರು ಜಿಲ್ಲೆಯಲ್ಲಿ ಸೋಮವಾರದಿಂದ ಆರಂಭವಾಯಿತು.

ಮೈಸೂರು, ಸೆ.22(ಆರ್‌ಕೆ)– ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗವು ರಾಜ್ಯಾದ್ಯಂತ ನಡೆಸುತ್ತಿರುವ ಸಾಮಾಜಿಕ-ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯು ಮೈಸೂರು ಜಿಲ್ಲೆಯಲ್ಲಿ ಸೋಮವಾರದಿಂದ ಆರಂಭವಾಗಿದೆ.

ಮೈಸೂರು ನಗರ ಸೇರಿದಂತೆ ಜಿಲ್ಲೆಯ 10,12,817 ಮನೆಗಳಿಗೆ ಯುಹೆಚ್ ಐಡಿ(ಯೂನಿಕ್ ಹೌಸ್ ಹೋಲ್ಡ್ ಐಡಿ) ನೀಡಲಾಗಿದ್ದು, ಅವುಗಳನ್ನು 5,143 ಬ್ಲಾಕ್‌ಗಳಾಗಿ ವಿಂಗಡಣೆ(ಒಂದು ಬ್ಲಾಕ್ ಸುಮಾರು 150 ಮನೆಗಳು) ಮಾಡಲಾಗಿದೆ. ಒಂದೊಂದು ಬ್ಲಾಕ್‌ಗೆ ಒಬ್ಬರು ಗಣತಿದಾರರನ್ನು ನಿಯೋಜನೆ ಮಾಡಿದ್ದು, ಸಾಕಷ್ಟು ಚರ್ಚೆಗೆ ಗ್ರಾಸವಾಗಿದ್ದ ಸಮೀಕ್ಷೆ ಕಾರ್ಯ ಅಂತೂ ಆರಂಭವಾಗಿದೆ.

ಈಗಾಗಲೇ ಜಿಲ್ಲೆಯಲ್ಲಿ ಸಮೀಕ್ಷೆಗಾಗಿ ನಿಯೋಜಿಸಲಾದ ಮೇಲ್ವಿಚಾರಕರು ಮತ್ತು ಗಣತಿದಾರರಿಗೆ ತಲಾ ಒಂದೊಂದು ಸರ್ವೆ ಕಿಟ್ ನೀಡಲಾಯಿತು. ಈ ಕಿಟ್ ಸ್ವಯಂ ಘೋಷಣೆ ನಮೂನೆ, ಗುರುತಿನ ಚೀಟಿ ಮತ್ತು ಒಂದು ಬ್ಯಾಗ್ ಅನ್ನು ಒಳಗೊಂಡಿದೆ ಎಂದು ಸಮಿತಿಯ ಸದಸ್ಯ ಕಾರ್ಯದರ್ಶಿ ರಾಘವೇಂದ್ರ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ರಾಜ್ಯ ಸರ್ಕಾರದಿಂದ ಕೆಲವು ಸಲಹೆಗಳನ್ನು ಸೇರಿಸಿದ ನಂತರ ಸಮೀಕ್ಷೆ ನಡೆಸಲು ಹಿಂದುಳಿದ ವರ್ಗಗಳ ಆಯೋಗವು ಪರಿಷ್ಕೃತ ಅಪ್ಲಿಕೇಶನ್(ಆ್ಯಪ್) ಅನ್ನು ಬಿಡುಗಡೆ ಮಾಡಿದ್ದು, ಈ ಸಮೀಕ್ಷೆಯನ್ನು ನಡೆಸುವಾಗ ಮಾತ್ರ ಸಿಬ್ಬಂದಿ ಈ ಅಪ್ಲಿಕೇಶನ್ ಅನ್ನು ಬಳಸುತ್ತಾರೆ.

ಸಮೀಕ್ಷಾ ಸಿಬ್ಬಂದಿ ತಮಗೆ ಹಂಚಿಕೆಯಾದ ಪ್ರತಿಯೊಂದು ಮನೆಗೆ ಭೇಟಿ ನೀಡಿ, ನಿವಾಸಿಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ದತ್ತಾಂಶದ ಕುರಿತು ಆ್ಯಪ್‌ನಲ್ಲಿ ಒದಗಿಸಲಾದ 60–ಅಂಶಗಳ ಪ್ರಶ್ನಾವಳಿಯನ್ನು ಬಳಸಿಕೊಂಡು ಡೇಟಾವನ್ನು ಸಂಗ್ರಹಿಸಬೇಕಾಗುತ್ತದೆ. ಸಿಬ್ಬಂದಿ ತಮಗೆ ಹಂಚಿಕೆಯಾದ ಎಲ್ಲಾ ಮನೆಗಳಿಗೆ ಭೇಟಿ ನೀಡಿದ್ದಾರೆ ಎಂದು ತೋರಿಸಲು ಆಯೋಗವು ನೀಡಿದ ಸ್ವಯಂ ಘೋಷಣೆ ನಮೂನೆಯನ್ನು ಸಹ ಸಲ್ಲಿಸಬೇಕು. ಮೈಸೂರು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತ್ ರೆಡ್ಡಿ ನೇತೃತ್ವದ ಜಿಲ್ಲಾ ಸಮನ್ವಯ ಸಮಿತಿಯು ಸಮೀಕ್ಷೆಯನ್ನು ನಡೆಸುತ್ತಿದೆ ಎಂದರು.

ಜಾತಿಗಣತಿ ಭವಿಷ್ಯ ಇಂದು ಹೈಕೋರ್ಟ್ ನಿರ್ಧಾರ

• ಬ್ರಾಹ್ಮಣ ಸಭಾ, ಒಕ್ಕಲಿಗರ ಸಂಘ, ವೀರಶೈವ ಲಿಂಗಾಯತ ಮಹಾಸಭಾ ರಿಟ್ ಅರ್ಜಿಗಳ ವಿಚಾರಣೆ • ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠ ವಿಚಾರಣೆ



ಬೆಂಗಳೂರು, ಸೆ.22(ಕೆಎಂಶಿ)–ರಾಜ್ಯ ಸರ್ಕಾರ ಕೈಗೆತ್ತಿಕೊಂಡಿರುವ ಜಾತಿ ಗಣತಿ ಸಮೀಕ್ಷೆಯ ಭವಿಷ್ಯವನ್ನು ಕರ್ನಾಟಕ ಹೈಕೋರ್ಟ್ ನಾಳೆ ನಿರ್ಧರಿಸಲಿದೆ.

ಅಖಿಲ ಕರ್ನಾಟಕ ಬ್ರಾಹ್ಮಣ ಸಭಾ, ರಾಜ್ಯ ಒಕ್ಕಲಿಗರ ಸಂಘ ಹಾಗೂ ವೀರ ಶೈವ–ಲಿಂಗಾಯತ ಮಹಾಸಭಾ ಜಾತಿ ಗಣತಿ ಪ್ರಶ್ನಿಸಿ ಸಲ್ಲಿಸಿದ್ದ ಪ್ರತ್ಯೇಕ ರಿಟ್ ಅರ್ಜಿಗಳ ವಿಚಾರಣೆ ಕೈಗೆತ್ತಿಕೊಂಡ ಮುಖ್ಯನ್ಯಾಯಮೂರ್ತಿ ವಿಭು ಬಖ್ರು ಹಾಗೂ ನ್ಯಾಯಮೂರ್ತಿ ಸಿ.ಎಂ.ಜೋಷಿ ಅವರನ್ನು ಒಳಗೊಂಡ ನ್ಯಾಯಪೀಠ ಇಂದು ವಾದ–ಪ್ರತಿವಾದ ಆಲಿಸಿ, ವಿಚಾರಣೆಯನ್ನು ನಾಳೆಗೆ ಮುಂದೂಡಿದೆ.

ಸಮೀಕ್ಷಾ ಕಾರ್ಯ ತಡೆಹಿಡಿಯಲು ಮಧ್ಯಂತರ ಆದೇಶ ನೀಡುವಂತೆ ಅರ್ಜಿದಾರರ ಪರ ವಕೀಲರು ವಾದ ಮಂಡಿಸಿದರು. ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ ಸರ್ಕಾರದ ಪರ ವಕೀಲ ಅಭಿಷೇಕ್ ಮನುಸಿಂಘ್ವಿ ವಾದ ಮಂಡಿಸಿ, ಇದೇ ರೀತಿ ಪ್ರಕರಣದಲ್ಲಿ ಈ ಹಿಂದೆಯೂ ಮಧ್ಯಂತರ ತಡೆ ನೀಡಿಲ್ಲ.

ಕರ್ನಾಟಕ ಸರ್ಕಾರ ಜನಗಣತಿ ಮಾಡುತ್ತಿಲ್ಲ, ಕೇವಲ ಸರ್ವೆ ಮಾಡುತ್ತಿದೆ. ಆದ್ದರಿಂದ ಯಾವುದೇ ಮಧ್ಯಂತರ ತಡೆ ನೀಡದಂತೆ ಮನವಿ ಮಾಡಿದರು.

ಅಂಕಿ–ಅಂಶ ಸಂಗ್ರಹಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ. ಸಮೀಕ್ಷೆ ಮೂಲಕ ವಿವರ ಪಡೆಯಲಾಗುತ್ತಿದೆ. ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿ ಮಾಹಿತಿಯನ್ನಷ್ಟೇ ಪಡೆಯಲಾಗುತ್ತಿದೆ. 2014ರಲ್ಲಿ ನಡೆದ ಅಂಕಿ–ಅಂಶಗಳನ್ನು ಕೈಬಿಟ್ಟಿಲ್ಲ, ಅದನ್ನು ಇಂದಿನ ಕಾಲಮಾನಕ್ಕೆ ಹೊಂದಿಸಲಾಗುತ್ತಿದೆ.

ಈ ಸಮೀಕ್ಷೆಗೆ 420 ಕೋಟಿ ರೂ. ವೆಚ್ಚ ಮಾಡಿ ಶಿಕ್ಷಕರು ಮತ್ತು ಆಶಾ ಕಾರ್ಯಕರ್ತೆಯರ ಮೂಲಕ ನಡೆಸುತ್ತಿದ್ದು, ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಅಂಕಿ–ಅಂಶಗಳನ್ನು ಸಂಗ್ರಹಿಸಲಾಗುತ್ತಿದೆ ಎಂದರು.

ಮಧ್ಯಪ್ರವೇಶಿಸಿದ ಮುಖ್ಯ ನ್ಯಾಯಮೂರ್ತಿ, ಅರ್ಜಿದಾರರ ವಾದದಲ್ಲಿ ಹುರುಳಿರುವಂತಿದೆ, ಸಮೀಕ್ಷೆ ಮುಂದೂಡಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ಸಿಂಘ್ವಿ, ದಸರಾ ಬಳಿಕ ಅಂತಿಮ ವಿಚಾರಣೆ ನಡೆಸಬಹುದು, ಈಗ ಮಧ್ಯಂತರ ತಡೆ ಬೇಕಿಲ್ಲ ಎಂದು ಬಲವಾಗಿ ವಾದಿಸಿದರು.

ಸಮೀಕ್ಷೆಗೆ ಅವಕಾಶ ನೀಡಿದರೆ ಅಂಕಿ–ಅಂಶ ಸಂಗ್ರಹವಾಗುತ್ತದೆ, ಅಲ್ಲವೇ ಎಂಬುದಾಗಿ ನ್ಯಾಯಪೀಠ ಪ್ರಶ್ನಿಸಿತು.

ಒಮ್ಮೆ ಅಂಕಿ–ಅಂಶ ಸಂಗ್ರಹವಾದರೆ, ಮರಳಿಸಲು ಸಾಧ್ಯವಿಲ್ಲ ಎಂಬುದಾಗಿ ಪೀಠ ಅಭಿಪ್ರಾಯ ವ್ಯಕ್ತಪಡಿಸಿದಾಗ, ಮಧ್ಯಪ್ರವೇಶಿಸಿದ ಕೇಂದ್ರ ಸರ್ಕಾರದ ಎಎಸ್‌ಜಿ ಅರವಿಂದ ಕಾಮತ್, ಕರ್ನಾಟಕ ಸರ್ಕಾರದ ನಡೆಯನ್ನು ತೀವ್ರವಾಗಿ ವಿರೋಧಿಸಿದರಲ್ಲದೆ, ಅಂಕಿ–ಅಂಶ ಸಂಗ್ರಹ ಸಮೀಕ್ಷೆ ಸಹ ಜಾತಿಗಣತಿ ಸ್ವರೂಪದಲ್ಲೇ ಇದೆ ಎಂದು ವಾದ ಮಂಡಿಸಿದರು.

ಇದಕ್ಕೂ ಮುನ್ನ ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ಪ್ರಭುಲಿಂಗ ನಾವಡಗಿ, ಜಯಕುಮಾರ್ ಎಸ್. ಪಾಟೀಲ್, ಅಶೋಕ್ ಹಾರ್ನಳ್ಳಿ, ವಿವೇಕ್ ರೆಡ್ಡಿ, ರಾಜ್ಯ ಸರ್ಕಾರ ಕೈಗೊಂಡಿರುವ ಸಮೀಕ್ಷೆ ಸಂವಿಧಾನ ವಿಧಿ 342ಎ(3)ಗೆ ವಿರುದ್ಧವಾಗಿದೆ.

ಹಿಂದುಳಿದ ವರ್ಗಗಳ ಆಯೋಗದ ಹಿಂದಿನ ವರದಿ ಪರಿಗಣಿಸದೆ, ಹೊಸ ಪ್ರಕ್ರಿಯೆ ಮೂಲಕ ಜಾತಿ ಗಣತಿಯ ಅಂಕಿ–ಅಂಶಗಳನ್ನು ಆಧಾರ್‌ಗೆ ಲಿಂಕ್ ಮಾಡಲಾಗುತ್ತಿದೆ, ಜಿಯೋ ಟ್ಯಾಗಿಂಗ್ ಮಾಡಿ ಆಧಾರ್‌ಗೆ ಲಿಂಕ್ ಮಾಡುವುದು ಕಾನೂನುಬಾಹಿರ ಎಂದು ವಾದಿಸಿದರು.

ರಾಜ್ಯದ ಜನರ ಸ್ಥಿತಿಗತಿ ಪರಿಶೀಲನೆ ಹಿಂದುಳಿದ ವರ್ಗಗಳ ಆಯೋಗದ ಕರ್ತವ್ಯವಲ್ಲ, ಸರ್ಕಾರ ರಾಜಕೀಯ ಉದ್ದೇಶದಿಂದ ಇಂತಹ ಗಣತಿ ಕಾರ್ಯ ನಡೆಸುತ್ತಿದೆ ಎಂದರು.

ಇನ್ಫೋಸಿಸ್ ಮುಖ್ಯಸ್ಥೆ ಸುಧಾಮೂರ್ತಿಗೆ ಸೈಬರ್ ವಂಚನೆಗೆ ಯತ್ನ

ಬೆಂಗಳೂರು: ಇನ್ಫೋಸಿಸ್ ಮುಖ್ಯಸ್ಥೆ ಹಾಗೂ ರಾಜ್ಯಸಭೆ ಸದಸ್ಯೆ ಸುಧಾಮೂರ್ತಿ ಅವರಿಗೆ ಸೈಬರ್ ವಂಚನೆಗೆ ಯತ್ನಿಸಿದ್ದು, ಬೆಂಗಳೂರು ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೆ.5 ರಂದು ಸುಧಾಮೂರ್ತಿ ಅವರಿಗೆ ಅಪರಿಚಿತ ವ್ಯಕ್ತಿಯೊಬ್ಬ ಕರೆ ಮಾಡಿ, ದೂರ ಸಂಪರ್ಕ ಸಚಿವಾಲಯದ ಉದ್ಯೋಗಿ ಎಂದು ಹೇಳಿಕೊಂಡಿದ್ದ. ಬಳಿಕ ನಿಮ್ಮ ಮೊಬೈಲ್ ನಂಬರ್ ಅನ್ನು ಆಧಾರ್‌ಗೆ ಲಿಂಕ್ ಮಾಡದೆ ನೋಂದಾಯಿಸಲಾಗಿದೆ. ಹಾಗಾಗಿ ವೈಯಕ್ತಿಕ ಮಾಹಿತಿ ನೀಡಿ ಎಂದು ಮಾಹಿತಿ ಕೇಳಿದ್ದ. ಅಲ್ಲದೇ ನಿಮ್ಮ ನಂಬರ್‌ನಿಂದ ಅಶ್ಲೀಲ ವೀಡಿಯೋ ಕಳುಹಿಸಲಾಗುತ್ತಿದೆ. ಅದನ್ನು ನಾನು ನಿಲ್ಲಿಸಿದ್ದೇನೆ ಎಂದೆಲ್ಲ ಹೇಳಿದ್ದ.

ಈ ವೇಳೆ ಅನುಮಾನಗೊಂಡ ಸುಧಾಮೂರ್ತಿ ಅವರು, ಕರೆ ಬಂದಿದ್ದ ನಂಬರ್ ಅನ್ನು ಟ್ರೂಕಾಲರ್ ಮೂಲಕ ಪರಿಶೀಲಿಸಿದ್ದರು. ಈ ವೇಳೆ ಟ್ರೂಕಾಲರ್‌ನಲ್ಲಿ ಟೆಲಿಕಾಂ ಡಿಪಾರ್ಟ್ಮೆಂಟ್ ಎಂದು ಬಂದಿತ್ತು. ಇದರಿಂದ ಎಚ್ಚೆತ್ತುಕೊಂಡ ಅವರು ಸೈಬರ್ ವಂಚಕರ ಟ್ರ್ಯಾಪ್‌ಗೆ ಒಳಗಾಗದೆ ಬೆಂಗಳೂರು ಸೈಬರ್ ಕ್ರೈಂ ಪೊಲೀಸ್ ವಂಚಕನ ವಿರುದ್ಧ ಠಾಣೆಗೆ ದೂರು ನೀಡಿದ್ದಾರೆ.

ಸರ್ವ ಸದಸ್ಯರ ವಾರ್ಷಿಕ ಮಹಾಸಭೆ...



ಕರ್ನಾಟಕ ರಾಜ್ಯ ಲಿಕ್ಕರ್ ಮರ್ಚೆಂಟ್ಸ್ ಡೆವಲಪ್‌ಮೆಂಟ್ ಕೋ–ಆಪರೇಟಿವ್ ಸೊಸೈಟಿಯ ಮೈಸೂರು ಶಾಖೆಯ 6ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಸಂಸ್ಥಾಪಕ ಅಧ್ಯಕ್ಷ ಎಸ್.ಚಂದ್ರಶೇಖರ್ ಉದ್ಘಾಟಿಸಿದರು. ಈ ವೇಳೆ ಸೊಸೈಟಿ ಉಪಾಧ್ಯಕ್ಷ ಎಂ.ಸಿ.ದೊಡ್ಡನಾಯಕ, ನಿರ್ದೇಶಕರಾದ ರಾಜಶೇಖರ ಕದಂಬ, ಕೆ.ಹನುಮಂತೇಗೌಡ, ಚೆನ್ನಕೇಶವ, ಪ್ರವೀಣ್‌ಕುಮಾರ್, ಎಂ.ಡಿ.ಪ್ರದೀಪ್, ಹೆಚ್.ಆರ್.ಮೂರ್ತಿ, ಜಿ.ಎನ್.ಮಂಜುನಾಥ್, ಆರ್.ರಮೇಶ್, ಯು.ಎಸ್.ರಮೇಶ್, ಆಶಾ ವಿ.ಆರ್., ಶಾಲಿನಿ, ಬಿ.ಎಸ್.ರಾಮಾರಾಧ್ಯ, ಲೋಕೇಶ್‌ಶೆಟ್ಟಿ, ಎನ್.ಮಂಜುನಾಥ್, ಗೋವಿಂದರಾಜು, ಕೃಷ್ಣಪ್ಪ ಇನ್ನಿತರರು ಉಪಸ್ಥಿತರಿದ್ದರು.

ಸಂಭ್ರಮಾಚರಣೆ...



ಪ್ರಧಾನಿ ನರೇಂದ್ರ ಮೋದಿ ಅವರು ತೆರಿಗೆ ಇಳಿಕೆ ನಿರ್ಧಾರ ಕೈಗೊಂಡ ಹಿನ್ನೆಲೆಯಲ್ಲಿ ಮೈಸೂರು ನಗರ ಬಿಜೆಪಿ ವತಿಯಿಂದ ನಗರ ಅಧ್ಯಕ್ಷ ಎಲ್.ನಾಗೇಂದ್ರ ನೇತೃತ್ವದಲ್ಲಿ ಶಿವರಾಮಪೇಟೆಯ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಸಂಭ್ರಮಿಸಲಾಯಿತು. ಈ ವೇಳೆ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಮುಖಂಡರಾದ ಬಿ.ಎಂ.ರಘು, ಪಾಲಿಕೆ ಮಾಜಿ ಸದಸ್ಯರಾದ ಗುರುವಿನಾಯಕ, ಎಂ.ಯು.ಸುಬ್ಬಯ್ಯ ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ದಿನೇಶ್‌ಗೌಡ, ಮಂಚೇಗೌಡನ ಕೊಪ್ಪಲು ಪುನೀತ್ ಗೌಡ, ಮಹೇಶ್, ಅನಿಲ್, ಚಿಕ್ಕವೆಂಕಟು, ಕೇಬಲ್ ವೆಂಕಟೇಶ, ಗೋಕುಲ್ ಗೋವರ್ಧನ್, ದೇವರಾಜು, ಹೇಮಾ ನಂದೀಶ್, ಎಸ್‌ಸಿ ಮೋರ್ಚಾದ ಸ್ವಾಮಿ ಹರೀಶ್, ಕಾರ್ತಿಕ್ ಮರಿಯಪ್ಪ ಉಪೇಂದ್ರ ಸ್ಮಾರ್ಟ್ ಮಂಜು, ಅಶೋಕ್, ಜಯಣ್ಣ, ಪಂಕಜ್, ಪ್ರಕಾಶ್ ಇನ್ನಿತರರಿದ್ದರು.

ಅಭಿನಂದನೆ...



ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್‌ನ ನೂತನ ಆಯುಕ್ತ ಎಸ್.ಜೆ.ಸೋಮಶೇಖರ್ ಅವರನ್ನು ಬೆಂಗಳೂರಲ್ಲಿ ಉದ್ಯಮಿ ಎಂ.ಕೆ.ಗೋವಿಂದ ರಾಜು, ವಿ.ಶ್ರೀನಿವಾಸಪ್ರಸಾದ್ ಅಭಿಮಾನಿ ಬಳಗದ ಸಂಚಾಲಕರಾದ ಭರತ್ ರಾಮಸ್ವಾಮಿ, ಪ್ರಧಾನ ಕಾರ್ಯದರ್ಶಿ ಡಿ.ವೆಂಕಟರಾಜು, ಬಿಬಿಎಂಪಿ ಎಡಿಎಲ್‌ಆರ್ ಮಂಜುನಾಥ್, ಶಿವಸ್ವಾಮಿ, ಗಿರೀಶ್ ಅಭಿನಂದಿಸಿದರು.

ಇಂದು ಮಕ್ಕಳ ದಸರಾ ಉದ್ಘಾಟನೆ



ಮೈಸೂರು,ಸೆ.22– ನಾಡಹಬ್ಬ ಮೈಸೂರು ದಸರಾ ಮಹೋತ್ಸವ–2025, ಮಹಿಳಾ ಮತ್ತು ಮಕ್ಕಳ ದಸರಾ ಉಪ ಸಮಿತಿಯ ವತಿಯಿಂದ ಮಕ್ಕಳ ದಸರಾ–2025 ಅನ್ನು ಸೆ.23ರಂದು ಬೆಳಗ್ಗೆ 9.30 ಗಂಟೆಗೆ ಸಾವಿರ ಮಕ್ಕಳಿಂದ ಮಕ್ಕಳ ದಸರಾ ಕಲಾಥಾನ್ ಮೆರವಣಿಗೆಯನ್ನು ವಿವಿಧ ವೇಷ ಭೂಷಣ ಹಾಗೂ ಕಲಾಪ್ರಕಾರಗಳೊಂದಿಗೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಅರಮನೆಯ ಆವರಣದಿಂದ ಕಲಾಮಂದಿರದವರೆಗೆ ಆಯೋಜಿಸಲಾಗಿದೆ. ಮಕ್ಕಳ ದಸರಾ ಉದ್ಘಾಟನಾ ಕಾರ್ಯಕ್ರಮವನ್ನು ಮಧ್ಯಾಹ್ನ 2 ಗಂಟೆಗೆ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ನಂತರ ಸೆ.24 ರಂದು ಬೆಳಗ್ಗೆ 9.30 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಸೆ.23ರಂದು ಮಧ್ಯಾಹ್ನ 2 ಗಂಟೆಗೆ ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಉಪಸ್ಥಿತಿಯಲ್ಲಿ, ಸಚಿವ ಮಧು ಬಂಗಾರಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಅನಿಲ್‌ಕುಮಾರ್.ಸಿ., ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ. ರಮೇಶ್ ಬಂಡಿ ಸಿದ್ದೇಗೌಡ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಗೌರವ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಒಡೆಯರ್, ಸುನೀಲ್ ಬೋಸ್ ಆಗಮಿಸಲಿದ್ದಾರೆ.

ನಿಧನ

ಮಲ್ಲಿಕಾರ್ಜುನಪ್ಪ (ಕಾಶಿ)



ಮೈಸೂರು,ಸೆ.22–ಗುಂಡ್ಲುಪೇಟೆ ತಾಲೂಕು ಬೊಮ್ಮನಹಳ್ಳಿ ಗ್ರಾಮದ ಮಲ್ಲಿಕಾರ್ಜುನಪ್ಪ (ಕಾಶಿ) (57) ಭಾನುವಾರ ಹೃದಯಾಘಾತದಿಂದ ನಿಧನರಾದರು. ಮೃತರು ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಪುರುಷರ ವಿದ್ಯಾರ್ಥಿನಿಲಯದಲ್ಲಿ 33 ವರ್ಷಗಳಿಂದ ಹೆಡ್‌ಕುಕ್ ಆಗಿದ್ದರು. ಮೃತರು ತಾಯಿ ಮಹದೇವಮ್ಮ, ಮಕ್ಕಳಾದ ಪ್ರಸನ್ನ, ರಕ್ಷಿತಾ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬೊಮ್ಮನಹಳ್ಳಿಯಲ್ಲಿರುವ ಅವರ ಜಮೀನಿನಲ್ಲಿ ಸೋಮವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ಆಡಳಿತ ಮಂಡಳಿ, ವಿದ್ಯಾರ್ಥಿನಿಲಯದ ಸಹೋದ್ಯೋಗಿಗಳು ಸಂತಾಪ ಸೂಚಿಸಿದ್ದಾರೆ.

ಜಗದೀಶ್‌ಗೌಡ



ಮೈಸೂರು ಜಯನಗರದ ಚಿಕ್ಕಹರದನಹಳ್ಳಿಯ ನಿವಾಸಿ ಜಗದೀಶ್‌ಗೌಡ(29) ಸೋಮವಾರ ನಿಧನರಾದರು.

ಮೃತರು ತಂದೆ ಕಾಳಿಕೃಷ್ಣ, ತಾಯಿ ಜಯ, ಸಹೋದರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಮಂಗಳವಾರ) ಮಧ್ಯಾಹ್ನ 12 ಗಂಟೆಗೆ ಕೆ.ಜಿ. ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.09.2025 ಮಂಗಳವಾರ, ಮಳೆ ನಕ್ಷತ್ರ: ಉತ್ತರಾ 14.09.2025ರಿಂದ 26.09.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯಣ, ಶರದೃತು ಋತು, ಅಶ್ವಿನಿ ಮಾಸ,
ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಹಸ್ತ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ದಸರಾ ಚಿಂತನ, 6.15 ದಸರಾ ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ದಸರಾದಲ್ಲಿ ಇಂದು ಮತ್ತು ನಾಳೆ ನಂತರ ಮೈಸೂರು ದಸರಾ ಕಾರ್ಯಕ್ರಮ. ಪ್ರಸ್ತುತಿ–ಶ್ರೀವಾನ್.ಎಸ್., 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ.ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್ ಎಸ್.ಎಸ್., 8.30 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು ನಾಟಕ ಕ್ಷೇತ್ರದಲ್ಲಿನ ಸಾಧನೆಗಾಗಿ ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಎನ್. ನಾಗಚಂದ್ರ ಅವರೊಂದಿಗೆ ಸಂವಾದ. ಪ್ರಸ್ತುತಿ–ಉಮೇಶ್ ಎಸ್.ಎಸ್., 9.00 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 9.30 ಮೈಸೂರು ಬ್ರಾಂಡ್ ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 9.40 ಮೈಸೂರು ಸಂಸ್ಥಾನದ ಕಲಾ ಪರಂಪರ ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಸಾಹಿತ್ಯ: ಡಾ.ಜ್ಯೋತಿಶಂಕರ್, ಪರಿಕಲ್ಪನೆ ಹಾಗೂ ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ.ಎಸ್. ಸುಬ್ಬಲಕ್ಷ್ಮಿ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ–ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ.ಜಿ. ಕವಿತಾ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ರಮಾ ರಾಮಕೃಷ್ಣ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಕೃತಿ ಹೆಚ್. ಆರ್., 4.00 ಕಥಾಕಾಲಕ್ಷೇಪ–ದಶಾವತಾರ, ಪ್ರಸ್ತುತಿ –ಸಂತ ಕೇಶವದಾಸರು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ್ಯ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಜಲ ವಿನ್ಯಾಸಗಳಲ್ಲಿ ಮೀನು ಕೃಷಿ ಕುರಿತು ಟಿ. ನರಸೀಪುರ ತಾಲೂಕು ಮೀನುಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ.ಬಿ. ಶ್ವೇತಾ ಅವರೊಂದಿಗೆ ಸಂದರ್ಶನ, ಸಂದರ್ಶಕರು – ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಅಲಿ ಅಕ್ಬರ್ ಖಾನ್–ಸರೋದ್ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಎಂ. ಬಿ. ಹರಿಹರನ್ ಮತ್ತು ಅಶೋಕ್–ದ್ವಂದ್ವ ಗಾಯನ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ. ಎ.ಎಸ್. ಶಂಕರನಾರಾಯಣ, 10.30 ಸವಿನೆನಪು

■ **ಶ್ರೀ ಸುಬ್ಬರಾಯ ದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ್ ಶ್ರೀ ಪ್ರಸನ್ನ, ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ. ಬೆಳಗ್ಗೆ ತುಳಸಿ ಅರ್ಚನೆ, ಸಾಯಂಕಾಲ ಉತ್ಸವ, ಮಹಾಮಂಗಳಾರತಿ, ಸ್ಥಳ ದೇವಸ್ಥಾನದ ಆವರಣ, ಕೃಷ್ಣವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾ ಶರನ್ನವರಾತ್ರೋತ್ಸವ–2025. ಬೆಳಗ್ಗೆ 9ಕ್ಕೆ ನವಗ್ರಹ, ಮೃತ್ಯುಂಜಯ ಹೋಮ, ಪುರುಷ ಸೂಕ್ತ ಹೋಮ, ಶ್ರೀ ಮಾಹೇಶ್ವರಿ (ವೃಷಭವಾಹಿನಾಲಂಕಾರ) ಅಲಂಕಾರ, ಸ್ಥಳ: ಅಭಿನವ ಶಂಕರಾಲಯ, ಪೋರ್ಟ್ ಮೊಹಲ್ಲಾ. ಬೆಳಗ್ಗೆಯಿಂದ.

■ **ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ–2025. ಬೆಳಗ್ಗೆ 9ಕ್ಕೆ ನವಗ್ರಹ, ಮೃತ್ಯುಂಜಯ ಹೋಮ, ಶ್ರೀ ಮಾಹೇಶ್ವರಿ (ವೃಷಭ), ಸ್ಥಳ: ದೇವಸ್ಥಾನದ ಪ್ರಾಂಗಣ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸಂಧಿವಾತ, ಶರದ್ ವಿರೇಚನ–ಪಂಚಕರ್ಮ ಚಿಕಿತ್ಸಾ ಶಿಬಿರ. ಬೊಜ್ಜು ನಿವಾರಣೆ, ಕುತ್ತಿಗೆ ನೋವು, ಭುಜದ ನೋವು ತಪಾಸಣಾ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ ಬೆಳಗ್ಗೆ 9ರಿಂದ.

■ **ಶಾರಾವಿ ಫೌಂಡೇಷನ್, ಭವೇದ್ ಆಯುರ್ವೇದ :** ಉಚಿತ ಆಯುರ್ವೇದ ತಪಾಸಣಾ, ಸಲಹಾ ಶಿಬಿರ, ಸ್ಥಳ: ಭವೇದ್, 434/ಎ, ಗೋಕುಲಂ 3ನೇ ಹಂತ, ಬೆಳಗ್ಗೆ 9 ರಿಂದ.

■ **ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಸ್ಕೂಲ್:** ಬಾಲೋದ್ಯಾನ ದಸರಾ, ದಸರಾ ಗೊಂಬೆಗಳ ಪ್ರದರ್ಶನ–2025. ಸ್ಥಳ: ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಸ್ಕೂಲ್, ಜಯನಗರ, ಬೆಳಗ್ಗೆ 9.30 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭಸಂಸ್ಕಾರ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಕಾರ್ಯಕ್ರಮ. ಬೆಳಗ್ಗೆ 9ರಿಂದ ಶ್ರೀ ದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರ ಪೂಜೆ, ನವಾವರಣ ಪೂಜೆ, ವಿದ್ವಾನ್ ಎ.ಎಸ್. ಮುರಳಿ ಅವರಿಂದ ಕರ್ನಾಟಕ ಸಂಗೀತ ಗಾಯನ, ಮಧ್ಯಾಹ್ನ 12ಕ್ಕೆ ಅನ್ನಾರ್ಚನೆ, ರಾಜರಾಜೇಶ್ವರಿ ಪೂಜೆ, ಹೋಮ ಪೂರ್ಣಾಹುತಿ, ಸಂಜೆ 4ಕ್ಕೆ ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6ಕ್ಕೆ ಶ್ರೀ ಸ್ವಾಮೀಜಿಯವರಿಂದ ದೇವಿ ಭಜನೆ ಮತ್ತು ಪ್ರವಚನ. ಸ್ಥಳ: ನಾದಮಂಟಪ, ಗಣಪತಿ ಸಚ್ಚಿದಾನಂದ ಆಶ್ರಮ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್.ರಾಘವೇಂದ್ರ ಅವರು ಕೈಯ್ಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ. ಸ್ಥಳ: ಇಂಚರ ಕಲಾಕ್ಷೇತ್ರ ಮಹದೇಶ್ವರ ನಗರ, ಬೆಳಗ್ಗೆ 10ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ಗಂಟೆಯಿಂದ.

■ **ಜೆಎಸ್‌ಎಸ್ ಮಹಿಳಾ ಕಾಲೇಜು :** ಸಾಫ್ಟ್ ಸ್ಕಿಲ್ಸ್ ಮತ್ತು ಉದ್ಯೋಗಾರ್ಹತೆ ಕುರಿತು ಕಾರ್ಯಾಗಾರ, ಉದ್ಘಾಟನೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಅಧ್ಯಕ್ಷತೆ: ಜೆಎಸ್‌ಎಸ್ ಯೂನಿವರ್ಸಿಟಿ ಕುಲಪತಿ ಡಾ.ಎ.ಎನ್. ಸಂತೋಷ್‌ಕುಮಾರ್, ಪ್ರಾಸ್ತಾವಿಕ ನುಡಿ: ಡಾ.ಎಂ.ಧರ್ಮಪ್ರಸಾದ್, ಸ್ಥಳ: ನವಜ್ಯೋತಿ ಸಭಾಂಗಣ, ಬೆಳಗ್ಗೆ 10.15ಕ್ಕೆ.

■ **ಶ್ರೀ ರಾಜೀವ್ ಸ್ನೇಹ ಬಳಗ, ವಿಪ್ರ ಮಹಿಳಾ ಸಂಗಮ, ಕೃಷ್ಣ ಕಾಲಿಂಗ್ ಚಾರಿಟಬಲ್ ಟ್ರಸ್ಟ್ :** ಮನೆ ಮನೆ ಗೊಂಬೆ ಸ್ಪರ್ಧೆ, ಸ್ಥಳ: ಟ್ರಸ್ಟ್ ಆವರಣ, ಬೆಳಗ್ಗೆ 11ರಿಂದ.

■ **ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್ :** ದಸರಾ ಕೇಕ್ ಶೋ, ಉದ್ಘಾಟನೆ : ಖ್ಯಾತ ಚಲನಚಿತ್ರ ನಟಿ ರಚಿತಾ ರಾಮ್, ಸ್ಥಳ: ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್, ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11ಕ್ಕೆ.

■ **ವ್ಯವಸ್ಥಾಪಕರು:** ಮೈಸೂರು ಮನೆ–ಮನೆ ದಸರಾ ಬೊಂಬೆ ಪ್ರದರ್ಶನ–2025. ಸ್ಥಳ: ಹೇಮಲತಾ ಕುಮಾರಸ್ವಾಮಿ ಅವರ ನಿವಾಸ, 567/3, 2ನೇ ರಾಮಚಂದ್ರ ಅಗ್ರಹಾರ, ಖಿಲ್ಲೆ ಮೊಹಲ್ಲಾ.

■ **ವಿವೇಕಾನಂದನಗರ ಬ್ರಾಹ್ಮಣ ಮಹಾಸಭಾ:** ಶರನ್ನವರಾತ್ರಿ, ಬೆಳಗ್ಗೆ ಶ್ರೀ ಗಾಯತ್ರೀ ದೇವಿ ವಿಶೇಷ ಪೂಜೆ, ಪ್ರಸಾದ ವಿನಿಯೋಗ, ಸಂಜೆ 7ರಿಂದ ಶ್ರೀಮತಿ ಕವಿತಾ ಧನಂಜಯ ಮತ್ತು ಸಂಗಡಿಗರಿಂದ ಭಕ್ತಿಗೀತೆಗಳು, ಸ್ಥಳ: ಶ್ರೀ ಶಂಕರ ಪ್ರಾರ್ಥನಾ ಮಂದಿರ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್:** 29ನೇ ವರ್ಷದ ಶರನ್ನವರಾತ್ರಿ ಮಹೋತ್ಸವ. ಬೆಳಗ್ಗೆ 8.30ಕ್ಕೆ ಮಹಾಭಿಷೇಕ, ಶ್ರೀಕೂಷ್ಮಾಂಡದೇವಿ, ಶ್ರೀ ವಿದ್ಯಾಶೂಲಿನಿದುರ್ಗಾ ಪೂಜಾ, ಸಪ್ತಶತಿ, ಸುಂದರಕಾಂಡ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಸಂಜೆ 5.30ಕ್ಕೆ ಶ್ರೀ ನವದುರ್ಗಾ ಹೋಮ ಮತ್ತು ಶ್ರೀ ಮಹಾಪ್ರತ್ಯಂಗೀರಾ ಹೋಮ, ಸ್ಥಳ: ಫೌಂಡೇಷನ್ ಆವರಣ, ಜಯಲಕ್ಷ್ಮೀಪುರಂ.

■ **ಶ್ರೀ ಶ್ರೀ ಆವನೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ :** ಶ್ರೀ ಶಾರದಾ ಶರನ್ನವರಾತ್ರಿ ಮಹೋತ್ಸವ, ಶೈಲಪುತ್ರಿ ಅಲಂಕಾರ, ಬೆಳಗ್ಗೆ 9ಕ್ಕೆ ಶ್ರೀ ಲಕ್ಷ್ಮೀನಾರಾಯಣ ಹೃದಯ ಹೋಮ, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಶ್ರೀ ಧಾತ್ರಿ ಮಹಿಳಾ ಕೇಂದ್ರದಿಂದ ಭಜನೆ, ಸ್ಥಳ: ಶ್ರೀ ಆವನೀ ಶೃಂಗೇರಿ ಮಠ, ಮೈಸೂರು ಶಾಖೆ, ವಿದ್ಯಾರಣ್ಯಪುರಂ.

■ **ಶ್ರೀ ಚಾಮುಂಡೇಶ್ವರಿ ವಿವಿಧೋದ್ದೇಶ ಸಹಕಾರ ಸಂಘ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎನ್. ರಾಜ್‌ಕುಮಾರ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಶ್ರೀ ಅಮೃತೇಶ್ವರ ದೇವಸ್ಥಾನ :** ಶ್ರೀ ಶ್ರೀ ದಕ್ಷಿಣಾಮ್ನಾಯ ಶೃಂಗೇರಿ ಶಾರದಾಪೀಠದ ಉಭಯ ಜಗದ್ಗುರುಗಳ ಅನುಗ್ರಹಗಳೊಂದಿಗೆ ಶರನ್ನವರಾತ್ರಿ ಪ್ರಯುಕ್ತ 75ನೇ ವರ್ಷದ ಸಹಸ್ರ ಚಂಡೀ ಮಹಾಯಾಗ, ಬೆಳಗ್ಗೆ 9.30ಕ್ಕೆ ವಿಸ್ತಾರ ಸಹಸ್ರ ಚಂಡಿಯಾಗ, ಎರಡನೇ ದಿನದ ಮಹಾಯಾಗ ಬ್ರಹ್ಮಚಾರಿಣಿ ದೇವಿಯ ಆರಾಧನೆ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಮೃತೇಶ್ವರ ದೇವಸ್ಥಾನ.

■ **ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವಾಹನ ಮಾಲೀಕರ ಸೌಹಾರ್ದ ಸಹಕಾರಿ ನಿಯಮಿತ:** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಚಂದ್ರಶೇಖರಯ್ಯ, ಸ್ಥಳ: ಧರ್ಮಪಾರಾಯಿಣಿ ಶ್ರೀಮತಿ ಆಲಮ್ಮನವರ ಛತ್ರ, ದಿವಾನ್ಸ್ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಮಹಿಳಾ ಇಂಜಿನಿಯರಿಂಗ್ ಕಾಲೇಜು :** ಪ್ರಥಮ ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಪುನಶ್ಚೇತನ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಡಾ. ಮೂರ್ತಿ ರೆಮಿಲ್ಲಾ, ಗೌರವ ಅತಿಥಿಗಳು: ಎ.ಎಸ್.ಧರ್ಮೇಂದ್ರಕುಮಾರ್, ಅಧ್ಯಕ್ಷತೆ : ಜೆಎಸ್‌ಎಸ್ ಅಧ್ಯಕ್ಷ ಡಾ. ಎಂ. ಜಗನ್ನಾಥ್ ಶೆಣೈ, ಸ್ಥಳ: ಎಂ.ಗೋವಿಂದರಾವ್ ಮೆಮೋರಿಯಲ್ ಹಾಲ್, ಬೆಳಗ್ಗೆ 10.30ಕ್ಕೆ.

■ **ಮೈಸೂರು ಬೊಂಬೆ ರಂಗ ಮಂದಿರ :** ಮೈಸೂರು ಬೊಂಬೆ ಪ್ರದರ್ಶನ, ಸ್ಥಳ: ಮೈಸೂರು ಪಪ್ಪೆಟ್ ಥಿಯೇಟರ್, ಮೃಗಾಲಯದ ಎದುರು, ಸಂಜೆ 4.30 ರಿಂದ.

■ **ಬಸವ ಸಂಸ್ಕೃತಿ ಅಭಿಯಾನ ಸಮಿತಿ:** ಬೆಳಗ್ಗೆ 10ಕ್ಕೆ ಬಸವ ಸಂಸ್ಕೃತಿ ಅಭಿಯಾನ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಮುಖ್ಯ ಅತಿಥಿಗಳು: ಶಾಸಕರಾದ ಹೆಚ್.ಎಂ.ಗಣೇಶ್‌ಪ್ರಸಾದ್, ಹರೀಶ್‌ಗೌಡ, ಸ್ಥಳ: ನಿವೇದಿತಾನಗರ ಪಾರ್ಕ್; ಬೆಳಗ್ಗೆ 11ಕ್ಕೆ ಬಸವ ಸಂಸ್ಕೃತಿ ಸಾಮರಸ್ಯ ನಡಿಗೆ, ಪುಷ್ಪಾರ್ಚನೆ: ಶಾಸಕರಾದ ಟಿ.ಎಸ್. ಶ್ರೀವತ್ಸ, ತನ್ವೀರ್ ಸೇಠ್, ಸ್ಥಳ: ಚಾಮುಂಡಿಪುರಂ ಸರ್ಕಲ್, ಮಧ್ಯಾಹ್ನ 12ಕ್ಕೆ ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರ ಜೊತೆ ವಚನ ಸಂವಾದ, ಉದ್ಘಾಟನೆ : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸ್ಥಳ: ಶ್ರೀ ಸುತ್ತೂರು ಶಾಖಾ ಮಠ, ಚಾಮುಂಡಿಬೆಟ್ಟದ ತಪ್ಪಲು.

ಈ ಬಾರಿ 21 ದಿನಗಳ ಕಾಲ ಬೆಳಗಲಿದೆ ಅಂದದ ನಗರಿ

ಸಾಂಸ್ಕೃತಿಕ ನಗರಿಯಲ್ಲಿ ದಸರಾ ದೀಪಾಲಂಕಾರಕ್ಕೆ ಸಚಿವ ಕೆ.ಜೆ.ಜಾರ್ಜ್ ಚಾಲನೆ

ಮೈಸೂರು, ಸೆ.22(ವಿವಿಹೆಚ್)– ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿ ಸ್ಥಾಪಿಸಿರುವ ಹಸಿರು ಚಪ್ಪರದ ಆವರಣದಲ್ಲಿ ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾಗಿರುವ ವಿದ್ಯುತ್ ದೀಪಾಲಂಕಾರಕ್ಕೆ ಇಂಧನ ಸಚಿವ ಕೆ.ಜೆ. ಜಾರ್ಜ್ ಚಾಲನೆ ನೀಡಿದರು.

ಬಳಿಕ ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವತಿಯಿಂದ ದಸರಾ ದೀಪಾಲಂಕಾರ ಮಾಡಲಾಗಿದ್ದು, ಕಳೆದ ವರ್ಷಕ್ಕಿಂತಲೂ ಹೆಚ್ಚು ಆಕರ್ಷಣೀಯವಾಗಿ ಈ ಬಾರಿಯ ದೀಪಾಲಂಕಾರ ಕಂಗೊಳಿಸಲಿದೆ. ಇಂದಿನಿಂದ 21 ದಿನಗಳ ಕಾಲ ಸ್ಥಳೀಯರು ಹಾಗೂ ಪ್ರವಾಸಿಗರು ದೀಪಾಲಂಕಾರದ ಸೊಬಗನ್ನು ಕಣ್ತುಂಬಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.


ಈ ಬಾರಿ ನಗರದ 136 ಕಿ.ಮೀ ವ್ಯಾಪ್ತಿಯ ರಸ್ತೆಗಳು ಹಾಗೂ 118 ವೃತ್ತಗಳಲ್ಲಿ ದೀಪಾಲಂಕಾರ ಮಾಡಲಾಗಿದೆ. ಇದರೊಂದಿಗೆ ನಗರದ ಪ್ರಮುಖ ಕಡೆಗಳಲ್ಲಿ ಎಲ್ಇಡಿ ಬಲ್ಬ್‌ಗಳಿಂದ ನಿರ್ಮಿಸಲಾದ 80 ವಿವಿಧ ಪ್ರತಿಕೃತಿಗಳನ್ನು ಇರಿಸಲಾಗಿದೆ. ನಿಗದಿಯಂತೆ ಸೆ.22ರಿಂದ ಅ.2ರವರೆಗೆ ವಿದ್ಯುತ್ ದೀಪಾಲಂಕಾರ ನಡೆಯಲಿದ್ದು, ಇದರೊಂದಿಗೆ ಮುಖ್ಯಮಂತ್ರಿಗಳ ನಿರ್ದೇಶನದಂತೆ 10 ದಿನಗಳು ವಿಸ್ತರಣೆ ಮಾಡಿದ್ದು, ಒಟ್ಟು 21 ದಿನಗಳ ಕಾಲ ವಿದ್ಯುತ್ ದೀಪಾಲಂಕಾರ ಇರಲಿದೆ. ಇದಕ್ಕಾಗಿ 300 ಕಿಲೋ ವ್ಯಾಟ್‌ಗಳ, 257520 ಯೂನಿಟ್ ವಿದ್ಯುತ್ ಬಳಕೆ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಈ ಬಾರಿ ಡ್ರೋನ್ ಶೋ ಮತ್ತಷ್ಟು ಚಿತ್ತಾಕರ್ಷಕವಾಗಿರಲಿದೆ. ಬರೋಬ್ಬರಿ 3000 ಡ್ರೋನ್ಸ್ ಬಳಸಲಾಗುತ್ತಿದೆ ಆ ಮೂಲಕ ಈ ಬಾರಿಯ ದೀಪಾಲಂಕಾರಕ್ಕೆ ಮತ್ತಷ್ಟು ಮೆರುಗು ಬರಲಿದೆ ಎಂದರು.

ಸಚಿವ ಕೆಜೆ ಜಾರ್ಜ್ ಅವರ ಪತ್ನಿ ಸುಜಾ ಜಾರ್ಜ್, ಶಾಸಕ ತನ್ವೀರ್ ಸೇಠ್, ಶಾಸಕರು ಹಾಗೂ ಸೆಸ್ಕ್ ಅಧ್ಯಕ್ಷರಾದ ರಮೇಶ್ ಬಂಡಿಸಿದ್ದೇಗೌಡ, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಂ. ಮುನಿಗೋಪಾಲ್ ರಾಜು, ಅಧೀಕ್ಷಕ ಇಂಜಿನಿಯರ್ ಸುನೀಲ್ ಸೇರಿದಂತೆ ಸೆಸ್ಕ್ ಇತರೆ ಅಧಿಕಾರಿಗಳು ಮತ್ತು ಉಪ ಸಮಿತಿ ಸದಸ್ಯರು ಉಪಸ್ಥಿತರಿದ್ದರು.



ಮೈಸೂರು ದಸರಾ ದೀಪಾಲಂಕಾರಕ್ಕೆ ಸಚಿವ ಕೆ.ಜೆ.ಜಾರ್ಜ್ ಚಾಲನೆ ನೀಡಿದರು.



ದೀಪಾಲಂಕಾರದಿಂದ ಕಂಗೊಳಿಸುತ್ತಿರುವ ಹಾರ್ಡಿಂಜ್ ವೃತ್ತ



ಜಗಮಗಿಸುತ್ತಿರುವ ಆಲ್ಬರ್ಟ್ ವಿಕ್ಟರ್ ರಸ್ತೆ

ದಸರಾ ಪುಸ್ತಕ ಮೇಳಕ್ಕೆ ಸಚಿವ ತಂಗಡಗಿ ಚಾಲನೆ

ಮೈಸೂರು, ಸೆ.22(ಎಸ್‌ಪಿಎನ್)– ಮೈಸೂರು ಹಳೆ ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗದ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ದಸರಾ ಮಹೋತ್ಸವ ಸಮಿತಿ ಹಾಗೂ ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದೊಂದಿಗೆ ಆಯೋಜಿಸಿರುವ 'ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳ–2025'ಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ ಎಸ್.ತಂಗಡಗಿ ಅವರು, ಕನ್ನಡ ಬಾವುಟ ತೋರಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಸಚಿವರು, ಈ ಬಾರಿ ದಸರಾ ಪುಸ್ತಕ ಮೇಳದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ 90ಕ್ಕೂ ಅಧಿಕ ಪ್ರಕಾಶಕರು ಭಾಗಿಯಾಗಿದ್ದು, ಕನ್ನಡ ಪುಸ್ತಕ ಮೇಳ ಯಶಸ್ವಿಯಾಗಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಂಪೂರ್ಣ ಸಹಕಾರ ನೀಡಲಾಗುವುದು ಎಂದರು.

ಇದೇ ವೇದಿಕೆಯಲ್ಲಿ ಸಾಹಿತಿ ಬಾನು ಮುಷ್ತಾಕ್ ಕುರಿತು ಕನ್ನಡ ಪುಸ್ತಕ ಪ್ರಾಧಿಕಾರ ಹೊರತಂದಿರುವ 'ಬುಕರ್ ಬಾನು' ಪುಸ್ತಕ ಬಿಡುಗಡೆಗೊಳಿಸಲಾಗಿದೆ. ಈ ಪುಸ್ತಕದಲ್ಲಿ ಬಾನು ಮುಷ್ತಾಕ್ ಅವರ ಬದುಕು, ಸಾಹಿತ್ಯ ಕ್ಷೇತ್ರದ ಎಲ್ಲಾ ವಿವರಗಳು ಲಭ್ಯವಿದೆ. ಅವರು, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿ, ಹೊರದೇಶದಲ್ಲಿ ಬೂಕರ್ ಪ್ರಶಸ್ತಿಗೂ ಭಾಜನರಾಗಿರುವ ವಿವರಗಳು ಲಭ್ಯವಿದೆ ಎಂದರು.

ಈ ವೇಳೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಡಾ.ಎಂ.ವಿ.ವೆಂಕಟೇಶ್, ನಿರ್ದೇಶಕಿ ಕೆ.ಎಂ. ಗಾಯತ್ರಿ, ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ಡಾ.ನಂಜಯ್ಯ ಹೊಂಗನೂರು, ಕೆ.ಬಿ.ಕಿರಣ್‌ಸಿಂಗ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆಗೋಪಾಲ್, ಹಿರಿಯ ರಂಗಕರ್ಮಿ ರಾಜಶೇಖರ್ ಕದಂಬ, ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳ ಉಪಸಮಿತಿಯ ಸದಸ್ಯರಾದ ಎಂ.ಚಂದ್ರಶೇಖರ್, ಕೆ.ಎಸ್.ಶಿವರಾಂ, ಚಿಂತನಚಿತ್ತಾರ ಪ್ರಕಾಶನದ ನಿಂಗರಾಜ್ ಚಿತ್ತಣ್ಣವರ್, ಹಿರಿಯ ಸಾಹಿತಿ ಪ್ರೊ.ಕೆ.ಎಸ್. ಭಗವಾನ್ ಸೇರಿದಂತೆ ಇತರರಿದ್ದರು. ಈ ಬಾರಿ ಪುಸ್ತಕ ಮಾರಾಟ ಮೇಳದಲ್ಲಿ 90 ಮಳಿಗೆಗಳು ಭಾಗಿಯಾಗಿವೆ.



ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳ–2025ಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ ಎಸ್.ತಂಗಡಗಿ ಅವರು, ಕನ್ನಡ ಬಾವುಟ ತೋರಿ ಚಾಲನೆ ನೀಡಿದರು.

ಕೈಕೊಟ್ಟ ವಿದ್ಯುತ್

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ, ಪುಸ್ತಕ ಮೇಳ ಉದ್ಘಾಟಿಸಿ ಹೊರಟ ನಂತರ ತಾಂತ್ರಿಕ ದೋಷದಿಂದಾಗಿ ಒಂದು ಗಂಟೆಗೂ ಹೆಚ್ಚು ಸಮಯ ವಿದ್ಯುತ್ ಇಲ್ಲದೆ, ಪ್ರಕಾಶಕರು ಕತ್ತಲಲ್ಲಿ ಇರಬೇಕಾಯಿತು. ನಂತರ ಆಯೋಜಕರು ತರಾತುರಿಯಲ್ಲಿ ತಾಂತ್ರಿಕ ದೋಷ ಸರಿಪಡಿಸಿದ ಪ್ರಸಂಗವೂ ಜರುಗಿತು.

ರಂಗಾಯಣದಲ್ಲಿ ನವರಾತ್ರಿ ರಂಗೋತ್ಸವಕ್ಕೆ ಸಚಿವ ತಂಗಡಗಿ ನಗಾರಿ ಬಾರಿಸುವ ಮೂಲಕ ಚಾಲನೆ

ಮೈಸೂರು, ಸೆ.22(ಎಸ್‌ಪಿಎನ್)– ಮೈಸೂರಿನ ರಂಗಾಯಣ ಆವರಣದ ವನರಂಗದಲ್ಲಿ ನವರಾತ್ರಿ ರಂಗೋತ್ಸವಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ ಅವರು ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿದರು.

ರಾಜ್ಯದಲ್ಲಿ ನಾಲ್ಕೈದು ರಂಗಾಯಣಗಳಿವೆ. ಅದರಲ್ಲಿ ಮೈಸೂರು ರಂಗಾಯಣ ಅತೀ ಹೆಚ್ಚು ಚಟುವಟಿಕೆಯಿಂದ ಕೂಡಿದೆ. ಇಲ್ಲಿ ಕಲಿತ ರಂಗಾಯಣ ರಘು, ಮಂಡ್ಯರಮೇಶ್ ಹಾಗೂ ಮೈಸೂರಿನ ಹವ್ಯಾಸಿ ತಂಡದ ಡಾಲಿ ಧನಂಜಯ್ ಇಂದು ಕಲಾಕ್ಷೇತ್ರದಲ್ಲಿ ಎತ್ತರದ ಸ್ಥಾನದಲ್ಲಿದ್ದಾರೆ. ರಂಗಾಯಣಕ್ಕೆ ಪ್ರಸ್ತುತ ನೀಡುತ್ತಿರುವ ಅನುದಾನ ಕಡಿಮೆಯಾಗಿದೆ. ಈ ಬಾರಿ ಕಲಾ ಚಟುವಟಿಕೆಗಳಿಗೆ 80 ಲಕ್ಷ ಅನುದಾನ ನೀಡಲಾಗುತ್ತಿದೆ. ಇದನ್ನು ಮುಂದಿನ ವರ್ಷದಿಂದ ಒಂದು ಕೋಟಿಗೆ ಹೆಚ್ಚಿಸಲಾಗುವುದು ಎಂದು ಭರವಸೆ ನೀಡಿದರು.

ಭಾರತೀಯ ರಂಗಶಿಕ್ಷಣ ಕೇಂದ್ರದಲ್ಲಿ ವರ್ಷಕ್ಕೆ ಹತ್ತಾರು ಕಲಾವಿದರು ತರಬೇತಿ ಪಡೆದು ಹೊರಬರುತ್ತಿದ್ದಾರೆ. ಅವರೆಲ್ಲಾ ವಿವಿಧ ಕ್ಷೇತ್ರದಲ್ಲಿ ತೊಡಗಿಸಿಕೊಂಡು ನಾಡಿಗೆ ಕೀರ್ತಿ ತರುವ ಕೆಲಸ ಮಾಡುತ್ತಿದ್ದಾರೆ. ಅದೇ ರೀತಿ ರಂಗಭೂಮಿಯಲ್ಲಿ ಹಲವು ವರ್ಷಗಳ ಕಾಲ ಸಾಧನೆ ಮಾಡಿ, ಇಂದು ಸನ್ಮಾನಿತರಾಗುತ್ತಿರುವ ಕಲಾವಿದರಾದ ಧರ್ಮೇಂದ್ರ ಅರಸ್ ಅವರು, ವಿವಿಧ ಕ್ಷೇತ್ರದಲ್ಲಿ ಕೆಲಸ ಮಾಡಿದ್ದು, ಕಿರುತೆರೆಯಲ್ಲೂ ಕೆಲಸ ಮಾಡುತ್ತಿದ್ದಾರೆ. ಇಂತಹವರನ್ನು ಈ ವೇದಿಕೆಯಲ್ಲಿ ಸನ್ಮಾನಿಸುತ್ತಿರುವುದು ಸಂತೋಷದ ವಿಷಯ ಎಂದರು.

ಇದಕ್ಕೂ ಮುನ್ನ ರಂಗಾಯಣದಲ್ಲಿ ಪ್ರದರ್ಶನ ಗೊಂಡಿರುವ ನಾಟಕಗಳ ಭಿತ್ತಿಪತ್ರಗಳ ಪ್ರದರ್ಶನಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಎಂ. ವಿ.ವೆಂಕಟೇಶ್ ಚಾಲನೆ ನೀಡಿದರು.

ವೇದಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆಎಂ.ಗಾಯತ್ರಿ, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಉಪ ನಿರ್ದೇಶಕ ಡಾ.ಎಂ.ಡಿ.ಸುದರ್ಶನ, ಕಾಲೇಜು ರಂಗೋತ್ಸವ ಸಂಚಾಲಕಿ ಕೆ.ಆರ್. ನಂದಿನಿ, ನವರಾತ್ರಿ ರಂಗೋತ್ಸವದ ಸಂಚಾಲಕಿ ಬಿ. ಎನ್.ಶಶಿಕಲಾ, ರಂಗಸಮಾಜದ ಸದಸ್ಯರಾದ ಶಶಿಧರ್ ಬಾರೀಘಾಟ್, ಎಚ್.ಎನ್.ಸುರೇಶ್ ಬಾಬು, ಲಕ್ಷ್ಮೀಚಂದ್ರಶೇಖರ್, ಡಾ.ಕೆ.ರಾಮಕೃಷ್ಣಯ್ಯ, ಮಹಾಂತೇಶ ಎಂ.ಗಜೇಂದ್ರಗಡ, ಲಕ್ಷ್ಮೀ ಚಂದ್ರಶೇಖರ್, ಡಿಂಗ್ರಿ ನರೇಶ್ ಉಪಸ್ಥಿತರಿದ್ದರು.



ನವರಾತ್ರಿ ರಂಗೋತ್ಸವದಲ್ಲಿ ಹಿರಿಯ ರಂಗಕರ್ಮಿ ಧರ್ಮೇಂದ್ರ ಅರಸ್ ಅವರನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ ಸನ್ಮಾನಿಸಿದರು.

ನಕ್ಕರೆ ಅದೇ ಸ್ವರ್ಗ

ಮಹಿಳೆಯ ಮನಃಸ್ಥಿತಿ !! ಹುಷಾರಿರಲಿಲ್ಲ. ಯಾವುದೇ ಔಷಧಿಯಾಗಲಿ ತಾಯಿತವಾಗಲಿ ಕೆಲಸ ಮಾಡಲಿಲ್ಲ. ಗಂಡನಿಗೆ ಫೋನ್ ಮಾಡಿ ಜಗಳವಾಡಿದೆ. ಆ ಮೇಲೆ ಹೋಗಿ ಮಲಗಿದೆ. ಸ್ವಲ್ಪ ನೆಮ್ಮದಿ ಸಿಕ್ಕಿತು...!

ಮೈಸೂರು ಮಿತ್ರ

ಮಂಗಳವಾರ, 23 ಸೆಪ್ಟೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ನೂರು ಮನಸ್ಸುಗಳ ನೋಯಿಸಿ, ಹಚ್ಚಿದರೇನು ದೇವರ ಮುಂದೆ ದೀಪ, ತಡೆಯುವುದೇನು ಅದು ನೊಂದ ಮನಸ್ಸುಗಳು ನೀಡುವ ಶಾಪ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಾ ಕಳ್ಳ ಪರರ ನಂಬ

ನಿಮ್ಮ ಪತ್ರಗಳು

ಇದ್ಯಾವ ಸೀಮೆ ದಸರಾ ಉದ್ಘಾಟನೆ!

ಮಾನ್ಯರೆ,

ಈ ಸಾಲಿನ ವಿಶ್ವವಿಖ್ಯಾತ ನಾಡಹಬ್ಬ ದಸರಾ ಉದ್ಘಾಟನೆ, ಜನಸಾಮಾನ್ಯರನ್ನು ದೂರವಿಟ್ಟು ಅಧಿಕಾರಿಗಳು ಮತ್ತು ಕೆಲವು ಜನಪ್ರತಿನಿಧಿಗಳಿಗಷ್ಟೇ ಉದ್ಘಾಟನಾ ಸಮಾರಂಭ ಸಿಮೀತವಾಗಿತ್ತು. ಇತ್ತೀಚಿನ ವರ್ಷಗಳಲ್ಲಿ ಈ ರೀತಿಯ ಪೊಲೀಸ್ ಬಂದೋಬಸ್ತ್ ವ್ಯವಸ್ಥೆಯಲ್ಲಿ, ಉದ್ಘಾಟನೆ ನೆರವೇರಿಸಿದ್ದು, ಸಾರ್ವಜನಿಕರಿಗೆ ಮಾಡಿದ ಅವಮಾನವೆಂದೇ ಹೇಳಬೇಕು. ಬೆಳಿಗ್ಗೆ ಚಾಮುಂಡಿಬೆಟ್ಟಕ್ಕೆ ದೇವಿ ದರ್ಶನಕ್ಕೆ ಬಂದ ಭಕ್ತಾದಿಗಳನ್ನು ಕುರುಬಾರಹಳ್ಳಿಯ ಸರ್ಕಲ್‌ನಲ್ಲೇ ತಡೆದು, ಪೊಲೀಸರು ವಾಪಸ್ ಕಳುಹಿಸಿದ್ದಾರೆ ಹಾಗೂ ಬೆಟ್ಟದ ಪಾದದ ಕಡೆಯಿಂದ ಬೆಟ್ಟ ಹತ್ತಿ ಹೋಗಿದ್ದ ಭಕ್ತರಿಗೆ ದೇವಿ ದರ್ಶನಕ್ಕೂ ಅವಕಾಶ ನೀಡದೇ ಹೋದದ್ದು, ದೂರದ, ಊರಿನಿಂದ ಬಂದ ಭಕ್ತರು ಸರ್ಕಾರಕ್ಕೆ ಹಿಡಿಶಾಪ ಹಾಕುವಂತಾಯಿತು. ಈ ಎಲ್ಲ ಗೊಂದಲಗಳ ನಡುವೆ, ಉದ್ಘಾಟನಾ ಸಮಾರಂಭದಲ್ಲಿ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಗೈರು ಹಾಜರಿ ಎದ್ದು ಕಾಣುತ್ತಿತ್ತು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ನೀರ್ಮಾದಳಂ... ಯಶಸ್ವಿ ಪ್ರಯೋಗ

ಮಾನ್ಯರೆ,



ಮಲೆಯಾಳಂನ ಸಮರ್ಥ ಜನಪ್ರಿಯ ಲೇಖಕಿ ಮಾಧವಿ ಕುಟ್ಟಿ, ಕಮಲಾ ದಾಸ್, ಕಮಲ ಸುರಯ್ಯ ಅವರ ಜೀವನ ಚಿತ್ರವನ್ನು ಅನಾವರಣ ಗೊಳಿಸಿದ್ದು ಕಲಾವಿದೆ ಇಂದಿರಾ ನಾಯರ್.

ನಗರದ ಸಮತೆಂತೋ ತಂಡವು ಶನಿವಾರ (ಸೆ. 20) ವೀಣೆ ಶೇಷಣ್ಣ ಭವನದಲ್ಲಿ ಏಕವ್ಯಕ್ತಿ ಪ್ರದರ್ಶನವನ್ನು ಏರ್ಪಡಿಸಿದ್ದು, ಇಂದಿರಾ ನಾಯರ್ ಅವರ ಸಮರ್ಥ ಅಭಿನಯದಲ್ಲಿ ಹಿತಮಿತವಾದ ಹಿನ್ನೆಲೆ ಸಂಗೀತ, ಬೆಳಕಿನ ವ್ಯವಸ್ಥೆಯೊಂದಿಗೆ ನಗರದ ನಾಟಕ ಪ್ರಿಯರ ಗಮನ ಸೆಳೆಯಿತು. ಈಗಾಗಲೇ ಎರಡು ಪ್ರದರ್ಶನಗಳನ್ನು ಕಂಡಿರುವ 'ನೀರ್ಮಾದಳಂ ಹೂವಿನೊಂದಿಗೆ' ಇನ್ನೂ ಹೆಚ್ಚು ಪ್ರಯೋಗಗಳಾಗಲಿ. ನಾಟಕ ಪ್ರಿಯರನ್ನು ಹೆಚ್ಚು ಹೆಚ್ಚು ತಲುಪಲಿ.

–ಕೊ.ಸು.ನರಸಿಂಹ ಮೂರ್ತಿ, ವಿಮರ್ಶಕ, ಮೈಸೂರು.

ಸುರಕ್ಷಿತ ದಸರಾ ಮೆರವಣಿಗೆಗೆ ಮಾರ್ಗದ ಅನಾವಶ್ಯಕ, ಅಪಾಯಕಾರಿ ಮರಗಳ ತೆರವುಗೊಳಿಸಿ



ಮಾನ್ಯರೆ,

ಮೈಸೂರು ದಸರಾ ಮೆರವಣಿಗೆ ಸಂದರ್ಭದಲ್ಲಿ ಅವಘಡಗಳನ್ನು ತಪ್ಪಿಸಲು ಪೊಲೀಸ್ ಆಯುಕ್ತರು ಕೈಗೊಂಡಿರುವ ಕ್ರಮಗಳು ಶ್ಲಾಘನೀಯ. ಆದರೆ, ಇದಕ್ಕೆ ಪೂರಕವಾಗಿ ನಗರಪಾಲಿಕೆಯೂ ಕೂಡ ಸ್ಪಂದಿಸುವುದು ಅತ್ಯಂತ ಅವಶ್ಯಕ. ವಿಶೇಷವಾಗಿ ಸಯ್ಯಾಜಿರಾವ್ ರಸ್ತೆಯ ಬದಿ ಇರುವ ಸಣ್ಣಸಣ್ಣ ಗಿಡಗಳು ಈಗ ಗಂಭೀರ ಸಮಸ್ಯೆಯಾಗಿವೆ. ಫೋಟೋದಲ್ಲಿ ಕಾಣುವಂತೆ ಈ ಬಲವಿಲ್ಲದ ಗಿಡಗಳ ಮೇಲೆ ಯುವಕರು ಕುಳಿತು ಮೆರವಣಿಗೆಯನ್ನು ನೋಡುವ ಸಾಹಸಕ್ಕೆ ಮುಂದಾಗುತ್ತಾರೆ.


ನಾವು ಸ್ವತಃ ಇದಕ್ಕೆ ಸಾಕ್ಷಿಯಾಗಿದ್ದೇವೆ? ಕಳೆದ ವರ್ಷ ಇಬ್ಬರು ಯುವಕರು ಇಂತಹ ಗಿಡಗಳ ಕೊಂಬೆ ಮುರಿದು, ಅಲ್ಲಿ ಕುಳಿತಿದ್ದ ಜನರ ಮೇಲೆ ಬಿದ್ದರು. ದೇವರ ದಯೆಯಿಂದ ದೊಡ್ಡ ಅನಾಹುತ ಸಂಭವಿಸಲಿಲ್ಲ. ಆದರೆ ಇಂತಹ ಘಟನೆ ಮತ್ತೆ ನಡೆದರೆ ಗಂಭೀರ ದುರಂತ ಸಂಭವಿಸುವುದು ಖಚಿತ.

ಆದ್ದರಿಂದ ನಗರ ಪಾಲಿಕೆ ಕೂಡಲೇ ಇಂತಹ ಮರಗಳನ್ನು ಬುಡ ಸಮೇತ ತೆಗೆದುಹಾಕಿ, ಸುರಕ್ಷಿತ ಮತ್ತು ಸುಗಮ ದಸರಾ ಮೆರವಣಿಗೆ ನಡೆಯಲು ಸಹಕರಿಸಬೇಕು. ಇದಲ್ಲದೇ, ಸಯ್ಯಾಜಿರಾವ್ ರಸ್ತೆಯಲ್ಲಿ ಇಂತಹ ಕಾಡು ಜಾತಿಗೆ ಸೇರಿದ, ಕತ್ತರಿಸಲು ಅನಿವಾರ್ಯವಾದ, ಅರಣ್ಯ ಇಲಾಖೆಯ ಅನುಮತಿ ಇಲ್ಲವೇ ಯಾವುದೇ ಕಾನೂನು ತೊಡಕು ಉಂಟಾಗದ ಗಿಡಗಳನ್ನೂ ಕೂಡ ತಕ್ಷಣ ಕತ್ತರಿಸಬೇಕು.

ಜನರ ಸುರಕ್ಷತೆ ಅತೀ ಮುಖ್ಯವಾಗಿರುವುದರಿಂದ, ಈ ವಿಷಯದಲ್ಲಿ ನಗರ ಪಾಲಿಕೆ ತಕ್ಷಣ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

–ಎಂ.ಪಿ ಸಚಿನ್ ನಾಯಕ, ಬೆಳ್ಳಿಕಟ್ಟೆಗೆ ಮೀಸಲು, ಮೈಸೂರು.

ಮೋದಿಯವರಿಗೆ ಧನ್ಯವಾದಗಳು



ಮಾನ್ಯರೆ,

ನಮ್ಮೆಲ್ಲರ ನೆಚ್ಚಿನ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಧನ್ಯವಾದಗಳು ಹಾಗೂ ಅವರ ಹುಟ್ಟು ಹಬ್ಬಕ್ಕೆ ಶುಭಾಶಯಗಳು. ಕೇಂದ್ರ ಸರ್ಕಾರವು ಜಿಎಸ್‌ಟಿಯಲ್ಲಿ ಬಾರೀ ಬದಲಾವಣೆ ತಂದಿರುವ ಕಾರಣ ಆಹಾರ ಪದಾರ್ಥಗಳ ಮೇಲಿನ ಬೆಲೆ ಇಳಿಕೆಯಾಗುತ್ತದೆ. ಸಾಲು ಸಾಲು ಹಬ್ಬಗಳು ಬಂದಿವೆ. ಕಡಿಮೆ ಖರ್ಚಿನಲ್ಲಿ ಹೆಚ್ಚು ಹೆಚ್ಚು ಸ್ವದೇಶಿ ವಸ್ತುಗಳ ಶಾಪಿಂಗ್ ಮಾಡಿ ಎಂದು ಪ್ರಧಾನಮಂತ್ರಿಗಳು ಮಹಿಳೆಯರಿಗೆ ಕರೆ ಕೊಟ್ಟಿದ್ದಾರೆ. ದೇಶದ ಆರ್ಥಿಕ ಪ್ರಗತಿಗೆ ಮಹಿಳೆಯರೇ ಕಾರಣ ಎಂದು ಹೇಳಿರುವುದು ಸ್ವಾಗತಾರ್ಹ ಸಂಗತಿ. ಮಹಿಳೆಯರು ಅಡಿಗೆ ಮನೆಗೆ ಸೀಮಿತ ಎಂದು ಹೇಳುವ ಕಾಲ ಒಂದಿತ್ತು. ಆದರೆ ಇಂದು ಎಲ್ಲಾ ವೃತ್ತಿಗಳಲ್ಲೂ ಎಲ್ಲ ರಂಗಗಳಲ್ಲೂ ಮಹಿಳೆಯರ ಪಾತ್ರವಿದೆ. ರಾಷ್ಟ್ರಪತಿಗಳಾಗಿ, ಮುಖ್ಯಮಂತ್ರಿ, ಪ್ರಧಾನಮಂತ್ರಿ, ಡ್ರೈವರ್, ಪೈಲೆಟ್, ಗಗನಯಾತ್ರಿ ಹೀಗೆ ಹೇಳುತ್ತಾ ಹೋದರೆ ಪುರುಷರಿಗಿಂತ ಮಹಿಳೆಯರ ಸಾಧನೆ ಪಟ್ಟಿಯೇ ಬೆಳೆಯುತ್ತಾ ಹೋಗುತ್ತದೆ. ದೇಶದ ಆರ್ಥಿಕ ಪ್ರಗತಿಗೂ ಮಹಿಳೆಯರೇ ಕಾರಣ ಎಂಬುದು ಇಂದು ನಮಗೆ ಗೊತ್ತಾಗಿದೆ. ಒಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇದ್ದೇ ಇರುತ್ತಾಳೆ ಎನ್ನುವುದು ಇದಕ್ಕೆ. ಹೆಣ್ಣು ಮಕ್ಕಳೇ ಸ್ಟ್ರಾಂಗು ಎನ್ನುವುದರಲ್ಲಿ ತಪ್ಪೇನಿಲ್ಲ.

–ರೂಪ ಎಂ., ಸೋಮನಾಥನಗರ, ದಟ್ಟಗಳ್ಳಿ, ಮೈಸೂರು




ಡಾ. ಗುಬ್ಬಿಗೂಡು ರಮೇಶ್
ಮೊ. 97429 34512

ದೀಪ ಸಾಲು

ಮೈಸೂರು ದಸರಾ... ಎಷ್ಟೊಂದು ಸುಂದರ...





ಮೈಸೂರು ದಸರಾ ಎಷ್ಟೊಂದು ಸುಂದರ ಎಂಬ ಕರುಳಿನ ಕರೆ ಚಿತ್ರದ ಸಾಲುಗಳು ಮತ್ತೆ ಮತ್ತೆ ಮರುಕಳಿಸುತ್ತಿವೆ. ದಸರಾ ಎಂದರೆ ಮೈಸೂರು, ಮೈಸೂರು ಎಂದರೆ ದಸರಾ, ಎನ್ನುವಷ್ಟರ ಮಟ್ಟಿಗೆ ಒಂದಕ್ಕೊಂದು ತಳುಕು ಹಾಕಿಕೊಂಡಿರುವ ನಾಡಹಬ್ಬವು ಇಂದು ಬೂಕರ್ ಪ್ರಶಸ್ತಿ ವಿಜೇತರಾದ ಸಾಹಿತಿ ಶ್ರೀಮತಿ ಬಾನುಮುಷ್ತಾಕ್ ಅವರಿಂದ ವಿದ್ಯುಕ್ತವಾಗಿ ಚಾಲನೆಗೊಂಡಿದೆ. ಮೈಸೂರು ತನ್ನ ಬೆಳಕಿನ ಕಣ್ಣುಗಳಿಂದ ಕಂಗೊಳಿಸುತ್ತಿದೆ. ಕುಂದಾನಗರಿ ಬೆಳಗಾವಿ, ಉದ್ಯಾನನಗರಿ ಬೆಂಗಳೂರು, ಸಕ್ಕರೆನಗರಿ ಮಂಡ್ಯ, ಕರ್ನಾಟಕದ ನವಿಲುಗರಿ, ಸಾಂಸ್ಕೃತಿಕ ನಗರಿ ಮೈಸೂರು. ನೀವೇನೇ ಹೇಳಿ ಇಂಥಾ ಊರಿನಲ್ಲಿ ಬದುಕುವುದೇ ಒಂದು ಸುಖ ಕಣ್ರಿ. ಪ್ರಪಂಚದಲ್ಲಿ ಎಂಥೆಂಥಾ ಊರುಗಳಿವೆ ಗೊತ್ತ! ಬರೀ ಅರಮನೆಗಳನ್ನೇ ನೋಡಿಕೊಂಡು ಬರುವುದಕ್ಕೇ ಕೆಲವು ಊರುಗಳಿವೆ, ಸಮುದ್ರ ನೋಡಿ ಬರುವುದಕ್ಕೇ ಊರುಗಳಿವೆ, ಬೆಟ್ಟಗಳನ್ನು ನೋಡಿ ಬರುವುದಕ್ಕೇ ಊರುಗಳಿವೆ. ಜಯಪುರ, ಗೋವಾ, ಮುನಾರ್ಸ್ ಹೀಗೆ ಸೇತುವೆಗಳನ್ನು, ರಸ್ತೆಗಳನ್ನು, ಏರ್‌ಪೋರ್ಟ್‌ಗಳನ್ನು, ದ್ವೀಪಗಳನ್ನು ಸುತ್ತಿಬರುವುದಕ್ಕೆ ಎಂತಲೇ ಒಂದೊಂದಕ್ಕೂ ಒಂದೊಂದು ಊರು ಪ್ರಸಿದ್ಧಿ. ಆದರೆ ದಸರಾಸಂಸ್ಕೃತಿಯನ್ನು ನೋಡಿಬರುವುದಕ್ಕೆ ಜನ ಮೈಸೂರಿಗೇ ಬರಬೇಕು. ಹೀಗೆ ಜನ ಸಂಸ್ಕೃತಿಯ ಸಾಂಸ್ಕೃತಿಕ ವೈಭವವನ್ನು ಮುಡಿಗೇರಿಸಿಕೊಂಡು ತನ್ನ ಹೆಸರಿನ ಜೊತೆ ಸಾಂಸ್ಕೃತಿಕ ನಗರಿಎಂದು ಕರೆಸಿಕೊಂಡ ಊರಿದು. ತನ್ನ ಪರಂಪರೆಯನ್ನು, ಸಂಸ್ಕೃತಿಯನ್ನು ವಿಶ್ವವಿಖ್ಯಾತ ಮಾಡಿಕೊಂಡು ಅದರ ಕುರುಹಾಗಿ ಪ್ರತಿ ವರ್ಷ ದಸರಾ ಆಚರಿಸಿಕೊಂಡು ಬಂದ ಮೈಸೂರಿನಲ್ಲಿ ಬದುಕುವ ಜನ ನಾವು.

ದೇಶ ಸುತ್ತಿ ನೋಡು, ಕೋಶ ಓದಿ ನೋಡು ಅಂತ ಗಾದೆ ಮಾತಿದೆಯಲ್ಲ ಹಾಗೆ, ತುಂಬಾ ಜನಕ್ಕೆ ಊರು ಸುತ್ತುವ ಚಟ. ಅಂಥವರು ಊರು ಸುತ್ತಿಕೊಂಡು ವಾಪಸ್ಸು ಮೈಸೂರಿಗೆ ಬರುವಾಗ ಇಲ್ಲಿನ ಗಾಳಿ ಮೈ ತಾಕಿದ ಕೂಡಲೇ ಅವರ ಮುಖದಲ್ಲಿನ ಸುಖ ನೋಡಬೇಕು ನೀವು! ಹಾಗೇಯೇ ಹಿಗ್ಗಿ ಹೀರೇಕಾಯಿಯಾಗಿ ಬಿಡುತ್ತಾರೆ. ಇನ್ನು ಕೆಲವರಿಗೆ ಮೈಸೂರಿನಿಂದ ಬೆಂಗಳೂರಿಗೆ ಹೋಗಿ ಬರುವುದೇ ಒಂದು ದೊಡ್ಡ ಪ್ರಯಾಸ. ಹೋದ ಮೇಲಂತೂ ಅವತ್ತು ರಾತ್ರಿಯೇ ವಾಪಸ್ಸು ಮೈಸೂರಿಗೆ ಬಂದುಬಿಡಬೇಕು. ರಾತ್ರಿ ಎಷ್ಟೊತ್ತಾದರೂ ಸರಿ ನಿದ್ದೆಗಣ್ಣಿನಲ್ಲಿಯೇ ಬಸ್ಸಿನ ಕಿಟಕಿ ತೆಗೆದು ಫೈವ್‌ಲೈಟ್ ಸರ್ಕಲ್ ನೋಡಿಬಿಡಬೇಕು. ಆಗಲೇ ಅವರಿಗೆ ಸಮಾಧಾನ. ಈ ಕೆಟಗರಿಯಲ್ಲಿ ಯಾರು ಬೇಕಾದರೂ ಇರಬಹುದು. ನಾವು ವಾಸಿಸಲು ಒಂದು ಊರು ಬೇಕು. ಎಲ್ಲೋ ಇದ್ದರಾಯಿತು ಬಿಡು, ಹೇಗೋ ಇದ್ದರಾಯಿತು ಬಿಡು ಎನ್ನುವ ಕಾಲ ಇದಲ್ಲ. ಇದ್ದರೆ ಇಂಥಾ ಊರಿನಲ್ಲೇ ಇರಬೇಕು ಅಂತ ಅರಸಿಹೊರಡುವ ಅನ್ವೇಷಕರ ದೊಡ್ಡ ಗುಂಪೇ ಈಗ ವಿಶ್ವಾದ್ಯಂತ ಸಿದ್ಧವಾಗಿದೆ. ಕೈಯ್ಯಲ್ಲಿ ಪಾಸ್‌ಪೋರ್ಟ್, ವೀಸಾ ಹಿಡಿದು ಹೊರಟ ನಮ್ಮ ದೇಶದ ಹುಡುಗರು ಗ್ರೀನ್ ಕಾರ್ಡಿನ ಆಸೆಯಿಂದ ವಿದೇಶಗಳಲ್ಲಿ ಮಕ್ಕಳನ್ನು ಪಡೆಯುತ್ತಾರೆ, ಅಲ್ಲಿ ನೆಲೆಯೂರಿ ಇಂಡಿಯಾದ ರಸ್ತೆಗಳನ್ನು ಇಂಡಿಯಾದ ಕೊಳಕನ್ನು ಕುರಿತು ಥರಾವರಿ ಮಾತಾಡುತ್ತಾ ತಾವಿರುವ ಜಾಗದ ಬಗ್ಗೆ ಖುಷಿಪಡುತ್ತಾರೆ. ಆದರೆ ದಸರಾ ವಿಷಯಕ್ಕೆ ಬಂದಾಗ ತಮ್ಮ ಬಗ್ಗೆ ತಾವು ಹೆಮ್ಮೆಯಿಂದ ಹೇಳಿ ಕೊಳ್ಳೋದು ಏನು ಗೊತ್ತ? ನಾನು Mysorian ಅಂತ. ಮೈಸೂರು Cultural Capital? ಕರ್ನಾಟಕದ ಸಾಂಸ್ಕೃತಿಕ ಹೆಬ್ಬಾಗಿಲು. ಹೀಗೆ ಊರಿನ ಹೆಸರು ಹೇಳಿಕೊಂಡರೆ ಸಾಕು ನಮ್ಮ ಸಾಂಸ್ಕೃತಿಕ ಐಡೆಂಟಿಟಿ ಗೊತ್ತಾಗುವ ಒಂದೇ ಒಂದು ಊರು ಮೈಸೂರು. ಇಂಥ ಊರಿನಲ್ಲಿ ನಾವಿದ್ದೇವಲ್ಲ ಎಂಬ ತೃಪ್ತಿಗೆ ಸಂತೃಪ್ತಿಗೆ ಇನ್ನೇನು ಬೇಕು ಹೇಳಿ.

ಮೈಸೂರಲ್ಲಿ ಸಂಸ್ಕೃತಿ ಕಟ್ಟಿದ ಕುಲವಿದೆ. ಕರ್ನಾಟಕದಲ್ಲಿ ಎಲ್ಲೆ ಹೋದರೂ ನಾಲಿಗೆಯಲ್ಲಿ ಮೈಸೂರಿನ ಹೆಸರು ಹೇಳಿಯೇ ಸಿಹಿ ಸುರಿಸುವ ಮೈಸೂರುಪಾಕಿನ ಸವಿಯಿದೆ. ನೀವೆಲ್ಲಾದರೂ ನೋಡಿದ್ದೀರಾ? ಊರಿನ ಮಧ್ಯೆ ಬೆಟ್ಟ, ಅಲ್ಲೊಂದು ದೇವಾಲಯ. ರಸ್ತೆಗೆ ಅಡ್ಡ ಸಿಕ್ಕುವ ಚಿರತೆಗಳು, ಬೆಟ್ಟದ ಮೇಲೆ ಕುಳಿತು ಬಗ್ಗಿ ನೋಡಿದರೆ ಜಗಮಗಿಸುವ ಬೆಳಕು. ಅರಮನೆಯ ಅಂದ, ಪ್ರವಾಸಿಗರ ಸ್ವಚ್ಛಂದ. ಬಲಕ್ಕೆ ತಿರುಗಿದರೆ ಬಲಮುರಿ ಎಡಕ್ಕೆ ತಿರುಗಿದರೆ ಎಡಮುರಿ. ರಸ್ತೆಯಲ್ಲಿ ನಿಂತಿದ್ದರೂ ಜಿರಾಫೆಯ ತಲೆಕಾಣಿಸುವ ಮೃಗಾಲಯ, ಮಕ್ಕಳ ಉಡಾಫೆಗೆ ಗುದ್ದು ಕೊಟ್ಟು ನಕ್ಕು ನಲಿಸುವ ಚಿಂಪಾಜಿ, ಪ್ರಾಣಿ ಸಂಗ್ರಹಾಲಯ. ಎಡಬಲ ತಿರುಗಿ ಕತ್ತು ನೋವಾಗಿದ್ದರೆ ಸ್ವಲ್ಪ ಮುಂದಕ್ಕೆ ಹೋಗಿ ನಿಮ್ಮ ಬೆನ್ನ ಹಿಂದೆ ರಕ್ಷಣೆಗೆ ನಿಂತಿದ್ದಾಳೆ ಕಾವೇರಿ. ಕುವೆಂಪು ಹೇಳುವ ಹಾಗೆ ನೀನ್ ಕುಡಿಯುವ ನೀರ್ ಕಾವೇರಿ. ಕನ್ನಂಬಾಡಿಗೆ ಕುಡಿನೋಟವೊಂದಿದ್ದರೆ ಅದು ನಮ್ಮೂರು ಮೈಸೂರು. ಮೈಸೂರಿನ ಬಗ್ಗೆ ಬರೆಯುವ ಬರಹಗಾರರೆಲ್ಲರಿಗೂ ಮೈತುಂಬಾ ಪದವೇ.

> “ಧರ್ಮ, ಸಂಸ್ಕೃತಿ, ಪುರಾಣ, ಪರಂಪರೆ ಬೆರೆಸಿಕೊಂಡು ರೂಪುಗೊಂಡದ್ದು ದಸರಾ. ದಶಹರ ಎಂಬುದರ ತದ್ಭವ ರೂಪವೇ ದಸರಾ. ನವರಾತ್ರಿಯ ಈ ಕಾಲದಲ್ಲಿ ದೇಶದ ನಾನಾ ರಾಜ್ಯದ ಕಡೆ ದಸರಾ ಉತ್ಸವ ಆಯೋಜಿಸಲಾಗುತ್ತಿದೆ. ಆದರೆ ಮೈಸೂರು ಮತ್ತು ದಸರಾ ಎಂಬ ಪದಗಳು ಒಟ್ಟೊಟ್ಟಿಗೆ ಪ್ರಯೋಗಗೊಳ್ಳುತ್ತಿರುವ ಮಟ್ಟಿಗೆ ಅವು ಒಂದಕ್ಕೊಂದು ಬೆರೆತು ಹೋಗಿವೆ. ಹೀಗೆ ಶ್ರೀಮಂತ ದೇಸೀ ಪರಂಪರೆಯೊಂದು ತನ್ನ ಆಚರಣೆಗಳಿಂದಲೇ ವಿಶ್ವವಿಖ್ಯಾತವಾಗಿ ಹೊಂದಿದ್ದು ಮಾತ್ರ ಇತಿಹಾಸ!

ಯಾವುದನ್ನು ಬರೆಯುವುದು? ಯಾವುದನ್ನು ಬಿಡುವುದೆಂಬ ಗೊಂದಲ. ಇಷ್ಟು ಸಂಭ್ರಮಕೊಟ್ಟ ಊರಲ್ಲೀಗ ಎಂದಿನಂತೆ ಮತ್ತೆ ದಸರಾದ ಹರವು. ಊರಹಬ್ಬವೊಂದು ನಾಡಹಬ್ಬವಾಗಿ ಆಚರಿಸಲ್ಪಡುತ್ತಿರುವ ಇದು ಪ್ರಾರಂಭವಾಗಿದ್ದು 1910ರಲ್ಲಿ. ಹೀಗೆ ಮೈಸೂರಿನಲ್ಲಿ ಶುರುವಾದ ಈ ದಸರಾ ಇವತ್ತು ದೇಶದಾದ್ಯಂತ ಬೇರೆ ಬೇರೆ ಹೆಸರುಗಳಲ್ಲಿ ಆಚರಿಸಲ್ಪಡುತ್ತಿದೆ.

ಧರ್ಮ, ಸಂಸ್ಕೃತಿ, ಪುರಾಣ, ಪರಂಪರೆಗಳನ್ನು ಬೆರೆಸಿಕೊಂಡು ರೂಪುಗೊಂಡದ್ದು ದಸರಾ. ದಶಹರ ಎಂಬುದರ ತದ್ಭವ ರೂಪವೇ ಈ ದಸರಾ. ನವರಾತ್ರಿಯ ಈ ಕಾಲದಲ್ಲಿ ದೇಶದ ನಾನಾ ರಾಜ್ಯದ ಕಡೆ ದಸರಾ ಉತ್ಸವಗಳನ್ನು ಆಯೋಜಿಸಲಾಗುತ್ತಿದೆ. ಆದರೆ ಮೈಸೂರು ಮತ್ತು ದಸರಾ ಎಂಬ ಪದಗಳು ಒಟ್ಟೊಟ್ಟಿಗೆ ಪ್ರಯೋಗಗೊಳ್ಳುತ್ತಿರುವ ಮಟ್ಟಿಗೆ ಅವು ಒಂದಕ್ಕೊಂದು ಬೆರೆತು ಹೋಗಿವೆ. ಹೀಗೆ ಶ್ರೀಮಂತ ದೇಸೀ ಪರಂಪರೆಯೊಂದು ತನ್ನ ಆಚರಣೆಗಳಿಂದಲೇ ವಿಶ್ವವಿಖ್ಯಾತವಾಗಿ ಹೊಂದಿದ್ದು ಮಾತ್ರ ಇತಿಹಾಸ! ಕರ್ನಾಟಕದ ರಾಜಮನೆತನಗಳು ಶರನ್ನವರಾತ್ರಿಯನ್ನು ನಿರಂತರವಾಗಿ ಆಚರಿಸಿಕೊಂಡು ಬಂದರು. ಇದನ್ನು ತುಂಬಾ ಪ್ರಸಿದ್ಧಿಗೆ ತಂದವರು ವಿಜಯನಗರದ ಅರಸರು. ಇವರನ್ನೇ ಅನುಸರಿಸಿದ ಮೈಸೂರು ಅರಸರು ದಸರಾ ಆಚರಣೆಯನ್ನು ಇನ್ನೂ ಹೆಚ್ಚು ವೈಭವೀಕರಿಸಿದರು. ತನ್ನ 50 ವರ್ಷಗಳ ಆಳ್ವಿಕೆಯ ನಂತರ ಮೈಸೂರು ಸಂಸ್ಥಾನದ ಅಧಿಕಾರವನ್ನು 1881ರಲ್ಲಿ ಬ್ರಿಟೀಷ್ ಚಕ್ರಾಧಿಪತ್ಯ ರಾಜವಂಶಸ್ಥರಿಗೆ ಬಿಟ್ಟುಕೊಟ್ಟರು. ಆಗ 10ನೇ ಚಾಮರಾಜ ಒಡೆಯರ್ ಇದ್ದರು. ಆಗಲೂ ಯಾವ ರಾಜಕೀಯ ಪಲ್ಲಟಗಳೇ ನಡೆಯಲಿ, ಯಾರೇ ಅಧಿಕಾರದಲ್ಲಿರಲಿ, ನವರಾತ್ರಿಯ ಸಾಂಸ್ಕೃತಿಕ ವಿನ್ಯಾಸಗಳು ಬದಲಾಗಲಿಲ್ಲ. ಮೈಸೂರಿನ ಜನ ತಮ್ಮ ಜೀವನ ವಿಧಾನದ ಕ್ಯಾಲೆಂಡರುಗಳಲ್ಲಿ ದಸರಾವನ್ನು ಅಧಿಕೃತವಾಗಿ ಘೋಷಿಸಿಕೊಂಡು ಬಿಟ್ಟರು. ವರ್ಷಕ್ಕೊಮ್ಮೆ ನಡೆಯುವ ಉತ್ಸವದಲ್ಲಿ ಅವರು ಪಾಲ್ಗೊಂಡರು, ಹಾಡಿದರು, ಹರಸಿಕೊಂಡರು, ನಡೆಸಿಕೊಂಡು ಬಂದರು. ಹೀಗೆ ಇದು ಮೈಸೂರಿನ ಪರಂಪರೆಯಾಗಿ ಹೋಯಿತು. ಶ್ರೀರಂಗಪಟ್ಟಣದ ಕಾವೇರಿ ನದಿಯ ಪಕ್ಕದ ಗೌರಿ ಕಡುವೆಯ ಎಂಬ ಸ್ಥಳದಲ್ಲಿ 9ನೇ ಮಹಾರಾಜ ರಾಜಒಡೆಯರ್ 1610ರಲ್ಲಿ ಇದನ್ನು ಪ್ರಾರಂಭಿಸಿದರೂ 25 ಮಂದಿ ಅರಸರ ಪೈಕಿ ಎಂಟು ಜನ ಅರಸರು ಈ ದಸರೆಯನ್ನು ನೋಡಲೇ ಇಲ್ಲ. ಇದೊಂದು ಮನುಷ್ಯ ಲೋಕದ ಸುಗ್ಗಿಯ ಕಾಲ. ಗಜಪಡೆಗಳ ಗಾಂಭೀರ್ಯ ಪ್ರದರ್ಶನ, ಸ್ತಬ್ಧ ಚಿತ್ರಗಳು ಮೆರವಣಿಗೆ, ಜನಪದ ಕಲಾ ತಂಡಗಳ ಕಾಲ್ನಡಿಗೆ, ಅವುಗಳ ಪಟ್ಟಿ ಒಂದೇ ಎರಡೇ, ಬರೆದರೇ ಒಂದು ದೊಡ್ಡ ಪುಸ್ತಕವೇ ಆದೀತು. ಡೊಳ್ಳು ಕುಣಿತ, ಜೇಡರ ಕುಣಿತ, ವೀರಗಾಸೆ, ಕಂಸಾಳೆ, ಗಾರುಡಿ ಗೊಂಬೆ, ಪೂಜಾ ಕುಣಿತ–ಹೀಗೆ ದೇಸಿ ಕಲೆಗಳ ಸಾಲು ಸಾಲು ಕರ್ನಾಟಕದ ಕಣ್ಮನ ಸೆಳೆದಿವೆ. ರಸ್ತೆಯುದ್ದಕ್ಕೂ ಸಂಚರಿಸುವ ಕಲಾವಿದರ ಡೋಲು ಸವಾಲು ಪ್ರತೀ ವರ್ಷವೂ ತನ್ನ ಲವಲವಿಕೆಯನ್ನು ತೋರಿಸಿವೆ. ಸಾರ್ವಜನಿಕರ ಸಹಭಾಗಿತ್ವವನ್ನು ಕೇಳುವ ಹಬ್ಬನಾಡ ದಸರಾ. ನಮ್ಮ ನಾಡಿನ ಕಲಾವಿದರು ತಮ್ಮ ಪ್ರತಿಭೆ, ಕೈಚಳಕ, ಕಸರತ್ತುಗಳನ್ನು ತೋರಿಸಲು ಇರುವ ಒಂದೇ ಒಂದು ಸಾರ್ವಜನಿಕ ಸದಾವಕಾಶ ಎಂದರೆ ಮೈಸೂರು ದಸರಾ. ಕರ್ನಾಟಕದಲ್ಲಿ ಸಾಂಸ್ಕೃತಿಕ ನೀತಿ ರೂಪುಗೊಂಡಿರುವ ಈ ದಿನಗಳಲ್ಲಿ ಯಾವ ನೀತಿಯೂ ಇಲ್ಲದೆ ವರ್ಷಗಳ ಕಾಲ ನಡೆದು ಬಂದ ಜನಸಾಮಾನ್ಯ ತನಗೆ ತಾನೇ ಸಂಸ್ಕೃತಿಯ ದಾರಿ ಹುಡುಕಿಕೊಂಡಿದ್ದಾನೆ. ಇದು ಮೈಸೂರಲ್ಲಿ ಮಾತ್ರವಲ್ಲ, ಪಕ್ಕದ ಮಡಿಕೇರಿಯಲ್ಲಿ, ಮಂಗಳೂರಿನ ಕುದ್ರದ ಮಾರ್ನೆಮಿಯಲ್ಲಿ, ಧಾರವಾಡದ ಗೆಳೆಯರ ಬಳಗದಲ್ಲಿ, ಚಿತ್ರದುರ್ಗದಲ್ಲಿ, ಕುದ್ರೋಳಿಯಲ್ಲಿ ಹೀಗೆ ಎಲ್ಲ ಕಡೆ ಇಂಥ ಸಾಂಸ್ಕೃತಿಕ ಉತ್ಸವಗಳು ತಮ್ಮ ತಮ್ಮ ದೇಸೀ ಕಲೆಯ ಮಾದರಿಗಳಿಗೆ ಜೀವ ತುಂಬಿವೆ.

ಮಾತೃಪ್ರಧಾನ ಸಂಸ್ಕೃತಿಯ ನೆರಳಲ್ಲೇ ನಡೆಯುವ ಈ ಹಬ್ಬ, ದೆಹಲಿಯಲ್ಲಿ ಬಹುರೂಪಿಯಾಗಿ, ಉತ್ತರ ಕನ್ನಡದಲ್ಲಿ ದಸರಾ ಆಗಿ, ಬೆಳಗಾವಿಯಲ್ಲಿ ನವರಾತ್ರಿಯ ಆಚರಣೆಯಾಗಿ, ಗುಲ್ಬರ್ಗಾ, ವಿಜಾಪುರಗಳಲ್ಲಿ ದಸರಾವಾಗಿ–ಎಲ್ಲ ಕಡೆ ನಡೆಯುತ್ತಿದೆ. ಇದಕ್ಕೊಂದು ಸಾಂಸ್ಕೃತಿಕ ಒಗ್ಗಟ್ಟಿದೆ. ಇರಲಿ ಇಂಥಾ ಸಾಂಸ್ಕೃತಿಕ ಒಗ್ಗಟ್ಟುಗಳೇ ನಮ್ಮನ್ನು ಕಾಯುವುದು ನಿಮಗೆ ನೆನಪಿರಬೇಕು.

ಹಿರಿಯ ವಿಜ್ಞಾನಿ ಸಿ.ಎನ್.ಆರ್.ರಾವ್ ಈ ಹಿಂದೆ ಒಮ್ಮೆ ದಸರಾ ಉದ್ಘಾಟಿಸಿ ಒಂದು ಮಾತು ಹೇಳಿದ್ದರು. ಮೈಸೂರು ಬೆಂಗಳೂರಿನಂತಲ್ಲ ಈ ಊರಿಗೆ ತನ್ನದೇ ಆದ ಆತ್ಮವಿದೆ ಅಂತ. ಬೆಂಗಳೂರಿನಲ್ಲಿ ಎಲ್ಲವೂ ಇದೆ, ದುಡ್ಡಿದೆ, ಶ್ರೀಮಂತಿಕೆಯಿದೆ, ಐಷಾರಾಮಿ ಜೀವನವಿದೆ, ನಿಮಗೆ ಗೊತ್ತಿರಲಿ ಪಕ್ಕದಲ್ಲೇ ಕೊಳಗೇರಿಯಿದೆ. ಇದೆಲ್ಲಾ ಭೌತಿಕವಾಗಿ ಕಣ್ಣಿಗೆ ಕಾಣುವ ವಸ್ತು, ವಿವರಗಳು ಅಷ್ಟೇ. ಆದರೆ ಕಣ್ಣಿಗೆ ಕಾಣದ ಆತ್ಮಸುಖ ಈ ಊರಿನಲ್ಲಿದೆ. ಬದುಕಿನ ದುಡಿಮೆ ಮುಗಿಸಿ ಮಕ್ಕಳಿಗೆ ಮದುವೆ ಮುಂಜಿ ಮಾಡಿ ತಮ್ಮ ಬದುಕಿನ ಸಂಧ್ಯಾ ಕಾಲದ ಜೀವನವನ್ನು ಮೈಸೂರಿನಲ್ಲಿ ಕಳೆಯಲು ಜನಕ್ಕೆ ಏನಿಷ್ಟವೋ ಏನೋ! ಸಯ್ಯಾಜಿರಾವ್ ರೋಡಿನ ಹೋಟೆಲಿನಲ್ಲಿ ಮಸಾಲೆದೋಸೆ ತಿಂದು, ಕಾಫಿ ಕುಡಿದು ಈಚೆಗೆ ಬರುವ ನಿವೃತ್ತರಾದವರನ್ನು ನೋಡಬೇಕು ನೀವು! ಮೈಸೂರಿನ ಸಂಜೆಗಳಲ್ಲಿ ಬಾಯಿ ಚಪ್ಪರಿಸಿಕೊಂಡು ಇಡ್ಲಿ ಚಟ್ನಿ ತಿನ್ನುವ ವಯಸ್ಸಾದವರನ್ನು ನೋಡಿಯೇ ಮೈಸೂರನ್ನು ನಿವೃತ್ತರ ಸ್ವರ್ಗ ಅಂತ ಕರೆದಿರುವ ಸತ್ಯ ಗೊತ್ತಾಗುತ್ತದೆ. ಇವತ್ತಿಗೂ ಕೇವಲ ನೂರು ರೂಗಳಲ್ಲಿ ದಿನ ಕಳೆಯುವ ವ್ಯವಸ್ಥೆ ಇರುವ ಊರು ಮೈಸೂರು. ದಿನಕ್ಕೆ ಲಕ್ಷಗಟ್ಟಲೆ ಖರ್ಚು ಮಾಡುವ ಮೋಜು? ಮಸ್ತಿಯೂ ಇಲ್ಲಿದೆ. ಮೊದಲನೇ ಆಯ್ಕೆಯ ಜನರೇ ಇಲ್ಲಿ ಜಾಸ್ತಿ ಇರುವ ಕಾರಣ ಮೈಸೂರಿನ ಪರಂಪರೆಗೆ ಅಡ್ಡಿಯಿಲ್ಲ.

ಆದರೆ ಪರಂಪರೆಯನ್ನು ಉಳಿಸಿಕೊಂಡೇ ಮೈಸೂರನ್ನು ಅಭಿವೃದ್ಧಿ ಪಡಿಸಲು ಕಳೆದ ವರ್ಷಗಳಲ್ಲಿ ಹೆಚ್ಚು ಹಣ ಇಲ್ಲಿಗೆ ಬಂದಿದೆ. ಜೆ.ಎನ್. ನರ್ಮ್, ಏಷ್ಯನ್ ಅಭಿವೃದ್ಧಿ ಬ್ಯಾಂಕ್, ಮುಖ್ಯಮಂತ್ರಿಗಳ ನಿಧಿ ಹೀಗೆ –ಹಲವಾರು ಬಾಬ್ತುಗಳಲ್ಲಿ ಇಲ್ಲಿಗೆ ದುಡ್ಡು ಬಂದಿದೆ. ನಿವೃತ್ತಿಯಾದ ಮೇಲೆ ತಾವು ಕೂಡ ನಿವೃತ್ತರ ಸ್ವರ್ಗಕ್ಕೆ ಸೇರಿಕೊಳ್ಳ ಬಯಸುವ ಅಧಿಕಾರಿಗಳು ಅಭಿವೃದ್ಧಿಗಾಗಿ ಮನಸ್ಸು ಮಾಡಬೇಕು. 250 ಚದರ ಕಿ.ಮೀ.ವರೆಗೆ ವಿಸ್ತಾರವಾಗಿ ಹರಡಿಕೊಂಡಿರುವ ಮೈಸೂರಿಗೆ ಮಹಾನಗರಪಾಲಿಕೆಯಿದೆ. 65 ವಾರ್ಡ್‌ಗಳಿವೆ. ಲಕ್ಷಾಂತರ ಜನ ಇಲ್ಲಿ ವಾಸ್ತವ್ಯ ಹೂಡಿದ್ದಾರೆ. ಇಲ್ಲಿ ಸಮಸ್ಯೆಗಳಿವೆ, ಹಾಗೆಯೇ ಅದರ ಜೊತೆಜೊತೆಗೆ ಪರಂಪರೆಯ ಸ್ವಚ್ಛ ಸುಂದರ ಮೈಸೂರನ್ನು ನಿರ್ಮಿಸಬೇಕಿದೆ. ತುಮಕೂರಿಗೆ ಫುಡ್‌ಪಾರ್ಕ್ ಬಂದಂತೆ. ಮೈಸೂರಿಗೆ ಟೆಕ್ಸ್‌ಟೈಲ್ ಪಾರ್ಕ್ ಬರಬೇಕು. ಹೆಚ್ಚಿದ ಜನಸಂಖ್ಯೆಯ ಒತ್ತಡದಿಂದ ಹಳ್ಳಿಗಳಿಂದ ಮೊದಲ್ಗೊಂಡು ಮೈಸೂರಿನ ಕಡೆಗೆ ಜನರ ವಲಸೆ ಶುರುವಾಗಿದೆ. ಮಾರ್‍ವಾಡಿಗಳು, ರಾಜಸ್ಥಾನಿಗಳು, ಬಿಹಾರಿಗಳು, ವ್ಯಾಪಾರದ ಉದ್ದೇಶದಿಂದ ಇಲ್ಲಿಗೆ ಬಂದವರು ಇಲ್ಲೇ ನೆಲೆಯೂರಿ ಎಲ್ಲ ಕಡೆ ವ್ಯಾಪಿಸಿದ್ದಾರೆ. ಸ್ಥಳೀಯರ ಕೈಗೆ ನಿವೇಶನಗಳು ಗಗನಕುಸುಮವಾಗಿವೆ. ಶಾಲೆ–ಕಾಲೇಜುಗಳಲ್ಲಿ ಸೀಟಿಲ್ಲ. ಕೈಗಾರಿಕೆಯ ಅಭಿವೃದ್ಧಿ ಹೆಸರಲ್ಲಿ ಪಡೆದುಕೊಂಡ ದೊಡ್ಡ ದೊಡ್ಡ ನಿವೇಶನಗಳು ನಿಯೋಜಿತ ಕಾರ್ಯಕ್ಕೆ ಬಳಕೆಯಾಗುತ್ತಿಲ್ಲ. ನಗರಾಭಿವೃದ್ಧಿ ಪ್ರಾಧಿಕಾರದ ಗ್ರೇಟರ್ ಮೈಸೂರು–2030ರ ನಿರೀಕ್ಷೆಗಳು ಫಲಪ್ರದವಾಗಬೇಕು. ಕಾಂಕ್ರೀಟ್ ಕಟ್ಟಡಗಳ ಐಷಾರಾಮಿ ನಿರ್ಮಾಣಗಳು ಮೈಸೂರನ್ನು ಬದಲಿಸಿವೆ. ಇಲ್ಲಿರುವ ಖಾಲಿ ನಿವೇಶನಗಳಲ್ಲಿ ಅರ್ಧದಷ್ಟು ಹೊರ ಊರಿನವರದು. ಮುಂದೆ ಮೈಸೂರು ಬೆಳೆಯುತ್ತದೆ. ಯಾವುದಕ್ಕೂ ಮೈಸೂರಿನಲ್ಲೊಂದು ಪ್ರಾಪರ್ಟಿ ಇರಲಿ, ಎಂಬ ಲೆಕ್ಕಾಚಾರದಲ್ಲಿಯೇ ನಿವೇಶನ ತೆಗೆದಿಟ್ಟ ಮಂದಿ ಮೈಸೂರಿನ ಬಗ್ಗೆ ಒಂದು ಆಸಕ್ತಿ ಇಟ್ಟುಕೊಂಡೇ ಆಸ್ತಿ ಮಾಡಿದ್ದಾರೆ. ಸಮಸ್ಯೆಗಳಿಲ್ಲದ ನಗರ, ಪಟ್ಟಣಗಳು ಎಲ್ಲಿವೆ ಹೇಳಿ? ನಿವೃತ್ತರ ಸ್ವರ್ಗಕ್ಕೆ ಜೀವಂತಿಕೆ ತರುವಂತೆ, ಸಣ್ಣ ಸಣ್ಣ ಉದ್ಯೋಗಗಳಲ್ಲಿದ್ದುಕೊಂಡು ಜೀವನ ಮಾಡುತ್ತಿರುವವರು, ಚಿಕ್ಕ ಚಿಕ್ಕ ವೃತ್ತಿಗಳಿಂದ ಬದುಕುತ್ತಿರುವವರು, ಕಷ್ಟಪಟ್ಟು ಸಾಲಸೋಲ ಮಾಡಿ ಒಂದು ಮನೆ ಕಟ್ಟಿಕೊಂಡ ಮಧ್ಯಮ ವರ್ಗದವರು, ಭೂಮಿ ಮಾರಿಕೊಂಡು ಹಳ್ಳಿ ಬಿಟ್ಟು ಇಲ್ಲಿಗೆ ಬಂದು ಮಕ್ಕಳನ್ನು ಓದಿಸುತ್ತಿರುವವರು, ಕಡ್ಲೇಕಾಯಿ ಮಾರುತ್ತಲೇ ಮರಗಾಲು ಕುಣಿತವನ್ನು ಬೆರಗುಗಣ್ಣಿನಿಂದ ನೋಡುತ್ತಾ ನಾನೂ ದಸರಾ ನೋಡಿದೆ ಅಂತ ಎದೆ ತಟ್ಟಿಕೊಳ್ಳುವ ಕಡ್ಲೇಕಾಯಿ ಮಾರುವ ಹುಡುಗನಿಂದ ಹಿಡಿದು ಬಂಗಲೆಗಳಲ್ಲಿ ಬಾಳುತ್ತಿರುವವರವರೆಗೆ ಎಲ್ಲರಿಗೂ ಇಲ್ಲಿ ವಾಸಕ್ಕೆ ಬೇರೆ ಬೇರೆ ಸೂರುಗಳಿವೆ. ಆದರೆ ಊರು ಮಾತ್ರ ಒಂದೇ ಅದು ಮೈಸೂರು. ಇಷ್ಟೆಲ್ಲದರ ನಡುವೆಯೂ ನಾಲಿಗೆಗೆ ಮೈಸೂರು ಪಾಕು. ತೃಪ್ತಿಗೆ ಮೈಸೂರು ಸಾಕು.

ಶತಮಾನಗಳ ಸಂಭ್ರಮವನ್ನೂ ಆಚರಿಸಿಕೊಂಡ ಗಂಗೋತ್ರಿಗೆ, ಕನ್ನಡ ಸಾಹಿತ್ಯ ಪರಿಷತ್‌ಗೆ, ಮೈಸೂರು ರೇಷ್ಮೆಗೆ, ಹೀಗೆ ನೂರು ತುಂಬಿದ ಅನೇಕ ವಿಷಯಗಳು ಇಲ್ಲಿವೆ. ನಾನೂರು ತುಂಬಿದ ರಾಜಪಥದ ಟಾಂಗಾಗಾಡಿಗೆ, ವೀರನಗೆರೆ ಬದನೆಗೆ, ಮೈಸೂರು ಮಲ್ಲಿಗೆಗೆ, ಮೈಸೂರು ಪೇಟಕ್ಕೆ, ಕುಸ್ತಿಯ ಆಟಕ್ಕೆ, ವಿಚಾರವಂತರ ಆಗ್ರಹಕ್ಕೆ, ಆಚಾರವಂತರ ಬಿನ್ನಹಕ್ಕೆ ಸಾಕ್ಷಿಯಾಗಿ, ಪರಂಪರೆಯೊಂದಿಗೆ ಬದುಕಿ ಬಿಡೋಣ ಏನಂತೀರಿ?

ಮಂಗಳಾರತಿ ಪಡೆದು, ಚಾಮುಂಡಿಗೆ ಪುಷ್ಪಾರ್ಚನೆ ಮಾಡಿದ ಬಾನು ಮುಷ್ತಾಕ್‌ರ ನಡೆಗೆ ಶಾಸಕ ಜಿ.ಟಿ.ದೇವೇಗೌಡರ ಪ್ರಶಂಸೆ

ಮೈಸೂರು, ಸೆ.22(ಬಿಎಲ್‌ಯು)– ಬಾನು ಮುಷ್ತಾಕ್ ಅವರು ನಾಡದೇವತೆ ತಾಯಿ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಮಂಗಳಾರತಿ ಪಡೆದು, ಬೆಳ್ಳಿ ರಥದಲ್ಲಿ ಪ್ರತಿಷ್ಠಾಪನೆಗೊಂಡಿರುವ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಕೂಡ ಮಾಡಿ ನಿಬ್ಬೆರಗಾಗುವಂತೆ ಮಾಡಿದ್ದಾರೆ ಎಂದು ಶಾಸಕ ಜಿ.ಟಿ.ದೇವೇಗೌಡರು ಅತೀವ ಮೆಚ್ಚುಗೆ ವ್ಯಕ್ತಪಡಿಸಿದರು.



ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಇಂದು ನಡೆದ ದಸರಾ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಬೂಕರ್ ಪ್ರಶಸ್ತಿ ಪಡೆದಿರುವ ಬಾನು ಮುಷ್ತಾಕ್ ಅವರು ಕನ್ನಡ ನಾಡಿಗೆ ಕೀರ್ತಿ ತಂದಿದ್ದಾರೆ ಎಂದರು.

ಮನುಷ್ಯನಲ್ಲಿರುವ ರಾಕ್ಷಸಿ ಗುಣ ದೂರವಾಗಬೇಕು. ಮಾನವೀಯ ಮೌಲ್ಯವನ್ನು ಅಳವಡಿಸಿಕೊಳ್ಳಬೇಕು. ದಸರಾ ಹಬ್ಬ ಈ ಬಗ್ಗೆ ಸಾಂಕೇತಿಕವಾದ ಸಂದೇಶ ಸಾರುತ್ತದೆ ಎಂದು ಹೇಳಿದರು.

ವರ್ಷಗಳು ಕಳೆದಂತೆ ಮೈಸೂರು ದಸರಾ ವೈಶಿಷ್ಟಪೂರ್ಣವಾಗುತ್ತಿದೆ. ಹಲವು ವಿಶೇಷ ಕಾರ್ಯಕ್ರಮಗಳ ಮೂಲಕ ದೇಶ–ವಿದೇಶದ ಜನರನ್ನು ಕೈ ಬೀಸಿ ಕರೆಯುತ್ತಿದೆ ಎಂದರು.

ಯುವ ಸಂಭ್ರಮದಲ್ಲಿ 20 ಸಾವಿರ ವಿದ್ಯಾರ್ಥಿಗಳು ಕಾರ್ಯಕ್ರಮ ನೀಡಿದ್ದಾರೆ. ದಸರಾ ವೇಳೆ ಟ್ರಾಫಿಕ್ ಜಾಮ್ ಆಗದಂತೆ ನಮ್ಮ ಸಂಚಾರ ಪೊಲೀಸರು ಅಚ್ಚುಕಟ್ಟಾದ ವ್ಯವಸ್ಥೆ ಮಾಡಿದ್ದಾರೆ ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಮೈಸೂರು ನಗರ ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿದೆ. ಪ್ರಾಯಶಃ ಇಂತಹ ಹಬ್ಬ ದೇಶದ ಯಾವುದೇ ಸ್ಥಳದಲ್ಲಿ ನಡೆಯುವುದಿಲ್ಲ ಎನ್ನಿಸುತ್ತದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾರ್ಗದರ್ಶನದಲ್ಲಿ ಮೈಸೂರು ದಸರಾ ವಿಭಿನ್ನವಾಗಿ ಮೂಡಿ ಬರುತ್ತಿದೆ. 1983 ರಿಂದ ಇಲ್ಲಿವರೆಗೆ ಶಾಸಕರಾಗಿ, ಸಚಿವರಾಗಿ, ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿರುವ ಸಿದ್ದರಾಮಯ್ಯ, ತವರು ಜಿಲ್ಲೆಯ ದಸರಾಗೆ ಮೆರಗು ನೀಡುತ್ತಿದ್ದಾರೆ ಎಂದು ತಿಳಿಸಿದರು.

ಶೋಷಿತರಿಗೆ ನ್ಯಾಯ ದೊರಕಿಸಲು ಸಂವಿಧಾನ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ದಿನ ಕಳೆದಂತೆ ಜಾತಿಯತೆ ಗಟ್ಟಿಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಆರ್ಥಿಕತೆಯ ಆಧಾರದ ಮೇಲೆ ವರ್ಗೀ ಕರಣ ಮಾಡಿ ಸವಲತ್ತು ಹಂಚಬೇಕು. ಹೀಗಾದಾಗ ಮಾತ್ರ ಸಮ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದರು. ಮೈಸೂರಿನ ಕೆಲವು ಬಡಾವಣೆಗಳಿಗೆ ಕುಡಿಯುವ ನೀರಿಗೆ ತೊಂದರೆ ಇದೆ. ಈಗ ಹೆಚ್ಚುವರಿ 60 ಎಂಎಲ್‌ಡಿ ನೀರು ಕೊಟ್ಟರೆ ನೀರಿನ ಸಮಸ್ಯೆ ಪರಿಹಾರವಾಗುತ್ತದೆ ಎಂದು ದೇವೇಗೌಡರು ವೇದಿಕೆಯಲ್ಲಿದ್ದ ಸಿದ್ದರಾಮಯ್ಯ ಗಮನಕ್ಕೆ ತಂದರು.

ಸಂಸದ ಡಾ.ಸುಧಾಕರ್ ಪತ್ನಿ ವಂಚಿಸಿ 14 ಲಕ್ಷ ದೋಖಾ!

ಬೆಂಗಳೂರು: ಚಿಕ್ಕ ಬಳ್ಳಾಪುರದ ಬಿಜೆಪಿ ಸಂಸದ ಡಾ.ಕೆ.ಸುಧಾಕರ್ ಪತ್ನಿ ಡಾ.ಪ್ರೀತಿ ಸುಧಾಕರ್ ಅವರು ಸೈಬರ್ ವಂಚನೆಗೆ ಬಲಿಯಾಗಿದ್ದಾರೆ. ಮುಂಬೈ ಸೈಬರ್ ಇಲಾಖೆ ಅಧಿಕಾರಿಗಳೆಂದು ಹೇಳಿಕೊಂಡು ವಂಚಕರು ಅವರನ್ನು ಡಿಜಿಟಲ್ ಬಂಧನದ ಮೂಲಕ 14 ಲಕ್ಷ ರೂ. ವಂಚಿಸಿದ್ದಾರೆ. ಆರೋಪಿಗಳು ವೀಡಿಯೋ ಕರೆಯ ಮೂಲಕ ಪ್ರೀತಿ ಸುಧಾಕರ್ ಅವರಿಗೆ ಬೆದರಿಕೆ ಹಾಕಿದ್ದಾರೆ. ಅವರ ದಾಖಲೆಗಳನ್ನು ವಿದೇಶಗಳಲ್ಲಿ ಅಕ್ರಮ ವಹಿವಾಟುಗಳಿಗೆ ಬಳಸಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಆ. 26ರಂದು ವಂಚಕರು ಡಾ. ಪ್ರೀತಿ ಸುಧಾಕರ್ ಅವರೊಂದಿಗೆ ವೀಡಿಯೋ ಕರೆಯ ಮೂಲಕ ಮಾತನಾಡಿ, ಬೆದರಿಕೆ ಹಾಕಿದ್ದು ಆರ್‌ಬಿಐ ನಿಯಮಗಳ ಪ್ರಕಾರ 45 ನಿಮಿಷಗಳಲ್ಲಿ ಹಣವನ್ನು ಹಿಂದಿರುಗಿಸುವುದಾಗಿ ಭರವಸೆ ನೀಡಿದರು. ಆದರೆ ಹಣ ಪಡೆದು ವಂಚಿಸಿದ್ದಾರೆ. ಈ ಸಂಬಂಧ ಸೈಬರ್ ಕ್ರೈಮ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಇಂದಿನ ದಸರಾ ಕಾರ್ಯಕ್ರಮಗಳು



■ **ಅರಮನೆ ವೇದಿಕೆ:** ಸಾಂಸ್ಕೃತಿಕ ಕಾರ್ಯಕ್ರಮ, ಮಧ್ಯಾಹ್ನ 3.30ರಿಂದ ಭಾರತೀಯ ವಿದ್ಯಾಭವನದ ಎಸ್.ಆರ್.ರವಿ ಕುಮಾರ್ ಅವರಿಂದ ನೃತ್ಯರೂಪಕ, ಸಂಜೆ 4ರಿಂದ ರವಿರಾಜ್ ಎಸ್.ಹಾಸು ಮತ್ತು ತಂಡ ಕಲಬುರಗಿ ಅವರಿಂದ ವಚನ ದಾಸ ತತ್ವ ವೈಭವ, ಸಂಜೆ 5ರಿಂದ ಸ್ಮಿತಾ ಶ್ರೀಪತಿ ಮತ್ತು ತಂಡ ಅವರಿಂದ ಭರತನಾಟ್ಯ, ಸಂಜೆ 6ರಿಂದ ಡಾ.ಶ್ವೇತಾ ಮಡಪ್ಪಾಡಿ ಮತ್ತು ತಂಡದಿಂದ ಕನ್ನಡ ಕಾಜಾಣ ಹಾಡು ಪಾಡು, ರಾತ್ರಿ 7ರಿಂದ ಥೈಕ್ಕುಡಂ ಬ್ರಿಡ್ಜ್ ಬ್ಯಾಂಡ್ ಅವರಿಂದ ಸಮಕಾಲೀನ ಶಾಸ್ತ್ರೀಯ ಸಂಗೀತ, ರಾತ್ರಿ 8.30ರಿಂದ ಅಭಿಷೇಕ್ ರಘುರಾಮ್ ಮತ್ತು ತಂಡದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ.

■ **ಕಿರು ರಂಗಮಂದಿರ ವೇದಿಕೆ :** ಸಾಂಸ್ಕೃತಿಕ ಕಾರ್ಯಕ್ರಮ, ಮಧ್ಯಾಹ್ನ 2 ರಿಂದ ಬಿ.ಪ. ರತ್ನಮ್ಮ ಮತ್ತು ತಂಡದಿಂದ ಸುಗಮ ಸಂಗೀತ; ಮಧ್ಯಾಹ್ನ 3.30 ರಿಂದ ಇರುಳು ಹಗಲಾಗುವುದೊಳಗೆ ನಾಟಕ ಪ್ರದರ್ಶನ; ರಾತ್ರಿ 7 ರಿಂದ ಜಿಪಿಐಇಆರ್ ರಂಗ ತಂಡದಿಂದ ನಾಟಕ : ವಾರ್ಡ್ ನಂ. 6.

■ **ಪುರಭವನ ವೇದಿಕೆ:** ಸಾಂಸ್ಕೃತಿಕ ಕಾರ್ಯಕ್ರಮ, ಬೆಳಗ್ಗೆ 10.30ರಿಂದ ಎಂ.ಮಂಜುನಾಥ್ ಮತ್ತು ತಂಡದಿಂದ ಬಳ್ಳಿ ಬಾಡಿತು ಹೂವು ಅರಳಿತು ನಾಟಕ ಪ್ರದರ್ಶನ; ಮಧ್ಯಾಹ್ನ 3ರಿಂದ ಶ್ರೀ ರಾಮ ಕೃಪಾಪೋಷಿತ ನಾಟಕ ಮಂಡಳಿಯಿಂದ ಪೌರಾಣಿಕ ನಾಟಕ : ಶೂರ್ಪನಖಿ ಗರ್ವಭಂಗ; ಸಂಜೆ 6ರಿಂದ ಶ್ರೀ ರೇಣುಕಾಂಬ ಕಲಾನಾಟ್ಯ ಸಂಘ, ಶಿವಮೊಗ್ಗ ಅವರಿಂದ ಹವ್ಯಾಸಿ ನಾಟಕ: ಬಸ್ ಕಂಡಕ್ಟರ್.

■ **ಚಿಕ್ಕಗಡಿಯಾರ ವೇದಿಕೆ :** ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 5ರಿಂದ ಶ್ರೀ ರಾಮ ಯುವಕ ರೈತ ಕಲಾ ಸಂಘ, ಹಾಸನ ಅವರಿಂದ ಗಾರುಡಿ ಗೊಂಬೆ; ಸಂಜೆ 5.30 ರಿಂದ ಹೆಚ್.ಡಿ.ಕೋಟೆಯ ದೇವರಾಜು ಮತ್ತು ತಂಡದಿಂದ ತಮಟೆ ವಾದನ; ಸಂಜೆ 6.30ರಿಂದ ಮಾತೋಶ್ರೀ ಚಂದ್ರವ್ವ ಮಲ್ಲಪ್ಪ ಕಲ್ಲಳ್ಳಿ ಯೂತ್ ಫೌಂಡೇಷನ್‌ನ ಬಸವರಾಜ ಮ. ಕಲ್ಲಹಳ್ಳಿ ಮತ್ತು ತಂಡ, ಬಾಗಲಕೋಟೆ ಅವರಿಂದ ಭಜನೆ; ರಾತ್ರಿ 7.30ರಿಂದ ಗೊರವಾಲೆ ಚಂದ್ರಶೇಖರ್ ಮತ್ತು ತಂಡ, ಮಂಡ್ಯ ಅವರಿಂದ ತತ್ವಪದ ಗಾಯನ; ರಾತ್ರಿ 8.30ರಿಂದ ಚಂದ್ರಶೇಖರ್ ಕಲಾವೃಂದದಿಂದ ಜಾನಪದ ಗಾಯನ.

■ **ನಾದಬ್ರಹ್ಮ ಸಂಗೀತಸಭಾ ವೇದಿಕೆ:** ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 4.15 ರಿಂದ ಬಸವರಾಜ ಎಚ್.ಬಿ. ಮತ್ತು ತಂಡ ಅವರಿಂದ ಕೀಲುಕುದುರೆ; ಸಂಜೆ 4.45 ರಿಂದ ಕೌಸಲ್ಯ ಎಂ.ಎಸ್. ಮತ್ತು ತಂಡದವರಿಂದ ಸುಗಮ ಸಂಗೀತ; ಸಂಜೆ 5.30 ರಿಂದ ಡಾ.ಸಿ.ಆರ್. ರಾಘವೇಂದ್ರ ಪ್ರಸಾದ್ ಮತ್ತು ತಂಡದಿಂದ ನಾದಲಹರಿ : ತಾಳವಾದ್ಯ; ಸಂಜೆ 6.30ರಿಂದ ವೇದವ್ಯಾಸ ಸೇವಾ ಟ್ರಸ್ಟ್ ಅವರಿಂದ ಜಾನಪದ ಗೀತೆ; ರಾತ್ರಿ 7.30ರಿಂದ ಪಿ. ಅನಿಲ್‌ಕುಮಾರ್ ಮತ್ತು ತಂಡದಿಂದ ಗೀತ ಗಾಯನ; ರಾತ್ರಿ 8.30ರಿಂದ ಸುಮ ರಾಜ್‌ಕುಮಾರ್ ಮತ್ತು ತಂಡದಿಂದ ಮಾತನಾಡುವ ಗೊಂಬೆ ಹಾಗೂ ಜಾದೂ ಕಾರ್ಯಕ್ರಮ.

■ **ಗಾನಭಾರತಿ ವೇದಿಕೆ:** ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 4ರಿಂದ ಕುಮಾರಯ್ಯ ಮತ್ತು ತಂಡ, ಹಾಸನ ಅವರಿಂದ ಚಿಟ್ಟಿಮೇಳ; ಸಂಜೆ 4.30ರಿಂದ ನಂಜುಂಡ ಸ್ವಾಮಿ ಮತ್ತು ತಂಡ, ಚಾಮರಾಜನಗರ ಅವರಿಂದ ಜಾನಪದ ಗೀತೆ; ಸಂಜೆ 5.30ರಿಂದ ಎಂ.ಎ.ಶೋಭಾ ಕಿರಣ್ ಮತ್ತು ತಂಡ, ಬೆಂಗಳೂರು ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ; ಸಂಜೆ 6.30 ರಿಂದ ಅಶ್ವಿನಿ ನಾಗೇಂದ್ರ ಮತ್ತು ತಂಡ, ಮೈಸೂರು ಅವರಿಂದ ವೀಣಾವಾದನ; ರಾತ್ರಿ 7.30 ರಿಂದ ನಿಹಾರಿಕಾ ಆರ್. ಮತ್ತು ತಂಡ, ಹಾಸನ ಅವರಿಂದ ಭರತನಾಟ್ಯ; ರಾತ್ರಿ 8.30ರಿಂದ ವಿನಾಯಕ ನಾಯಕ ಮತ್ತು ತಂಡದವರಿಂದ ಸುಗಮ ಸಂಗೀತ.

■ **ರಮಾಗೋವಿಂದ ವೇದಿಕೆ:** ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 5ರಿಂದ ವಾಲ್ಮೀಕಿ ಸಾಮಾಜಿಕ-ಸಾಂಸ್ಕೃತಿಕ ಟ್ರಸ್ಟ್‌ನ ಎನ್.ಟಿ.ಚೈತ್ರಾರಿಂದ ಸಿತಾರ್‌ವಾದನ; ಸಂಜೆ 5.30ರಿಂದ ವಿದುಷಿ ಸಿ. ಸಹನ ಮತ್ತು ತಂಡದಿಂದ ನೃತ್ಯರೂಪಕ, ಸಂಜೆ 6.30ರಿಂದ ಹನುಮಂತ ಲಮಾಣಿ-ಖಾಸಿಂ ಅಲಿ ಅವರಿಂದ ಜನಪದ ಸಂಗೀತ; ರಾತ್ರಿ 7.30ರಿಂದ ಚಾಮರಾಜನಗರದ ಹಾಡಿ ಕಲಾ ಪ್ರತಿಷ್ಠಾನದಿಂದ ನಾಟಕ ಚಾಮಚೆಲುವೆ.

■ **ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು :** ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 5ರಿಂದ ವಿದ್ವಾನ್ ಎನ್. ಚೆಲುವರಾಜು ಮತ್ತು ತಂಡದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ನಾದಸ್ವರ; ಸಂಜೆ 5.30 ರಿಂದ ಮೋಹನ್‌ಕುಮಾರ್ ಪಿ. ಮತ್ತು ತಂಡದಿಂದ ಭಾವಗೀತೆ ಗಾಯನ; ಸಂಜೆ 6.30 ರಿಂದ ಕು. ಯಶಸ್ವಿನಿ ಕೆ.ವಿ. ಆಚಾರ್ ಮತ್ತು ತಂಡ, ದಾವಣಗೆರೆ ಅವರಿಂದ ಭರತನಾಟ್ಯ; ರಾತ್ರಿ 7.30 ರಿಂದ ಶ್ರೀವಾರಿ ಸುಗಮ ಸಂಗೀತ ಕಲಾ ತಂಡದವರಿಂದ ಸುಗಮ ಸಂಗೀತ; ರಾತ್ರಿ 8.30 ರಿಂದ ಸಿಂಧು ಮತ್ತು ತಂಡದಿಂದ ರಂಗಗೀತೆ.

■ **ಜಗನ್ಮೋಹನ ಅರಮನೆ ವೇದಿಕೆ :** ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 5ರಿಂದ ಅಂಕುಶ್ ಸುರೇಶ್ ಕಡಬರಿಂದ ಕರ್ನಾಟಕ ಶಾಸ್ತ್ರೀಯ ಕೊಳಲುವಾದನ; ಸಂಜೆ 5.30ರಿಂದ ಶ್ರದ್ಧಾ ವಿ.ಶಾಖಂಡಕಿ ಮತ್ತು ತಂಡ, ಬಾಗಲಕೋಟೆ ಅವರಿಂದ ಸುಗಮ ಸಂಗೀತ; ಸಂಜೆ 6.30ರಿಂದ ಶಾಂತಲ ವಟ್ಟಂ ತಂಡದಿಂದ ಕಥಕ್ ಶಾಸ್ತ್ರೀಯ ನೃತ್ಯ; ರಾತ್ರಿ 7.30ರಿಂದ ರಜತ್ ಶರ್ಮಾ ತಂಡದಿಂದ ದಾಸವಾಣಿ; ರಾತ್ರಿ 8.30ರಿಂದ ರಂಜಿನಿ ಕಲಾತಂಡ, ಮಂಡೆಕೋಲು ಅವರಿಂದ ಯಕ್ಷಗಾನ: ಮಹಿಷಾ ಮರ್ದಿನಿ.

■ **ಕರ್ನಾಟಕ ಕಲಾಮಂದಿರ ವೇದಿಕೆ :** ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 4.30 ರಿಂದ ಎಚ್.ಎಂ.ರವಿ ಮತ್ತು ತಂಡ, ಅಜ್ಜಂಪುರ ಅವರಿಂದ ವೀರಗಾಸೆ; ಸಂಜೆ 5 ರಿಂದ ಶ್ರೇಷ್ಠ ಲಕ್ಷ್ಮಿ ಕಲಾಶಾಲೆ, ಮಂಗಳೂರು ಅವರಿಂದ ವಯೋಲಿನ್; ಸಂಜೆ 5.30ರಿಂದ ಮಹೇಶ್ ಮತ್ತು ಹನುಮಂತು ತಂಡ, ಚಾಮರಾಜನಗರ ಅವರಿಂದ ಜಾನಪದ ಗಾಯನ; ಸಂಜೆ 6.30ರಿಂದ ಶ್ರೇಯಾ ವಿಜಯ ಕುಮಾರ್ ಮತ್ತು ತಂಡ, ಬೆಂಗಳೂರು ಅವರಿಂದ ಭರತನಾಟ್ಯ; ರಾತ್ರಿ 7.30 ರಿಂದ ಗುಂಡುರಾಜು ಮತ್ತು ತಂಡ, ಹಾಸನ ಅವರಿಂದ ತೊಗಲು ಗೊಂಬೆಯಾಟ; ರಾತ್ರಿ 8.30 ರಿಂದ ಇಶಾ ಪ್ರಭಾಕರ್ ಮತ್ತು ತಂಡ, ಮಂಡ್ಯ ಅವರಿಂದ ನೃತ್ಯರೂಪಕ : ಕೃಷ್ಣ ವೈಭವ.

■ **ಬಿ.ಎಂ. ಶ್ರೀ ಸಭಾಂಗಣ:** ಮೈಸೂರು ದಸರಾ ಕವಿಗೋಷ್ಠಿ, ನಾಡಗೀತೆಗೆ ನೂರರ ಸಂಭ್ರಮ ಸಾವಿರಾರು ಸ್ವರಗಳ ಸಂಗಮ, ಪಂಚ ಕಾವ್ಯದೌತಣ, ಘನ ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸಚಿವರಾದ ಕೆ.ವೆಂಕಟೇಶ್, ಶಿವರಾಜ್ ತಂಗಡಗಿ, ಡಾ.ಎಂ.ಸಿ. ಸುಧಾಕರ, ಉದ್ಘಾಟನೆ: ಕವಿ ಡಾ.ಅರವಿಂದ ಮಾಲಗತ್ತಿ, ಅಧ್ಯಕ್ಷತೆ: ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು: ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಬೆಳಗ್ಗೆ 9.30 ರಿಂದ.

■ **ಲಲಿತಕಲೆ ಮತ್ತು ಕರಕುಶಲ ಕಲೆ ಉಪಸಮಿತಿ:** ತೊಗಲು ಗೊಂಬೆ ಭಿತ್ತಿ ಚಿತ್ರಕಲಾ ಶಿಬಿರ ಮತ್ತು ಮೈಸೂರು ಶೈಲಿಯ ಸಾಂಪ್ರದಾಯಿಕ ಚಿತ್ರಕಲೆ ಪ್ರದರ್ಶನ, ಸಂಜೆ 4.30ರಿಂದ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ತಂಜಾವೂರು ಅವರಿಂದ ಜಾನಪದ ನೃತ್ಯ, ಕಲಾನಿಕೇತನ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ಜಾನಪದ ಸಂಭ್ರಮ, ಸ್ಥಳ: ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು, ಸಿದ್ಧಾರ್ಥನಗರ.


■ **ಅಂಬಾ ವಿಲಾಸ ಅರಮನೆ ಮುಂಭಾಗ:** ಬೆಳಗ್ಗೆ 7.30ಕ್ಕೆ ರಂಗೋಲಿ ಸ್ಪರ್ಧೆ, ಉದ್ಘಾಟನೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್.

■ **ಕೋಟೆ ಆಂಜನೇಯಸ್ವಾಮಿ ದೇವಸ್ಥಾನ:** ಬೆಳಗ್ಗೆ 9.30ಕ್ಕೆ ಮಕ್ಕಳ ದಸರಾ ಕಲಾಥಾನ್, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ.

■ **ಜೆ.ಕೆ.ಮೈದಾನ :** ಬೆಳಗ್ಗೆ 11ಕ್ಕೆ ಮಹಿಳಾ ದಸರಾ, ಉದ್ಘಾಟನೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್.

■ **ಕರ್ನಾಟಕ ಕಲಾಮಂದಿರ :** ಮಧ್ಯಾಹ್ನ 2.30ಕ್ಕೆ ಮಕ್ಕಳ ದಸರಾ ಕಾರ್ಯಕ್ರಮ, ಉದ್ಘಾಟನೆ : ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ.

ದಸರಾ ಫಲ-ಪುಷ್ಪ ಪ್ರದರ್ಶನ ಉದ್ಘಾಟನೆ



ಗ್ಯಾರಂಟಿ ಯೋಜನೆಯ ಆಕೃತಿ.



ಅಂಬಾರಿ ಹೊತ್ತ ಆನೆ ಆಕೃತಿ.



ದಂಡಿಯಾತ್ರೆಯ ಆಕೃತಿ.

ಹೂಗಳಲ್ಲಿ ಅರಳಿದ ಆಪರೇಷನ್ ಸಿಂಧೂರ, ಗಾಂಧಿ ಮಂಟಪ



ಕುಪ್ಪಣ್ಣ ಪಾರ್ಕ್‌ನಲ್ಲಿ ಆಯೋಜಿಸಿರುವ ದಸರಾ ಫಲಪುಷ್ಪ ಪ್ರದರ್ಶನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಫಲಪುಷ್ಪ ಪ್ರದರ್ಶನ ಅ.2ರವರೆಗೆ ನಡೆಯಲಿದ್ದು, ಪ್ರತಿದಿನ ಬೆಳಗ್ಗೆ 9ರಿಂದ ರಾತ್ರಿ 9.30ರವರೆಗೆ ವೀಕ್ಷಣೆಗೆ ಅವಕಾಶವಿದೆ. ವಯಸ್ಕರಿಗೆ 50 ರೂ., ಮಕ್ಕಳಿಗೆ 25 ರೂ .ಪ್ರವೇಶ ಶುಲ್ಕ ನಿಗದಿ ಮಾಡಲಾಗಿದೆ. ಫಲಪುಷ್ಪ ಪ್ರದರ್ಶನದಲ್ಲಿ 30 ಆಹಾರ ಮಳಿಗೆಗಳು ಪುಷ್ಪ ಪ್ರಿಯರ ನಾಲಿಗೆ ತಣಿಸಲಿವೆ.

ಮೈಸೂರು, ಸೆ.22(ಎಂಟಿವೈ)- ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ಆಯೋಜಿಸಿರುವ ವರ್ಣರಂಜಿತ ಫಲಪುಷ್ಪ ಪ್ರದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿ, ಗಾಜಿನ ಮನೆಯಲ್ಲಿ ಲಕ್ಷಾಂತರ ಹೂವುಗಳಿಂದ ನಿರ್ಮಿಸಿರುವ ಗಾಂಧಿ ಮಂಟಪ, ಚರಕದಿಂದ ನೂಲು ತೆಗೆಯುತ್ತಿರುವ ಮಹಾತ್ಮಗಾಂಧಿ ಆಕೃತಿ ಹಾಗೂ ದಂಡಿಯಾತ್ರೆ ಆಕೃತಿಗಳನ್ನು ವೀಕ್ಷಿಸಿ ಸಸ್ಯಕಾಶಿ ಸೌಂದರ್ಯಕ್ಕೆ ತಲೆದೂಗಿದರು.

ತೋಟಗಾರಿಕಾ ಇಲಾಖೆ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ತೋಟಗಾರಿಕಾ ಸಂಘದ ವತಿಯಿಂದ ಇಂದಿನಿಂದ ಅ.2ರವರೆಗೆ ಆಯೋಜಿಸಿರುವ ದಸರಾ ಫಲಪುಷ್ಪ ಪ್ರದರ್ಶನ ಆಕರ್ಷಣೀಯ ಕೇಂದ್ರಬಿಂದುವಾಗಿದ್ದು, ಲಕ್ಷಾಂತರ ಹೂವಿನ ಗಿಡಗಳು ಜನಾಕರ್ಷಿಸುತ್ತಿವೆ. ಗಾಜಿನ ಮನೆ ಸೇರಿದಂತೆ ಉದ್ಯಾನವನದ ವಿವಿಧೆಡೆ ಹೂವಿನಿಂದಲೇ ತಲೆ ಎತ್ತಿರುವ ವಿವಿಧ ಆಕೃತಿಗಳು ನೋಡುಗರ ಕಣ್ಮನ ಸೆಳೆಯುತ್ತಿದೆ.

ದಸರಾ ಮಹೋತ್ಸವದ ಮೊದಲ ದಿನವಾದ ಸೋಮವಾರ ಮಧ್ಯಾಹ್ನ ಕುಪ್ಪಣ್ಣ ಪಾರ್ಕ್‌ಗೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ನೀಡಿ ಗಾಜಿನ ಮನೆಯಲ್ಲಿ 3 ಲಕ್ಷ ಗುಲಾಬಿ ಹೂವಿನಿಂದ ನಿರ್ಮಿಸಿರುವ ಕನ್ಯಾಕುಮಾರಿಯಲ್ಲಿರುವ ಮಹಾತ್ಮ ಗಾಂಧಿ ಮಂಟಪ, ಚರಕದಲ್ಲಿ ನೂಲು ತೆಗೆಯುತ್ತಿರುವ ಗಾಂಧೀಜಿ ಆಕೃತಿ ವೀಕ್ಷಿಸಿ, ಗಾಂಧಿ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿದರು. ಬಳಿಕ ಗಾಂಧಿ ಮಂಟಪದ ಹಿಂಭಾಗ ನಿರ್ಮಿಸಿರುವ ದಂಡಿಯಾತ್ರೆ ಪ್ರತಿಮೆಯನ್ನು ವೀಕ್ಷಿಸಿದರು. ಅಲ್ಲದೆ, ಫಲಪುಷ್ಪ ಪ್ರದರ್ಶನದಲ್ಲಿ ಸರ್ಕಾರದ ಗ್ಯಾರಂಟಿ ಯೋಜನೆ ಸೇರಿದಂತೆ ಹೂವಿನಿಂದ ನಿರ್ಮಿಸಿರುವ ವಿವಿಧ ಆಕೃತಿಗಳನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಉದ್ಯಾನದಲ್ಲಿನ ಆಕೃತಿಗಳು: ಫಲಪುಷ್ಪ ಪ್ರದರ್ಶನದಲ್ಲಿ 'ಆಪರೇಷನ್ ಸಿಂಧೂರ' ಹೋರಾಟದ ಅಂಗವಾಗಿ ಸೇನೆಯ ಮೂರು ವಿಭಾಗಗಳನ್ನು ಸ್ಮರಿಸಲು ಕ್ರಮ ಕೈಗೊಳ್ಳಲಾಗಿದೆ. ಆಪರೇಷನ್ ಸಿಂಧೂರ ಯುದ್ಧದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ ಭಾರತೀಯ ಸೇನೆಯ ಮಹಿಳಾ ಅಧಿಕಾರಿಗಳಾದ ಕರ್ನಲ್ ಸೋಫಿಯಾ ಖುರೇಶಿ ಹಾಗೂ ವ್ಯೂಮಿಕಾ ಸಿಂಗ್ ಅವರಿಗೆ ಗೌರವ ಸಲ್ಲಿಸಲು ಭೂ ಸೇನೆಯ ಟ್ರಕ್, ವಾಯುಸೇನೆಯ ಜೆಟ್, ನೌಕಾದಳ ಹಡಗಿನ ಆಕೃತಿಗಳನ್ನು ನಿರ್ಮಿಸಲಾಗಿದೆ.

ಅಲ್ಲದೆ, ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಗ್ಯಾರಂಟಿ ಯೋಜನೆಗಳಾದ ಅನ್ನಭಾಗ್ಯ, ಯುವ ನಿಧಿ, ಗೃಹಜ್ಯೋತಿ, ಶಕ್ತಿ ಯೋಜನೆ ಹಾಗೂ ಗೃಹಲಕ್ಷ್ಮಿ ಯೋಜನೆಗಳ ಪುಷ್ಪಾಕೃತಿ, ನವದುರ್ಗೆಯರು, ಅಂಬಾರಿ ಹೊತ್ತ ಆನೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಆಕೃತಿ, ಭೂಮಿ ಸಂರಕ್ಷಣೆ ಸಂದೇಶ ಆಕೃತಿ ಸೇರಿದಂತೆ ಇನ್ನಿತರ ಆಕೃತಿಗಳು ಕಣ್ಮನ ಸೆಳೆಯುತ್ತಿವೆ.

ವಿವಿಧ ಸ್ಪರ್ಧೆ: ಫಲಪುಷ್ಪ ಪ್ರದರ್ಶನದ ಅಂಗವಾಗಿ ಕರ್ಜನ್ ಪಾರ್ಕ್‌ನಲ್ಲಿ ಸೆ.23 ರಂದು ಮಹಿಳೆಯರಿಗೆ ಹಾಗೂ ಮಕ್ಕಳಿಗೆ ರಂಗೋಲಿ ಸ್ಪರ್ಧೆ, ಸೆ.24ರಂದು ಪುಷ್ಪ ರಂಗೋಲಿ, ಸೆ.25ರಂದು ಭಾರತೀಯ ಪುಷ್ಪ ಕಲೆ ಹೂಗಳ ಜೋಡಣೆ, ಸೆ.26 ರಂದು ತರಕಾರಿ ಕೆತ್ತನೆ, ಸೆ.27ರಂದು ಇಕೆಬಾನ, ಸೆ.28ರಂದು ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹದೇವಪ್ಪ, ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಶಾಸಕರಾದ ಕೆ.ಹರೀಶ್‌ಗೌಡ, ಡಿ.ರವಿಶಂಕರ್, ಅನಿಲ್ ಚಿಕ್ಕಮಾದು, ದರ್ಶನ್ ಧ್ರುವನಾರಾಯಣ್, ಸಂಸದ ಸುನೀಲ್ ಬೋಸ್, ಗ್ಯಾರಂಟಿ ಯೋಜನೆ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಮಂಜುನಾಥ್ ಅಂಗಡಿ, ಹಿರಿಯ ಸಹಾಯಕ ನಿರ್ದೇಶಕರಾದ ಹಬೀಬಾ ನಿಶಾದ್, ತೋಟಗಾರಿಕಾ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಗಾಜಿನ ಮನೆಯಲ್ಲಿ ಹೂವುಗಳಿಂದಲೇ ತಲೆ ಎತ್ತಿರುವ ಗಾಂಧಿ ಮಂಟಪ.



ಆಪರೇಷನ್ ಸಿಂಧೂರ ಆಕೃತಿ.

ವಸ್ತುಪ್ರದರ್ಶನದಲ್ಲಿ ಭಾರತೀಯ ಸಶಸ್ತ್ರ ಪಡೆಯ ಯುದ್ಧ ಸಲಕರಣೆ, ಉಪಗ್ರಹ, ರಾಕೆಟ್ ಅನಾವರಣ







ಭಾರತೀಯ ಸೈನ್ಯದಲ್ಲಿ ಸೈನಿಕರು ಬಳಸಿರುವ ಗನ್‌ಗಳಾದ ಎಕೆ-47, ಎಕೆ-203, 8ಎಂಎಂ ರಾಕೆಟ್ ಲಾಂಚರ್ ಅನ್ನು ವಸ್ತುಪ್ರದರ್ಶನ ಆವರಣದಲ್ಲಿ ಕಾಣಬಹುದು.

ಮೈಸೂರು,ಸೆ.22(ಜಿಎ)-ಈ ಬಾರಿ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದಲ್ಲಿ ಭಾರತೀಯ ಸಶಸ್ತ್ರ ಪಡೆಯ ಯುದ್ಧ ಸಲಕರಣೆ ಹಾಗೂ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಉಪಗ್ರಹ, ರಾಕೆಟ್‌ಗಳ ಪ್ರದರ್ಶನ ವಿಶೇಷವಾಗಿದೆ.

ಈ ಬಾರಿ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ವಸ್ತುಪ್ರದರ್ಶನ ಮೈದಾನದಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದು ಹೊಸ ರೂಪವನ್ನು ನೀಡಿದ್ದು, ಕಳೆದ ಬಾರಿಗಿಂತಲೂ ಮತ್ತಷ್ಟು ಹೊಸದನ್ನು ನೀಡಲು ಮುಂದಾಗಿರುವ ಪರಿಣಾಮವಾಗಿ ಭಾರತೀಯ ರಕ್ಷಣಾ ಪಡೆಗೆ ಪತ್ರ ಬರೆದು ಈ ಬಾರಿಯ ದಸರಾ ವಸ್ತುಪ್ರದರ್ಶನದಲ್ಲಿ ಭಾರತೀಯ ಸಶಸ್ತ್ರ ಪಡೆಯ ಯುದ್ಧ ಸಲಕರಣೆಗಳನ್ನು ಪ್ರದರ್ಶನಕ್ಕೆ ಇಡುವಂತೆ ಪತ್ರ ಬರೆದು ನಂತರ ಬೆಂಗಳೂರಿನ ಕಚೇರಿಯಲ್ಲಿ ಆರ್ಮಿ ಲೆಫ್ಟಿನೆಂಟ್ ಕರ್ನಲ್ ಮ್ಯಾಥ್ಯೂಸ್ ಭೇಟಿ ಮಾಡಿ ಚರ್ಚಿಸಿದರ ಫಲವಾಗಿ ಈ ಬಾರಿ ವಸ್ತು ಪ್ರದರ್ಶನದಲ್ಲಿ ಯುದ್ಧ ಸಲಕರಣೆಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ.

ಇಂದು ಮೈಸೂರಿಗೆ ಬಾಣಸವಾಡಿ ಮಿಲಿಟರಿ ಗ್ಯಾರಿಸನ್ ತಂಡವು ಸೈನ್ಯದ ವಾಹನಗಳ ಮೂಲಕ ಬೃಹತ್ ಪೆಟ್ಟಿಗೆಗಳ ಜೊತೆಗೆ ಬಂದಿಳಿದ ಅಧಿಕಾರಿಗಳು ಸೂಕ್ಷ್ಮವಾಗಿ ಒಂದೊಂದೆ ಪೆಟ್ಟಿಗೆಗಳನ್ನು ಸುರಕ್ಷಿತವಾಗಿ ಇಳಿಸಿಕೊಂಡು ವಸ್ತು ಪ್ರದರ್ಶನ ಮೈದಾನದ ಆವರಣದಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ಜೋಡಿಸಿದರು. ಭಾರತೀಯ ಸೈನ್ಯದಲ್ಲಿ ಸೈನಿಕರು ಬಳಸಿರುವ ಗನ್‌ಗಳಾದ ಎಕೆ-47, ಎಕೆ-203, 8ಎಂಎಂ ರಾಕೇಶ್ ಲಾಂಚರ್, 30ಎಂಎಂ ಆಟೋಮೆಟಿಕ್ ಗ್ರಾನೆಟ್ ಸಿಸ್ಟಮ್, 7.62 ಎಂಎಂ ಸಿಗ್ ಸೌರ್ ಅಸಾಲ್ಟ್ ರೈಫಲ್, ನೆಗೆವ್ ಎಲ್‌ಎಂಜಿ ಸೇರಿದಂತೆ ಸಾಕಷ್ಟು ಆಟೋಮೆಟಿಕ್ ಗನ್‌ಗಳನ್ನು ನೋಡಿ ಅವುಗಳ ಮಾಹಿತಿ ಪಡೆದುಕೊಳ್ಳುವುದರೊಟ್ಟಿಗೆ ಸೈನಿಕರು ಬಳಸುವ ಪರಿಕರಗಳಾದ ಫ್ಲೈಯಿಂಗ್ ಸೂಟ್, ವಿಂಡ್ ವಾಚ್, ಜಿಪಿಎಸ್, ವಾಕಿಟಾಕಿ, ಹೆಲ್ಮೆಟ್, ರಕ್ಷಣೆಗಾಗಿ ಬಳಸಿ ಉಪಕರಣ, ಸೈನ್ಯದಿಂದ ಮಾಡಿರುವ ಅತ್ಯಾಧುನಿಕ ಬ್ರಿಡ್ಜ್, ಬಾಂಬ್ ಬ್ಲಾಕೇಟ್, ಟೆಲಿಸ್ಕೋಪ್, ಫೇಸ್ ಮಾಸ್ಕ್, ಸೂಸೈಡ್ ಬಾಂಬರ್ ಹೇಗೆ ಬಾಂಬ್ ಅಳವಡಿಸಿಕೊಂಡಿರುತ್ತಾರೆ ಎಂಬುದರ ಪ್ರತಿರೂಪ ಇಡಲಾಗಿದೆ.

ಪಕ್ಕದಲ್ಲಿ ಭಾರತೀಯ ನೌಕಾದಳದ ತಂಡದಿಂದ ನೌಕಾಪಡೆಯೂ ಬಳಸುವ ಪರಿಕರಗಳನ್ನು ಪ್ರದರ್ಶನಕ್ಕೆ ಇಡಲಾಗಿದ್ದು, ಅವುಗಳಲ್ಲಿ ಪ್ರಮುಖವಾಗಿ ನೌಕಾಪಡೆಯ ಹಡಗುಗಳ ಪ್ರತಿರೂಪದ ಜೊತೆಗೆ ಪರಿಕರಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಹಾಗೇ ಭಾರತೀಯ ವಾಯುಪಡೆಯ ಶಕ್ತಿ ಇಡೀ ವಿಶ್ವಕ್ಕೆ ತಿಳಿದಿದ್ದು, ಪರಾಕ್ರಮ ತೋರಿದ ವಾಯುಪಡೆಯ ಯುದ್ಧ ವಿಮಾನ ಮತ್ತು ಸಲಕರಣೆಗಳನ್ನು ಪ್ರದರ್ಶನಕ್ಕೆ ಇರಿಸಲಾಗಿದೆ.

ಮತ್ತೊಂದು ಭಾಗದಲ್ಲಿ ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆಯ ಪರಿಕರಗಳನ್ನು ಪ್ರದರ್ಶನಕ್ಕೆ ಇಡಲಾಗಿದ್ದು, ಅದು ಮತ್ತಷ್ಟು ರೋಚಕವಾಗಿದೆ. ಉಪಗ್ರಹ ಮತ್ತು ರಾಕೆಟ್‌ಗಳನ್ನು ಹೇಗೆ ತಯಾರಿಸಲಾಗುತ್ತದೆ. ಅವುಗಳಿಗೆ ಬಳಸುವ ಪದಾರ್ಥಗಳಾವುದು, ಹೇಗೆ ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಕಳುಹಿಸಲಾಗುತ್ತದೆ ಎಂಬುದನ್ನು ಸವಿವರವಾಗಿ ಮಾಹಿತಿ ನೀಡಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ರೂಪದಲ್ಲಿಯೇ ಮಳಿಗೆ ನಿರ್ಮಾಣಗೊಂಡಿದ್ದು, ಅದರೊಳಗೆ ಉಪಗ್ರಹ ಮತ್ತು ರಾಕೆಟ್‌ಗಳನ್ನು ಸನಿಹದಿಂದ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ.

ದಸರಾ ವಸ್ತು ಪ್ರದರ್ಶನದಲ್ಲಿ ನಂದಿನಿ ಕುಟೀರ ಉದ್ಘಾಟನೆ

ನಂದಿನಿ ಉತ್ಪನ್ನಗಳ ಮೇಲೆ ಶೇ.5ರಷ್ಟು ರಿಯಾಯ್ತಿ



ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಮೈಮುಲ್ ವತಿಯಿಂದ ನಿರ್ಮಿಸಿರುವ 'ನಂದಿನಿ ಕುಟೀರ' ಸೋಮವಾರ ಉದ್ಘಾಟನೆಗೊಂಡಿತು.


ಮೈಸೂರು, ಸೆ.22- ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ(ಮೈಮುಲ್)ದಿಂದ 'ನಂದಿನಿ ಕುಟೀರ' ಮಳಿಗೆ ತೆರೆಯಲಾಗಿದೆ.

ನಂದಿನಿ ಕುಟೀರ ಉದ್ಘಾಟಿಸಿದ ಮೈಮುಲ್ ಮಾಜಿ ಅಧ್ಯಕ್ಷ ಆರ್.ಚೆಲುವರಾಜು ಮಾತನಾಡಿ, ನವರಾತ್ರಿ ಅಂಗವಾಗಿ ನಂದಿನಿ ಉತ್ಪನ್ನಗಳ ಮೇಲೆ ಶೇ.5ರಷ್ಟು ರಿಯಾಯ್ತಿ ನೀಡಲಾಗುತ್ತಿದ್ದು, ಗ್ರಾಹಕರು ಸದುಪಯೋಪಡಿಸಿಕೊಳ್ಳಬೇಕು. ಈ 'ನಂದಿನಿ ಕುಟೀರ'ದಲ್ಲಿ ಮೈಮುಲ್ ಕಾರ್ಯ ಚಟುವಟಿಕೆಯ ಸಂಪೂರ್ಣ ಮಾಹಿತಿ ದೊರಕಲಿದೆ. ವಿಶೇಷವಾಗಿ ಸ್ಥಳದಲ್ಲೇ ಮೈಸೂರು ಪಾಕ್ ತಯಾರಿಸುವ ವಿಧಾನವನ್ನೂ ವೀಕ್ಷಿಸಬಹುದು. ಹಾಲು ಉತ್ಪನ್ನಗಳ ಮೇಲಿನ ಜಿಎಸ್‌ಟಿ ಕಡಿತಗೊಳಿಸಿರುವುದು ಸ್ವಾಗತಾರ್ಹ. ಅಮೆರಿಕಾದಲ್ಲೂ ನಂದಿನಿ ಉತ್ಪನ್ನ ಮಾರಾಟವಾಗುತ್ತಿರುವುದು ಸಂತಸದ ಸಂಗತಿ ಎಂದರು.

ಮೈಮುಲ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್ ಮಾತನಾಡಿ, ನಂದಿನಿ ಉತ್ಪನ್ನಗಳನ್ನು ಪ್ರತಿಯೊಬ್ಬರೂ ಬಳಸುವ ಮೂಲಕ ರೈತರ ಅಭಿವೃದ್ಧಿಗೆ ಕೈಜೋಡಿಸಬೇಕಿದೆ. ಸಮಗ್ರ ರೈತ ಕುಲವನ್ನು ಪ್ರೋತ್ಸಾಹಿಸಲು ಶ್ರಮಿಸುತ್ತಿರುವ ನಮ್ಮ ಒಕ್ಕೂಟದ ಬಗ್ಗೆ ಈ ಕುಟೀರದಲ್ಲಿ ತಿಳಿದುಕೊಳ್ಳಬಹುದು ಎಂದು ತಿಳಿಸಿದರು. ಈ ವೇಳೆ ನಿರ್ದೇಶಕರಾದ ಲೀಲಾ ಬಿ.ಕೆ.ನಾಗರಾಜ್, ಎ.ಟಿ.ಸೋಮಶೇಖರ, ಕೆ.ಈರೇಗೌಡ, ಕೆ.ಜಿ.ಮಹೇಶ್, ಸಿ.ಓ.ಪ್ರಕಾಶ್, ಪಿ.ಎಂ.ಪ್ರಸನ್ನ, ಕೆ.ಎಸ್.ಕುಮಾರ್, ದ್ರಾಕ್ಷಯಿಣಿ ಬಸವರಾಜಪ್ಪ, ನೀಲಾಂಬಿಕೆ, ಮಹೇಶ್ ಕುರಹಟ್ಟಿ, ಶಿವಗಾಮಿ ಷಣ್ಮುಗಂ, ಬಿ.ಎನ್.ಸದಾನಂದ, ಬಿ.ಎ.ಪ್ರಕಾಶ್, ಎ.ಬಿ.ಮಲ್ಲಿಕಾ ರವಿಕುಮಾರ್, ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎನ್.ಸುರೇಶ್ ನಾಯ್ಕ್ ಇನ್ನಿತರರು ಉಪಸ್ಥಿತರಿದ್ದರು.

ಚುನಾವಣೆ ವೇಳೆ ರಾಜಕಾರಣ ಮಾಡೋಣ ಬನ್ನಿ, ದಸರಾ ವಿಚಾರದಲ್ಲಿ ಕೆಟ್ಟ ರಾಜಕಾರಣ ಬೇಡ

ಬಿಜೆಪಿ ನಾಯಕರಿಗೆ ಸಿಎಂ ಸಿದ್ದರಾಮಯ್ಯ ಟಾಂಗ್



ಮೈಸೂರು, ಸೆ.22(ಬಿಎಲ್‌ಯು)- ಗೋಡಾ ಹೈ-ಮೈದಾನ್ ಹೈ, ಚುನಾವಣೆ ಸಂದರ್ಭದಲ್ಲಿ ರಾಜಕಾರಣ ಮಾಡೋಣ ಬನ್ನಿ, ಆದರೆ ನಾಡಹಬ್ಬ ದಸರಾ ವಿಚಾರದಲ್ಲಿ ಕೆಟ್ಟ ರಾಜಕಾರಣ ಬೇಡ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಜೆಪಿ ನಾಯಕರಿಗೆ ಟಾಂಗ್ ನೀಡಿದರು.

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಇಂದು ದಸರಾ ಉದ್ಘಾಟನಾ ಸಮಾರಂಭದಲ್ಲಿ ಮಾತಾಡಿದ ಅವರು, ದಸರಾ ಬಗ್ಗೆ ಹಾಗೂ ನಮ್ಮ ನಾಡಿನ ಸಾಂಸ್ಕೃತಿಕ ಹಿರಿಮೆ ಗರಿಮೆ ಬಗ್ಗೆ ಪರಿಚಯ ಇಲ್ಲದವರು ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟನೆ ಮಾಡಿಸಲು ತೀವ್ರ ವಿರೋಧ ಮಾಡಿದರು. ಇತಿಹಾಸ ತಿರುಚಿ, ಸ್ವಾರ್ಥ ರಾಜಕೀಯ ಮಾಡುವುದು ಅಕ್ಷಮ್ಯ ಅಪರಾಧ. ರಾಜಕಾರಣ ಮಾಡುವುದಿದ್ದರೆ ಚುನಾವಣೆಯಲ್ಲಿ ಮಾಡೋಣ. ಆದರೆ ನಾಡಹಬ್ಬ ದಸರಾದಲ್ಲಿ ಕೆಟ್ಟ ರಾಜಕಾರಣ ಮಾಡುವುದು ಸರಿಯಲ್ಲ.

ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟನೆ ಮಾಡಿಸುವುದನ್ನು ರಾಜ್ಯದ ಬಹುಪಾಲು ಜನರು ಸ್ವಾಗತಿಸಿದ್ದಾರೆ. ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿಯಿಂದ ದಸರಾ ಉದ್ಘಾಟಿಸುತ್ತಿರುವುದಕ್ಕೆ ಹೆಮ್ಮೆ ಪಟ್ಟಿದ್ದಾರೆ ಎಂದರು. ಬಾನು ಮುಷ್ತಾಕ್ ಅವರು ಮಹಿಳೆ, ಮುಸ್ಲಿಂರು ಎಂಬುದಕ್ಕಿಂತ ಮಾನವೀಯ ಮೌಲ್ಯ ಪಾಲಿಸುವ ಮನುಷ್ಯರು ಎಂದು ಪರಿಗಣಿಸಬೇಕು. ನಾವು, ನೀವೆಲ್ಲರೂ ದ್ವೇಷ ಬಿಟ್ಟು ಪರಸ್ಪರ ಪ್ರೀತಿ ವಿಶ್ವಾಸದಿಂದ ಬಾಳಬೇಕು. ಆದರೂ ದ್ವೇಷ ಮನೋಭಾವ ಅನುಸರಿಸಿದರೆ ಅವರು ದ್ವೇಷ ಆಚರಣೆ ಮಾಡುವ ಮನುಷ್ಯ ವಿರೋಧಿಗಳಾಗಿರುತ್ತಾರೆ. ಜ್ಯಾತ್ಯಾತೀತ, ಧರ್ಮಾತೀತ ಮನೋಭಾವ ಬೆಳೆಸಿಕೊಳ್ಳಬೇಕು. ಇದನ್ನೆ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಹೇಳಿದೆ. ನಾವು ಭಾರತೀಯರು ಎಂಬ ಹೆಮ್ಮೆ ಇದ್ದರೆ ನಮ್ಮ ಸಂವಿಧಾನ ಬಗ್ಗೆ ಕೂಡ ಹೆಮ್ಮೆ ಇರುತ್ತದೆ. ನಮ್ಮ ಹಕ್ಕು, ಜವಾಬ್ದಾರಿ ತಿಳಿಯಬೇಕಾದರೆ ಸಂವಿಧಾನದ ಆಶಯ ತಿಳಿಯಬೇಕು ಎಂದು ಸಿದ್ದರಾಮಯ್ಯ ಸಲಹೆ ನೀಡಿದರು.

> ಗುಡಿ- ಚರ್ಚು- ಮಸೀದಿ ಬಿಟ್ಟು ಹೊರ ಬನ್ನಿ, ನಮ್ಮದು ಸರ್ವ ಜನಾಂಗದ ಶಾಂತಿಯ ತೋಟ ಎಂಬ ಕುವೆಂಪು ವಾಣಿಯನ್ನು ಸಿದ್ದರಾಮಯ್ಯ ಇದೇ ವೇಳೆ ವಾಚಿಸಿದರು. ರಾಷ್ಟ್ರಕವಿ ಕುವೆಂಪು ಅವರ ಮಾತನ್ನು ನಾವು ಮರೆಯಬಾರದು. ಅವರು ಹೇಳಿದಂತೆ ಧರ್ಮಾತೀತ ಹಾಗೂ ಜ್ಯಾತ್ಯಾತೀತ ಭಾವನೆಯನ್ನು ಮೈಗೂಡಿಸಿಕೊಳ್ಳಬೇಕು.
> ನಮ್ಮ ಸರ್ಕಾರ ಜಾರಿಗೊಳಿಸಿದ ಗ್ಯಾರಂಟಿ ಯೋಜನೆಯನ್ನು ಬಿಜೆಪಿ ವಿರೋಧಿಸುತ್ತಿತ್ತು. ಆದರೆ ಈಗ ನಮ್ಮ ಗ್ಯಾರಂಟಿಯನ್ನು ಅವರೇ ಕಾಪಿ ಮಾಡುತ್ತಿದ್ದಾರೆ. ಹಾಗಾದರೆ ಗ್ಯಾರಂಟಿ ವಿರೋಧಿಸುವ ಬಿಜೆಪಿ ಹಾಗೂ ಜೆಡಿಎಸ್ ಅವರು ಇದರ ಉಪಯೋಗ ಪಡೆಯುತ್ತಿಲ್ಲವೇ? ನಮ್ಮ ಗ್ಯಾರಂಟಿ ಯೋಜನೆಯಿಂದ ಜನರ ತಲಾದಾಯ ಹೆಚ್ಚಳವಾಗಿದೆ ಎಂದು ಇದೇ ವೇಳೆ ಸಿದ್ದರಾಮಯ್ಯ ಸರ್ಕಾರದ ಸಾಧನೆಯನ್ನು ಕೊಂಡಾಡಿದರು.

ಮೈಸೂರು ಮಿತ್ರ ಮಂಗಳವಾರ 23 ಸೆಪ್ಟೆಂಬರ್ 2025

ಜಿಎಸ್‌ಟಿ ಇಳಿಸಿ ನುಡಿದಂತೆ ನಡೆದ ಮೋದಿ ಸರ್ಕಾರ

ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಶ್ಲಾಘನೆ

ಮಂಡ್ಯ, ಸೆ.22– ಪ್ರಧಾನಿ ನೇತೃತ್ವದ ಕೇಂದ್ರ ಸರ್ಕಾರ ಜಿಎಸ್‌ಟಿ ತೆರಿಗೆ ಇಳಿಸುವ ಮೂಲಕ ನುಡಿದಂತೆ ನಡೆದುಕೊಂಡಿದ್ದು, ಜನಪರ ನಿಂತ ಸರ್ಕಾರವಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಶ್ಲಾಘಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಎಸ್‌ಟಿ ತೆರಿಗೆ ಇಳಿಸುವ ಮೂಲಕ ದಿನನಿತ್ಯದ ವಸ್ತುಗಳ ಮೇಲೆ ಹೆಚ್ಚಿದ್ದ ತೆರಿಗೆ ಕಡಿಮೆಗೊಂಡಿದೆ. ಈ ಮೂಲಕ ಮಧ್ಯಮ ಮತ್ತು ಬಡ ವರ್ಗದ ಜನರಿಗೆ ಆಗುತ್ತಿದ್ದ ಆರ್ಥಿಕ ಹೊರೆ ಕಡಿತಗೊಂಡಿದೆ ಎಂದು ಹೇಳಿದರು.

ದಿನಬಳಕೆ ವಸ್ತುಗಳಾದ ಹೇರಾಯಿಲ್, ಶಾಂಪೂ, ಸೋಪು ಸೇರಿದಂತೆ ಇನ್ನಿತರೆ ವಸ್ತುಗಳ ಜಿಎಸ್‌ಟಿ ಶೇ.18ರಷ್ಟಿತ್ತು. ಆದರೆ ಇದೀಗ ಕೇವಲ ಶೇ.5ಕ್ಕೆ ಇಳಿದಿದೆ. ಬೆಣ್ಣೆ, ತುಪ್ಪ, ಹಾಲು, ತಿಂಡಿಗಳು, ಮಕ್ಕಳ ಸಾಮಾಗ್ರಿಗಳು ಇವೆಲ್ಲವೂ ಕೂಡ ಶೇ.12ರಿಂದ 5ಕ್ಕೆ ಇಳಿದಿದೆ. ಮಿನರಲ್ ವಾಟರ್, ಟಿವಿ, ವಾಷಿಂಗ್ ಮೆಷಿನ್, ರೆಸ್ಟೋರೆಂಟ್‌ನಲ್ಲಿ ಊಟದ ತೆರಿಗೆ ಶೇ.28ರಷ್ಟಿತ್ತು. ಇದೀಗ ಶೇ.5ಕ್ಕೆ ಇಳಿಕೆಯಾಗಿದೆ. ಯುಪಿಎ ಸರ್ಕಾರದಲ್ಲಿ ಸಿಮೆಂಟ್ ಶೇ.30ರಷ್ಟು ಇತ್ತು. ಇದೀಗ ಶೇ.18ಕ್ಕೆ ಇಳಿಕೆಯಾಗಿದೆ ಎಂದು ವಿವರಿಸಿದರು.

ಕೇಂದ್ರ ಸರ್ಕಾರ ತೆರಿಗೆ ಇಳಿಸಿರುವುದನ್ನು ದೇಶದ ಎಲ್ಲಾ ರಾಜ್ಯಗಳು ಸ್ವಾಗತ ಮಾಡಿದರೆ, ನಮ್ಮ ರಾಜ್ಯ ಮಾತ್ರ ವಿರೋಧ ವ್ಯಕ್ತಪಡಿಸುತ್ತಿದೆ. ಪಕ್ಷಾತೀತವಾಗಿ ಮೋದಿ ಅವರಿಗೆ ಧನ್ಯವಾದ ಅರ್ಪಿಸುತ್ತಿದ್ದಾರೆ. ಆದರೆ ಸಿದ್ದರಾಮಯ್ಯ ಸರ್ಕಾರ ಮಾತ್ರ ನಮಗೆ ನಷ್ಟವಾಗುತ್ತಿದೆ ಎಂದು ಬೊಬ್ಬೆ ಹೊಡೆಯುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ಕಿಡಿಕಾರಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಮುದ್ರಾಂಕ, ಔಷಧ, ನಂದಿನಿ ಹಾಲು, ಆಸ್ಪತ್ರೆ ಚಿಕಿತ್ಸೆ ವಾಹನ ನೋಂದಣಿ ಸೇರಿದಂತೆ ಇನ್ನಿತರೆ ವಿಚಾರದಲ್ಲಿ ತೆರಿಗೆ ಹೆಚ್ಚಿಸಿದೆ. ಕೇಂದ್ರ ಸರ್ಕಾರ ಈ ಪರಿ ತೆರಿಗೆ ಇಳಿಸಿದಾಗ ಸ್ಪರ್ಧಾತ್ಮಕವಾಗಿ ರಾಜ್ಯ ಸರ್ಕಾರವೂ ಕೂಡ ತೆರಿಗೆ ಇಳಿಸಲು ಮುಂದಾಗಬೇಕು. ಆದರೆ ಸಿದ್ದರಾಮಯ್ಯ ಸರ್ಕಾರ ತದ್ವಿರುದ್ಧ ಎಂಬಂತೆ ತೆರಿಗೆ ಇಳಿಸದೆ ಗಬ್ಬರ್ ಸಿಂಗ್ ಟ್ಯಾಕ್ಸ್ ಅನ್ನು ಜನರ ಮೇಲೆ ಹೇರುತ್ತಿದೆ ಎಂದು ಕಿಡಿಕಾರಿದರು.

ರಾಜ್ಯ ಸರ್ಕಾರ ಜಾತಿ ಸಮೀಕ್ಷೆ ಮಾಡಲು ಮುಂದಾಗಿದೆ. ಆದರೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಹೆಸರಿನಲ್ಲಿ ಜಾತಿ ಗಣತಿ ಏಕೆ ಬೇಕು? ಶೈಕ್ಷಣಿಕ ಸಮೀಕ್ಷೆ ಮಾಡುವುದಾದರೆ ಐದಾರು ಕಾಲಂನಲ್ಲಿ ಜಾತಿಯ ಬಗ್ಗೆಯೇ ಏಕೆ ಮುದ್ರಿಸಿದ್ದಾರೆ. ಇದರ ಹಿಂದೆ ದೊಡ್ಡ ಹುನ್ನಾರ ವಿದೆ. ಹಿಂದೂ ಧರ್ಮವನ್ನು ಒಡೆದು ಮತಾಂತರಗೊಳಿಸಬೇಕು ಎಂಬ ಹುನ್ನಾರವನ್ನು ಸಿದ್ದರಾಮಯ್ಯ ಮಾಡಿದ್ದು, ಮುಖ್ಯಮಂತ್ರಿಗಳು ಮತಾಂತರದ ಬ್ರಾಂಡ್ ಅಂಬಾಸಿಡರ್ ಆಗಿದ್ದಾರೆ ಎಂದು ಆರೋಪಿಸಿದರು.



ಸುದ್ದಿಗೋಷ್ಠಿಯಲ್ಲಿ ವಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿದರು.

ಸೋನಿಯಾ ಗಾಂಧಿ ಅವರನ್ನು ಮೆಚ್ಚಿಸಲು ಜಾತಿ ಸಮೀಕ್ಷೆ ನಡೆಸಲಾಗುತ್ತಿದೆ. ಅಕ್ಟೋಬರ್‌ನಲ್ಲಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕಾಗಿದೆ. ಡಿ.ಕೆ.ಶಿವಕುಮಾರ್ ಅವರು ಸಿಎಂ ಕುರ್ಚಿಗೆ ಟವಲ್ ಹಾಕಿ ದೇವಾಲಯಗಳನ್ನು ಸುತ್ತುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ತನ್ನ ವರ್ಚಸ್ಸು ಹೆಚ್ಚಿಸಿಕೊಳ್ಳಲು ಸಿದ್ದರಾಮಯ್ಯ ಜಾತಿಗಳನ್ನು ವಿಂಗಡಿಸಿ ಹಿಂದೂ ಧರ್ಮವನ್ನು ಒಡೆಯಲು ಹುನ್ನಾರ ನಡೆಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ, ಮುಖಂಡರಾದ ಸಚ್ಚಿದಾನಂದ, ಎಸ್.ಪಿ.ಸ್ವಾಮಿ, ಅಶೋಕ್ ಜಯರಾಂ, ವಸಂತ್ ಕುಮಾರ್, ಹೆಚ್.ಆರ್.ಅಶೋಕ್‌ಕುಮಾರ್, ಬಸವರಾಜು ಇದ್ದರು. ನಂತರ ವಿಪಕ್ಷ ನಾಯಕ ಆರ್.ಅಶೋಕ್ ನೇತೃತ್ವದಲ್ಲಿ ನಗರದ ಪೇಟೆಬೀದಿಯಲ್ಲಿ ಜಿಎಸ್‌ಟಿ ಸರಳೀಕರಣಗೊಳಿಸಿರುವುದಕ್ಕೆ ವರ್ತಕರೊಂದಿಗೆ ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಿದರು.

ಯುವಜನತೆ ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗಿ

ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್



ವಾರ್ಷಿಕ ಮಹಾಸಭೆಯಲ್ಲಿ ರೈತರನ್ನು ಅಭಿನಂದಿಸಲಾಯಿತು.

ಚಿನಕುರಳಿ, ಸೆ.22– ಹೈನುಗಾರಿಕೆಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸಾಕಷ್ಟು ಪ್ರೋತ್ಸಾಹ ನೀಡುತ್ತಿದ್ದು, ಯುವಜನತೆ ಅದನ್ನು ಸದ್ಬಳಕೆ ಮಾಡಿಕೊಂಡು ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ತಿಳಿಸಿದರು.

ಚಿನಕುರಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಯುವ ಜನತೆ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಹೈನುಗಾರಿಕೆಯನ್ನು ಹೈನೋದ್ಯಮವಾಗಿ ಬೆಳೆಸಬೇಕು. ಹೈನುಗಾರಿಕೆಯೂ ಗ್ರಾಮೀಣ ಜನರ ಆರ್ಥಿಕ ಸಬಲೀಕರಣಕ್ಕೆ ನೆರವಾಗುತ್ತಿದೆ ಎಂದರು.

ಈಗಾಗಲೇ ಒಕ್ಕೂಟದಿಂದ ವಿಮೆ ಮಾಡಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದ್ದು, ರೈತರು ಕಡ್ಡಾಯವಾಗಿ ರಾಸುಗಳಿಗೆ ವಿಮೆ ಮಾಡಿಸಬೇಕು. ಜೊತೆಗೆ ಷೇರುದಾರ ರೈತರು ಗುಂಪು ವಿಮೆ ಮಾಡಿಸಬೇಕು. ಚಿನಕುರಳಿ ಡೇರಿ ಪ್ರತಿ ವರ್ಷದಂತೆ ಈ ಸಾಲಿನಲ್ಲೂ 16 ಲಕ್ಷ ರೂ.ಗಳ ಲಾಭ ಗಳಿಸಿ ಉತ್ತಮವಾಗಿ ನಡೆಯುತ್ತಿದೆ. ಇದಕ್ಕೆ ಸಹಕಾರ ನೀಡಿದ ಎಲ್ಲಾ ಷೇರುದಾರರು, ಆಡಳಿತ ಮಂಡಳಿ ನಿರ್ದೇಶಕರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಮಾತನಾಡಿ, ಸಹಕಾರ ಸಂಘಗಳು ನಮ್ಮ ಮನೆ ಇದ್ದಂತೆ. ನಾವೆಲ್ಲರೂ ಜೊತೆಗೂಡಿ ಸಹಕಾರ ಸಂಘಗಳ ಅಭಿವೃದ್ಧಿಪಡಿಸುವ ಕೆಲಸ ಮಾಡಬೇಕು. ಚಿನಕುರಳಿ ಗ್ರಾಮದ ಡೇರಿ ಮತ್ತು ಸೊಸೈಟಿ ಎರಡು ಸಹ ಆರಂಭದಲ್ಲಿ ಸಣ್ಣ ಪ್ರಮಾಣದಲ್ಲಿ ಆರಂಭಗೊಂಡು ಲಾಭದಾಯಕವಾಗಿ ಬೆಳೆದಿವೆ. ಇದಕ್ಕೆ ಎಲ್ಲ ಷೇರುದಾರ ರೈತರ ಪರಿಶ್ರಮವೇ ಕಾರಣವಾಗಿದೆ. ಮುಂದೆಯೂ ಸಹ ಎಲ್ಲರೂ ಜತೆಗೂಡಿ ಸಂಘಗಳ ಅಭಿವೃದ್ಧಿಗೆ ಕೆಲಸ ಮಾಡಬೇಕು ಎಂದರು. ಇದೇ ವೇಳೆ ಡೇರಿ ಅಧಿಕ ಹಾಲು ಪೂರೈಕೆ ಮಾಡಿದ ರೈತರಿಗೆ ಡೇರಿ ವತಿಯಿಂದ ಅಭಿನಂದಿಸಲಾಯಿತು.

ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಸಿ.ಎಸ್.ಗೋಪಾಲಗೌಡ, ಗ್ರಾಪಂ ಸದಸ್ಯ ಸಿ.ಎ.ಲೋಕೇಶ್, ಮಾಜಿ ಸದಸ್ಯ ಸಿ.ಡಿ.ಮಹದೇವಪ್ಪ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಪ್ರಕಾಶ್, ಮನ್‌ಮುಲ್ ಉಪ ವ್ಯವಸ್ಥಾಪಕ ಆರ್.ಪ್ರಸಾದ್, ಡಾ.ಸಂತೋಷ್, ಡಾ.ಪ್ರಕಾಶ್, ಮಾರ್ಗ ವಿಸ್ತರಣಾಧಿಕಾರಿ ನಾಗೇಂದ್ರಕುಮಾರ್, ಡೇರಿ ಉಪಾಧ್ಯಕ್ಷ ಸಿ.ಆರ್.ರಮೇಶ್, ನಿರ್ದೇಶಕರಾದ ಆರ್.ವರದರಾಜು, ಸಿ.ಎಂ.ರಮೇಶ್, ಸಿ.ಎನ್.ಲೋಕೇಶ್, ಸಿ.ಎಸ್.ಕೆಂಪೇಗೌಡ, ಸಿ.ಎ.ಮಂಜುನಾಥ್, ಸಿ.ಬಿ.ನಾರಾಯಣಾಚಾರಿ, ಯೋಗೇಂದ್ರ, ವರಲಕ್ಷ್ಮೀ, ಯಶೋಧಮ್ಮ, ಹೇಮಾ, ಮಾಜಿ ಅಧ್ಯಕ್ಷ ವಾಸುದೇವ್, ಗಂಗಾಧರ್, ಕಾಳೇಗೌಡ, ನಾಗಣ್ಣ, ಕಾರ್ಯದರ್ಶಿ ಸಿ.ಕೆ.ಲೋಕೇಶ್, ಸಿ.ಆರ್.ಯೋಗೇಶ್, ಆನಂದ್, ಜಗದೀಶ್, ಆದರ್ಶ, ಸಂಜು ಹಾಜರಿದ್ದರು.

ಇಬ್ಬರು ಸರಗಳ್ಳರ ಬಂಧನ

ನಾಗಮಂಗಲ, ಸೆ.22– ತಾಲೂಕಿನ ವಿವಿಧೆಡೆ ಸರಗಳ್ಳತನ ಮಾಡಿದ್ದ ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಬಿಂಡಿಗನವಿಲೆ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಚಾಮರಾಜನಗರ ಜಿಲ್ಲೆ ಯಳಂದೂರು ತಾಲೂಕಿನ ಬನ್ನಿಸೆರೆಗ ಬಡಾವಣೆ ನಿವಾಸಿ ಗೋಪಾಲ(34) ಹಾಗೂ ಮಲ್ಲಿಕಾರ್ಜುನ (29) ಬಂಧಿತ ಆರೋಪಿಗಳು. ಇವರಿಂದ 20.6 ಗ್ರಾಂ ತೂಕದ ಚಿನ್ನದ ಸರ, ಬಜಾಜ್ ಪಲ್ಸರ್ ಬೈಕ್ ವಶಪಡಿಸಿಕೊಂಡಿದ್ದಾರೆ.

ಸೆ.2ರಂದು ಮಧ್ಯಾಹ್ನ ತಾಲೂಕಿನ ಸಾತೇನಹಳ್ಳಿ ಗ್ರಾಮದ ಕೆರೆ ದಾರಿಯಲ್ಲಿ ಗ್ರಾಮದ ನಿವಾಸಿ ಶೋಭ ಅವರು ತೆರಳುತ್ತಿದ್ದರು. ಈ ವೇಳೆ ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು ಅವರ ಕುತ್ತಿಗೆಯಲ್ಲಿದ್ದ 40 ಗ್ರಾಂ ತೂಕದ ಮಾಂಗಲ್ಯದ ಸರದ ಪೈಕಿ 25 ಗ್ರಾಂ ತೂಕದ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದರು. ಈ ಸಂಬಂಧ ಬಿಂಡಿಗನವಿಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿಗಳ ಪತ್ತೆಗೆ ನಾಗಮಂಗಲ ವೃತ್ತದ ಇನ್ಸ್‌ಪೆಕ್ಟರ್ ನಿರಂಜನ್ ನೇತೃತ್ವದಲ್ಲಿ ಬಿಂಡಿಗನವಿಲೆ ಠಾಣೆ ಎಸ್‌ಐ ಮಾರುತಿ ತಮ್ಮಣ್ಣನವರ್, ಮುಖ್ಯ ಪೇದೆ ಪ್ರಶಾಂತ್ ಕುಮಾರ್, ಇಂದ್ರಕುಮಾರ್, ಮಧುಕುಮಾರ್, ರವಿಕಿರಣ್, ಲೋಕೇಶ್, ಸಿಪಿಸಿಗಳಾದ ಶಂಕರ್ ನಾಯ್ಕ, ದಿನೇಶ್, ಕಿರಣ್ ಕುಮಾರ್, ಪ್ರಕಾಶ್ ಅವರನ್ನೊಳಗೊಂಡ ತಂಡ ರಚಿಸಲಾಗಿತ್ತು. ಬಳಿಕ ತನಿಖೆ ಕೈಗೊಂಡಿದ್ದ ಪೋಲಿಸರು ತಾಲೂಕಿನ ಹೊನ್ನಾವರ ಗ್ರಾಮದ ಬಳಿ ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಸಾಮರಸ್ಯ ನಡಿಗೆ ಅವಕಾಶ ನೀಡದ ಪೊಲೀಸರು

ಪ್ರಗತಿಪರ ಸಂಘಟನೆಗಳಿಂದ ಜಿಲ್ಲಾಡಳಿತದ ವಿರುದ್ಧ ಆಕ್ರೋಶ, ವ್ಯಾಪಕ ಬಂದೋಬಸ್ತ್

ಮದ್ದೂರು, ಸೆ.22– ಜನಪರ ಸಂಘಟನೆಗಳು ಪಟ್ಟಣದಲ್ಲಿ ಸಾಮರಸ್ಯ ನಡಿಗೆ ಜಾಥಾ ನಡೆಸಲು ಕರೆಕೊಟ್ಟಿದ್ದ ಹಿನ್ನೆಲೆಯಲ್ಲಿ ಸೋಮವಾರ ಪೊಲೀಸರು ಶಿವಪುರದ ಸತ್ಯಗ್ರಹಸೌಧದವರಗೆ ಜಾಥಾ ನಡೆಸಲು ನಿರಾಕರಿಸಿದ ಹಿನ್ನೆಲೆಯಲ್ಲಿ ಮಳವಳ್ಳಿ ರಸ್ತೆಯ ಟಿಎಪಿಸಿಎಂಎಸ್ ಆವರಣದಲ್ಲಿ ಸಭೆ ನಡೆಸಿದರು.

ಮಳವಳ್ಳಿ ರಸ್ತೆಯಲ್ಲಿರುವ ಪ್ರೊ.ನಂಜುಂಡಸ್ವಾಮಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಸಾಮರಸ್ಯ ನಡಿಗೆಗೆ ಚಾಲನೆ ನೀಡಲಾಯಿತು. ಶಿವಪುರದವರೆಗೆ ಕಾಲ್ನಡಿಗೆ ಜಾಥಾ ಮಾಡಲು ಪೊಲೀಸ್ ಇಲಾಖೆ ನಿರಾಕರಣೆ ಮಾಡಿದ ಹಿನ್ನೆಲೆಯಲ್ಲಿ ಪ್ರತಿಮೆ ಬಳಿಯೇ ಇದ್ದ ಟಿಎಪಿಸಿಎಂಎಸ್‌ಗೆ ಸೇರಿದ ಆವರಣದಲ್ಲಿಯೇ ಸೌಹಾರ್ದ ಸಾಮರಸ್ಯದ ನಡಿಗೆಗೆ ಚಾಲನೆ ನೀಡಿದ ಬಳಿಕ ಸಭೆ ನಡೆಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಪುರಸಭಾ ಮಾಜಿ ಅಧ್ಯಕ್ಷ ಎಂ.ಸಿ.ಬಸವರಾಜು, ಜಿಲ್ಲೆ ಶಾಂತಿ, ಸಾಮರಸ್ಯ ಹಾಗೂ ಸಹಬಾಳ್ವೆಗೆ ಹೆಸರಾಗಿದೆ. ಇಂತಹ ಜಿಲ್ಲೆಯಲ್ಲಿ ಕೆಲವರು ಕೋಮು ಗಲಭೆ ಉಂಟು ಮಾಡುವ ಮೂಲಕ ಮುಂದೆ ಅಧಿಕಾರ ಹಿಡಿಯಲು ಹುನ್ನಾರ ನಡೆಸಿದ್ದಾರೆ. ಆ ಪಿತೂರಿ ವಿರುದ್ಧ ವಿವಿಧ ಜನಪರ ಸಂಘಟನೆಗಳ ನಾವೆಲ್ಲರೂ ಸೌಹಾರ್ದ ಸಾಮರಸ್ಯ ನಡಿಗೆಯನ್ನು ಸೋಮವಾರ ನಡೆಸುವ ಮೂಲಕ ಸಮಾಜದಲ್ಲಿ ಶಾಂತಿ, ಸೌಹಾರ್ದತೆ ನೆಲೆಸಬೇಕು ಎಂಬ ಸಂದೇಶ ನೀಡುತ್ತಿದ್ದೇವೆ ಎಂದರು.

ರೈತ ಸಂಘದ ಜಿಲ್ಲಾಧ್ಯಕ್ಷ ಕೆಂಪೂಗೌಡ, ಸಿಪಿಐಎಂನ ಕೃಷ್ಣೇಗೌಡ, ಕರ್ನಾಟಕ ಕೋಮು ಸೌಹಾರ್ದ ವೇದಿಕೆ ರಾಜಶೇಖರ್ ಮೂರ್ತಿ, ಶ್ರೀರಂಗಪಟ್ಟಣ ಕೋಮು ಸೌಹಾರ್ದ ವೇದಿಕೆ ಇಲಿಯಾಸ್ ಅಹಮದ್, ಸಿಐಟಿಯು ಸಿ.ಕುಮಾರಿ, ಜನವಾದಿ ಮಹಿಳಾ ಸಂಘಟನೆ ದೇವಿ, ಚಿಂತಕರಾದ ಭೂಮಿಗೌಡ, ಪ್ರೊ.ಹುಲ್ಕೆರೆ ಮಹದೇವ, ಪ್ರೊ.ಚಂದ್ರಶೇಖರನ್, ಎಂ.ಸಿ.ಬಸವರಾಜು, ಮಳವಳ್ಳಿ ಕೃಷ್ಣ, ಲೇಖಕ ರಾಜೇಂದ್ರ ಪ್ರಸಾದ್, ಬೋರಾಪುರ ಶಂಕರೇಗೌಡ, ಉಮೇಶ, ಸಿಪಿಎಂನ ತಿಮ್ಮೇಗೌಡ, ಹನುಮೇಶ್, ಜಿ.ರಾಮಕೃಷ್ಣ, ಟಿ.ಯಶ್ವಂತ್, ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ಜಿಲ್ಲಾಧ್ಯಕ್ಷ ದೊಡ್ಡರಸಿನಕೆರೆ ಶಿವಲಿಂಗಯ್ಯ, ತಾಲೂಕು ಅಧ್ಯಕ್ಷ ಡಿ.ಸಿ.ಮಹೇಂದ್ರ, ಜನವಾದಿ ಸಂಘಟನೆಯ ದೇವಿ, ಜನಶಕ್ತಿ ಸಂಘಟನೆಯ ಸಿದ್ದರಾಜು, ನಗರಕೆರೆ ಜಗದೀಶ್, ಬಿ.ಕೃಷ್ಣಪ್ರಕಾಶ್, ಮಹಿಳಾ ಮುನ್ನಡೆಯ ಶಿಲ್ಪ, ಅಂಜಲಿ, ದಸಂಸದ ಶಿವರಾಜು ಮರಳಿಗ, ಅಂದಾನಿ ಸೋಮನಹಳ್ಳಿ, ಎಂ.ವಿ.ಕೃಷ್ಣ, ಇತರ ಸಂಘಟನೆಗಳ ಮುಖಂಡರಿದ್ದರು.

ವಿವಿಧೋದ್ದೇಶ ಸಂಘಗಳಾಗಿ ರೂಪುಗೊಂಡ ಪಿಎಸಿಎಸ್‌ಗಳು

ಕೆ.ಆರ್.ಪೇಟೆ, ಸೆ.22– ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಈಗ ವಿವಿಧೋದ್ದೇಶ ಸಂಘಗಳಾಗಿವೆ. ಹಿಂದೆ ಕೇವಲ ಪಡಿತರ ವಸ್ತು, ರಸಗೊಬ್ಬರ, ಬಿತ್ತನೆ ಬೀಜ ಮಾರಾಟ ಮಾಡಬೇಕು ಎಂಬ ನಿಯಮವಿತ್ತು. ಈಗ ರೈತರಿಗೆ ಅನುಕೂಲವಾಗುವ ಹಾಗೂ ಸಹಕಾರ ಸಂಘದ ಅಭಿವೃದ್ಧಿಗೆ ಪೂರಕವಾದ ವ್ಯವಹಾರಗಳನ್ನು ಮಾಡಿ ಆದಾಯ ಗಳಿಸಲು ಮುಕ್ತ ಅವಕಾಶ ನೀಡಲಾಗಿದೆ ಎಂದು ಅಗ್ರಹಾರ ಬಾಚಹಳ್ಳಿ ಪಿಎಸಿಎಸ್ ಅಧ್ಯಕ್ಷ ಅಶೋಕ್ ತಿಳಿಸಿದರು.



ತಾಲೂಕಿನ ಅಗ್ರಹಾರಬಾಚಹಳ್ಳಿ ವಿವಿಧೋದ್ದೇಶ ಪಿಎಸಿಎಸ್‌ನ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದೇಶದ ಯಾವುದೇ ಸಂಘ ಅಥವಾ ಬ್ಯಾಂಕ್‌ನಲ್ಲಿ ಶೂನ್ಯ ಬಡ್ಡಿ ದರದಲ್ಲಿ ರೈತರಿಗೆ ಸಾಲ ನೀಡುವ ಯೋಜನೆ ಇಲ್ಲ. ಆದರೆ ಸಹಕಾರ ಸಂಘಗಳಲ್ಲಿ ಮಾತ್ರ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತಿದೆ. ಹಾಗಾಗಿ ರೈತರು ಸಂಘದ ಷೇರುದಾರರಾಗುವ ಮೂಲಕ ಬಡ್ಡಿ ಇಲ್ಲದೇ ಇರುವ ಸಾಲ ಸೌಲಭ್ಯವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಅಲ್ಲದೇ ಸಕಾಲಕ್ಕೆ ಪಡೆದ ಸಾಲ ಮರುಪಾವತಿಸಬೇಕು ಎಂದರು.

ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಸಮೀಪ ಸರ್ಕಾರಿ ಜಾಗವಿದ್ದು ಸದರಿ ಜಾಗವನ್ನು ಗ್ರಾಪಂ ಆಡಳಿತ ಮಂಡಳಿ ಅಳತೆ ಮಾಡಿ ಗುರುತಿಸಿಕೊಟ್ಟರೆ ಸಂಘದ ಕಟ್ಟಡ ನಿರ್ಮಿಸಲು ಆಡಳಿತ ಮಂಡಳಿ ಸಿದ್ಧವಿದೆ ಎಂದರು.

ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎ.ಬಿ.ಕುಮಾರ್ ಮಾತನಾಡಿದರು. ಸಂಘದ ಕಾರ್ಯದರ್ಶಿ ಕೆ.ಜೆ.ರಾಮಸ್ವಾಮಿ ಸಂಘದ ಆಡಿಟ್ ವರದಿ ಮಂಡಿಸಿದರು. ಸಹಕಾರ ಸಂಘದ ಉಪಾಧ್ಯಕ್ಷ ಕುಮಾರ್, ನಿರ್ದೇಶಕರಾದ ಅಶೋಕ್, ಎ.ಬಿ.ಮಹೇಂದ್ರ, ಎ.ಸಿ.ವೆಂಕಟೇಶ್ವರ್, ಚಂದ್ರೇಗೌಡ, ರಾಧಾ, ಮಣಿಯಮ್ಮ, ಜಯರಾಂ, ಸುರೇಶ್, ಪಾರ್ವತಮ್ಮ, ಎಲ್.ಎಂ.ಚೆಲುವರಾಜೇಗೌಡ ಸೇರಿದಂತೆ ಇತರರಿದ್ದರು.

ಒಂದನೇ ಪುಟದಿಂದ

ಮೈಸೂರು ದಸರಾ ಆರಂಭ

ತಾಯಿ ಚಾಮುಂಡೇಶ್ವರಿ ದರ್ಶನ ಪಡೆದರು. ಈ ಸಂದರ್ಭದಲ್ಲಿ ದೇವಸ್ಥಾನದ ಪ್ರಧಾನ ಆಗಮಿಕರಾದ ಡಾ.ಎನ್.ಶಶಿಶೇಖರ್ ದೀಕ್ಷಿತ್ ಅವರು ದೇವರಲ್ಲಿ ಅರ್ಚನೆ ಮಾಡಲು ಫಲತಾಂಬೂಲದ ತಟ್ಟೆಯನ್ನು ತಂದಾಗ ಬಾನು ಮುಷ್ತಾಕ್ ಅವರು ಕೈಯಿಂದ ಸ್ಪರ್ಶ ಮಾಡಿ ನಮಸ್ಕರಿಸಿದರು. ಈ ವೇಳೆ ಡಾ.ಶಶಿಶೇಖರ್ ದೀಕ್ಷಿತ್ ಅವರು ಬಾನು ಮುಷ್ತಾಕ್ ಅವರ ಹೆಸರಿನಲ್ಲಿ ಅರ್ಚನೆ ಸೇರಿದಂತೆ ಇತರೆ ಪೂಜಾ ಕೈಂಕರ್ಯ ನೆರವೇರಿಸಿದರು.

ಅರ್ಚನೆ ಮಾಡಿದ ಫಲತಾಂಬೂಲದ ಪ್ರಸಾದವನ್ನು ಬಾನು ಮುಷ್ತಾಕ್ ಅವರಿಗೆ ನೀಡಿದ ಡಾ.ದೀಕ್ಷಿತ್ ಅವರು, ರೇಷ್ಮೆ ಶಾಲು ಹಾಗೂ ಮಲ್ಲಿಗೆ ಹೂವಿನ ಹಾರ ಹಾಕಿ ಗೌರವಿಸಿದರು. ಈ ವೇಳೆ ಅಲ್ಲೇ ಹಾಜರಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಆಹಾರ ಮತ್ತು ನಾಗರಿಕ ಸಚಿವ ಕೆ.ಹೆಚ್.ಮುನಿಯಪ್ಪ ಸೇರಿದಂತೆ ಇತರರಿಗೆ ಕೂಡ ರೇಷ್ಮೆ ಶಾಲು ಹೊದಿಸಿ ಸನ್ಮಾನಿಸಿದರು.

ಸುಮಾರು 20 ನಿಮಿಷಗಳ ಕಾಲ ಗರ್ಭಗುಡಿ ಬಳಿಯ ಪ್ರಾಂಗಣದಲ್ಲಿ ಇದ್ದ ಬಾನು ಮುಷ್ತಾಕ್ ಅವರು ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು. ನಂತರ ದೇವಸ್ಥಾನದಲ್ಲಿ ಪ್ರದಕ್ಷಿಣೆ ಹಾಕಿ, ಗರುಡ ಕಂಬದ ಮುಂದಿರುವ ತಾಯಿ ಚಾಮುಂಡೇಶ್ವರಿ ಪಾದ ಸ್ಪರ್ಶ ಮಾಡಿ ಶಿರಬಾಗಿ ನಮಸ್ಕರಿಸಿದರು. ತರುವಾಯ ವೇದಿಕೆ ಕಾರ್ಯಕ್ರಮಕ್ಕೆ ಆಗಮಿಸಿದ ಬಾನು ಮುಷ್ತಾಕ್ ಅವರು ಬೆಳ್ಳಿ ರಥದಲ್ಲಿ ಪುಷ್ಪಾಲಂಕಾರದಿಂದ ಕಂಗೊಳಿಸುತ್ತಿದ್ದ ನಾಡದೇವತೆ ತಾಯಿ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡಿ 11 ದಿನಗಳ ಮೈಸೂರು ದಸರಾಗೆ ಸಾಂಪ್ರದಾಯಿಕವಾಗಿ ಚಾಲನೆ ನೀಡಿದರು.

ಬಾನು ಮುಷ್ತಾಕ್ ಅವರು ದಸರಾ ಉದ್ಘಾಟನೆ ವೇಳೆ ಹಿಂದೂ ಧಾರ್ಮಿಕ ವಿಧಿ ವಿಧಾನವನ್ನು ಪಾಲಿಸುವುದಿಲ್ಲ ಎಂದು ಮೂಗು ಮುರಿಯುತ್ತಿದ್ದವರಿಗೆ ತಿರುಗೇಟು ನೀಡಿದರು. ದಸರಾ ಉದ್ಘಾಟನೆ ವೇಳೆ ನಡೆಯುವ ಎಲ್ಲಾ ಧಾರ್ಮಿಕ ಪೂಜಾ ವಿಧಾನದಲ್ಲಿ ಭಾಗಿಯಾಗಿದ್ದ ಬಾನು ಮುಷ್ತಾಕ್ ಅವರು ಸಂಪ್ರದಾಯವನ್ನು ಚಾಚೂ ತಪ್ಪದೆ ಪಾಲಿಸಿದರು.

ಚಾಮುಂಡೇಶ್ವರಿ ದರ್ಶನ ಮಾಡಬೇಕೆಂಬ ಬಯಕೆ ಈಡೇರಿದೆ

ನಾಡ ದೇವತೆ ತಾಯಿ ಚಾಮುಂಡೇಶ್ವರಿ ದರ್ಶನ ಮಾಡಬೇಕೆಂದು ತುಡಿಯುತ್ತಿದ್ದ ನನ್ನ ಬಯಕೆ ಇಂದು ಈಡೇರಿದೆ ಎಂದು ಬಾನು ಮುಷ್ತಾಕ್ ಸಂತೃಪ್ತ ಭಾವ ವ್ಯಕ್ತಪಡಿಸಿದರು.

ನನಗೆ ಬೂಕರ್ ಪ್ರಶಸ್ತಿ ಬಂದ ಸಂದರ್ಭದಲ್ಲಿ ಚಾಮುಂಡಿ ಬೆಟ್ಟಕ್ಕೆ ಬಂದು ಚಾಮುಂಡೇಶ್ವರಿ ದರ್ಶನ ಪಡೆಯುವಂತೆ ಎಂದು ನನ್ನ ಸ್ನೇಹಿತೆ ಆಹ್ವಾನವಿತ್ತಿದ್ದಳು. ಆದರೆ ಅದು ಸಾಧ್ಯವಾಗಿರಲಿಲ್ಲ. ಚಾಮುಂಡೇಶ್ವರಿ ಸನ್ನಿಧಿಗೆ ಬರಬೇಕೆಂದು ನನ್ನ ಮನಸು ತುಡಿಯುತ್ತಿತ್ತು. ಆದರೆ ಸಾಧ್ಯವಾಗಿರಲಿಲ್ಲ ಎಂದರು. ಆದರೆ ಈಗ ರಾಜ್ಯ ಸರ್ಕಾರದ ಆಹ್ವಾನದ ಮೂಲಕ ದೇವಿ ನನ್ನನ್ನು ತನ್ನ ಸನ್ನಿಧಿಗೆ ಕರೆಸಿಕೊಂಡಿದ್ದಾಳೆ. ಚಾಮುಂಡೇಶ್ವರಿ ದರ್ಶನ ಪಡೆದು ಕೃತಾರ್ಥನಾಗಿದ್ದೇನೆ. ಚಾಮುಂಡೇಶ್ವರಿ ಕೃಪಾಶೀರ್ವಾದದಿಂದ ದಸರಾ ಉದ್ಘಾಟನೆ ಮಾಡಿದ್ದೇನೆ ಎಂದು ಬಾನು ಮುಷ್ತಾಕ್ ಹೇಳಿದರು.

ಕೆಲವು ಬೆಳವಣಿಗೆಗಳಿಂದ ಏರು ಪೇರುಗಳಾಗಿ ಅನಿರೀಕ್ಷಿತ ಸನ್ನಿವೇಶಗಳು ಎದುರಾದರೂ ತಾಯಿ ನನ್ನನ್ನು ಕರೆಸಿಕೊಂಡಿದ್ದಾಳೆ. ಮೈಸೂರು ದಸರಾ ಉದ್ಘಾಟನೆ ಮಾಡುತ್ತಿರುವುದು ನನ್ನ ಬದುಕಿನಲ್ಲಿ ಅತ್ಯಂತ ಅದ್ಭುತ ಘಳಿಗೆಯಾಗಿದೆ. ಅಲ್ಲದೆ ನನ್ನ ಜೀವನದ ಉತ್ತುಂಗದ ಗೌರವದ ದಿನ ಎಂದು ಬಣ್ಣಿಸಿದರು. ನನಗೆ ಬದುಕು ಹಲವು ಪಾಠಗಳನ್ನು ಕಲಿಸಿದೆ. ಅದರಲ್ಲಿ ಮುಖ್ಯವಾಗಿರುವುದು ಅಂದರೆ ವ್ಯಕ್ತಿಯಿಂದ ಸಮಷ್ಟಿ ಕಡೆ ಸಾಗುವುದಾಗಿದೆ. ನನ್ನ ಬದುಕಿನ ದರ್ಶನ ಜನಪರವಾಗಿದ್ದು, ಮರದ ನೆರಳಿನಂತೆ, ತಂಪಾದ ನದಿಯಂತೆ ಹರಿಯುವ ವಂತಾಗಿದೆ ಎಂದರು. ಇಂದು ವಿಶ್ವದಲ್ಲಿ ಯುದ್ಧದ ಜ್ವಾಲೆ ಸುಡುತ್ತಿದೆ. ದ್ವೇಷ ಹಾಗೂ ರಕ್ತಪಾತವಾಗುತ್ತಿರುವ ಈ ಸಂದರ್ಭದಲ್ಲಿ ಸರ್ವ ಜನಾಂಗದ ಶಾಂತಿಯನ್ನು ಬಿಂಬಿಸುವ ದಸರಾ ಎಲ್ಲರ ಕಿವಿಯಲ್ಲಿ ಪ್ರತಿಧ್ವನಿಸಲಿ ಎಂದು ಆಶಿಸಿದ ಬಾನು ಮುಷ್ತಾಕ್ ಅವರು, ಅಸ್ತ್ರದಿಂದ ಅಕ್ಷರ ಗೆಲ್ಲಲು ಸಾಧ್ಯವಿಲ್ಲ, ಹಗೆಗಳಿಂದ ಪ್ರೀತಿಯ ಬದುಕು ಗೆಲ್ಲಲು ಸಾಧ್ಯವಿಲ್ಲ ಎಂದು ಪುನರುಚ್ಚರಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಹೆಚ್.ಮುನಿಯಪ್ಪ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಶಾಸಕರಾದ ಕೆ.ಹರೀಶ್ ಗೌಡ, ರವಿಶಂಕರ್, ಎ.ಆರ್.ಕೃಷ್ಣಮೂರ್ತಿ, ಡಾ.ತಿಮ್ಮಯ್ಯ, ರಮೇಶ್ ಬಂಡಿಸಿದ್ದೇಗೌಡ, ತನ್ವೀರ್ ಸೇಠ್, ಅನಿಲ್ ಚಿಕ್ಕಮಾದು, ಟಿ.ಎಸ್.ಶ್ರೀವತ್ಸ, ವಿವೇಕಾನಂದ, ಗ್ಯಾರಂಟಿ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್ ಸೇರಿದಂತೆ ಹಲವು ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪ್ರೀತಿಯಿಂದ ಬದುಕು ಅರಳಿಸಬಹುದು...

ಆಪ್ಯಾಯಮಾನವಾದ ವಿಚಾರವಾಗಿದೆ ಎಂದು ಹೇಳಿದರು. ಮೈಸೂರು ಅರಸರ ಸಂಸ್ಕೃತಿ ಪರಂಪರೆಯಿಂದ ಹಿಡಿದು ಕನ್ನಡ ಭಾಷೆಯ ಅಂತರಾಳದವರೆಗೆ ಹೃದಯ ಸ್ಪಂದನೆಯನ್ನು ದಸರಾ ಹಬ್ಬ ಸ್ಮರಿಸುತ್ತದೆ. ಬದುಕಿನ ಶಾಂತಿಯನ್ನು ಕಾಪಾಡುವ ನಮ್ಮೆಲ್ಲರ ಸರ್ವ ಜನಾಂಗದ ಶಾಂತಿಯ ತೋಟವಾಗಿದೆ ಎಂದು ಬಾನು ಮುಷ್ತಾಕ್ ಅವರು ತಿಳಿಸಿದರು.

ಶಕ್ತಿ ದೇವತೆ ಚಾಮುಂಡೇಶ್ವರಿ ಮಹಿಮೆ ಕೊಂಡಾಡಿದ ಬಾನು ಮುಷ್ತಾಕ್–ಮೈಸೂರು ದಸರಾ ಶಾಂತಿಯ ಹಬ್ಬ, ಸೌಹಾರ್ದದ ಮೇಳ, ಸರ್ವ ಜನಾಂಗದ ಶಾಂತಿಯ ತೋಟವಾಗಿದೆ. ನಾವು ಪ್ರಜಾ ಪ್ರಭುತ್ವದ ಮೌಲ್ಯ, ಸಂಸ್ಕೃತಿ, ನಂಬಿಕೆಗಳನ್ನು ಹೃದಯ ತುಂಬಿ ಗೌರವಿಸಿ ನಮ್ಮ ಬದುಕನ್ನು ಶ್ರೀಮಂತಗೊಳಿಸಬೇಕಿದೆ ಎಂದು ಹೇಳಿದರು.

ಭಾರತದ ಈ ನೆಲ ಐಕ್ಯತೆಯ ಸುಗಂಧವಾಗಿದೆ, ಸೌಹಾರ್ದತೆ ಮಿಳಿತವಾಗಿದೆ, ಮಾನವೀಯ ಪ್ರೀತಿಯ ಪ್ರತೀಕವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ ಬಾನು ಮುಷ್ತಾಕ್ ಅವರು, ತಾಯಿ ಚಾಮುಂಡೇಶ್ವರಿಯ ಮಹಿಮೆಯನ್ನು ಕೊಂಡಾಡಿದರು. ತಾಯಿ ಚಾಮುಂಡೇಶ್ವರಿ ಸತ್ಯ, ಧೈರ್ಯ ಹಾಗೂ ರಕ್ಷಕತ್ವದ ಸಂಕೇತವಾಗಿದೆ, ಈ ಎಲ್ಲಾ ಅಂಶಗಳು ದಸರಾ ಹಬ್ಬದಲ್ಲಿ ಪಸರಿಸುತ್ತದೆ ಎಂದರು. ಮೈಸೂರು ದಸರಾ ನಾಡಿಗೆ ಮಾತ್ರ ಸೀಮಿತವಾಗದೆ, ರಾಜ್ಯ ಹಾಗೂ ವಿದೇಶಗಳಲ್ಲಿ ಕೂಡ ಮಹತ್ವ ಪಡೆಯಬೇಕು. ಈ ಮೂಲಕ ಇಡೀ ವಿಶ್ವಕ್ಕೆ ಶಾಂತಿ, ಸಹಬಾಳ್ವೆ, ದೀಪ ಬೆಳಗಬೇಕು. ತಾಯಿ ಸನ್ನಿಧಿಯಲ್ಲಿ ನಾವು ಬೆಳಗಿರುವ ಈ ದೀಪ ಇಡೀ ವಿಶ್ವಕ್ಕೆ ಬೆಳಕಾಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಖಾಸಗಿ ದರ್ಬಾರ್



ತ್ರಿಶಿಕಾ ಕುಮಾರಿ ಒಡೆಯರ್ ಅವರು ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪಾದಪೂಜೆ ಮಾಡಿ, ಪುಷ್ಪಾರ್ಚನೆ ಮಾಡುತ್ತಿರುವುದು.



ಆದ್ಯವೀರ್ ಒಡೆಯರ್ ಅವರು ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಪಾದಕ್ಕೆ ಪುಷ್ಪಾರ್ಚನೆ ಮಾಡುತ್ತಿರುವುದು.

ಸಿಂಹಾಸನದ ಮೇಲೆ ಎದ್ದು ನಿಂತು ಸೆಲ್ಯೂಟ್ ಮಾಡಿ, ಹೊಗಳು ಬಟ್ಟರು ಹಾಗೂ ದೀವಟಿಗೆಕಾರರಿಂದ ಗೌರವ ಹಾಗೂ ಬಹುಪರಾಕ್ ಪಡೆದು ಸವಾರಿ ತೊಟ್ಟಿಯತ್ತ ತೆರಳಿದರು. ಅಲ್ಲಿ ರಾಜಮಾತೆ ಪ್ರಮೋದಾದೇವಿ ಅವರಿಗೆ ನಮಿಸಿದರು. ನಂತರ ಖುರ್ಚಿಯಲ್ಲಿ ಆಸೀನರಾದ ಯದುವೀರ್ ಅವರಿಗೆ ತ್ರಿಷಿಕಾ ಕುಮಾರಿ ಒಡೆಯರ್ ಸೇರಿದಂತೆ ರಾಜವಂಶಸ್ಥ ಕುಟುಂಬದ ಮುತ್ತೈದೆಯರು ಆರತಿ ಬೆಳಗಿದ, ಬಳಿಕ ತ್ರಿಶಿಕಾ ಕುಮಾರಿ ಒಡೆಯರ್ ಅವರು ಪಾದ ಪೂಜೆ ಮಾಡಿ, ಪುಷ್ಪಾರ್ಚನೆ ಮಾಡಿದರು. ಪುತ್ರ ಆದ್ಯವೀರ್ ಒಡೆಯರ್ ಸಹ ಯದುವೀರ ಅವರಿಗೆ ನಮಿಸಿದರು.

ಪೊಲೀಸ್ ಬ್ಯಾಂಡ್ ವಾದನ: ಖಾಸಗಿ ದರ್ಬಾರ್ ವೇಳೆ ಎಂದಿನಂತೆ ಪೊಲೀಸ್ ಬ್ಯಾಂಡ್ ವಾದನ ರಾಜ ಕಳೆಯ ಮೆರಗು ತಂದಿತು. ಪ್ರತಿ ವರ್ಷವೂ ದರ್ಬಾರ್ ವೇಳೆ ಪೊಲೀಸ್ ಬ್ಯಾಂಡ್ ವಾದನವಿರುತ್ತದೆ. ಇಂದು ಚಾಮರಾಜೇಂದ್ರ ಒಡೆಯರ್ ವಿರಚಿತ ಗೀತೆಗಳನ್ನು ನುಡಿಸಿ, ಗಮನ ಸೆಳೆದರು.

ಬಿಗಿ ಬಂದೋಬಸ್ತ್: ಖಾಸಗಿ ದರ್ಬಾರ್ ಹಿನ್ನೆಲೆಯಲ್ಲಿ ಅರಮನೆಯ ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು. ಇದರಿಂದ ಯಾರೂ ದರ್ಬಾರ್ ಹಾಲ್‌ಗೆ ಪ್ರವೇಶಿಸಲು ಅವಕಾಶ ನೀಡಲಿಲ್ಲ, ಕೇವಲ ರಾಜಮನೆತನದ ಪ್ರಮುಖರ ಸಮ್ಮುಖದಲ್ಲಿ ಖಾಸಗಿ ದರ್ಬಾರ್ ನಡೆಯಿತು.



ಹೊಗಳು ಬಟ್ಟರು, ದೀವಟಿಗೆ ಹಾಗೂ ಚೋಪ್ದಾರ್‌ರು ಬಹುಪರಾಕ್ ಹಾಕಿ ದರ್ಬಾರ್ ಹಾಲ್‌ಗೆ ಕರೆತರುತ್ತಿರುವುದು.

'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ಪ್ರದಾನ



ಖ್ಯಾತ ಗಾಯಕ ಹರಿಹರನ್ ಹಾಗೂ ತಂಡ 'ಗಝಲ್ ಮತ್ತು ಶಾಸ್ತ್ರೀಯ ಫ್ಯೂಷನ್' ಪ್ರಸ್ತುತಪಡಿಸಿತು.

ಇದ್ದರೆ ಸಂಗೀತ ಸಾಧನೆ ಸಾಧ್ಯ ಎಂಬುದಕ್ಕೆ ಇವರು ಸಾಕ್ಷಿಯಾಗಿದ್ದಾರೆ. ದೇಶ–ವಿದೇಶಗಳಲ್ಲಿ ಸಂಗೀತ ಸಾರ ಹಂಚುತ್ತಿರುವ ವೆಂಕಟೇಶ್‌ಕುಮಾರ್ ಅವರಿಗೆ ದೇವರು ಆಯುರಾರೋಗ್ಯ ಕರುಣಿಸಿ, ಇನ್ನೂ ಹೆಚ್ಚಿನ ಸಂಗೀತ ಸೇವೆಗೆ ಆಶೀರ್ವದಿಸಲಿ ಎಂದು ಆಶಿಸಿದರು.

ಬಾಯ್ತಪ್ಪಿ ಮಾಜಿ ಶಾಸಕರೆಂದರು: ಭಾಷಣ ಆರಂಭಿಸುವ ಮುನ್ನ ಸಿಎಂ ಸಿದ್ದರಾಮಯ್ಯ, ವೇದಿಕೆಯಲ್ಲಿದ್ದ ಗಣ್ಯರ ಹೆಸರನ್ನು ಸಂಬೋಧಿಸುವಾಗ ಮಾಜಿ ಸಚಿವ ತನ್ವೀರ್ ಸೇಠ್ ಎನ್ನುವ ಬದಲು ಬಾಯ್ತಪ್ಪಿ ಮಾಜಿ ಶಾಸಕ ಎಂದರು. ಆಗ ವೇದಿಕೆಯಲ್ಲಿ ತನ್ವೀರ್ ಸೇಠ್ ಮತ್ತಿತರರು ನಗುತ್ತಾ ಮಾಜಿ ಸಚಿವ ಎಂದು ಹೇಳಿದರು. ತಕ್ಷಣ ಸಿಎಂ ಸರಿಪಡಿಸಿಕೊಂಡರು.

ಗುರು ಗವಾಯಿಗಳ ಸ್ಮರಣೆ: ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಪಂಡಿತ್ ವೆಂಕಟೇಶ್ ಕುಮಾರ್, ಕಣ್ಣಿಲ್ಲದೆ ಹುಟ್ಟಿ, ಕಣ್ಣುಳ್ಳವರಿಗೆ ನಿಜ ದೃಷ್ಟಿ ನೀಡಿದ ನನ್ನ ಗುರುಗಳಾದ ಡಾ.ಪುಟ್ಟರಾಜ ಗವಾಯಿಗಳ ಆಶೀರ್ವಾದದಿಂದ ನಾನು ಈ ವೇದಿಕೆ ಏರಲು ಸಾಧ್ಯವಾಗಿದೆ. ನಮ್ಮ ಗುರುಗಳು ಉಚಿತ ಊಟ–ವಸತಿ ಸೌಕರ್ಯದೊಂದಿಗೆ ವಿಕಲಚೇತನರೂ ಸೇರಿದಂತೆ ಎಲ್ಲಾ ಧರ್ಮದ ವಿದ್ಯಾರ್ಥಿಗಳಿಗೆ ಉಚಿತ ಸಂಗೀತ ಶಿಕ್ಷಣ ನೀಡಿದರು. ತ್ರಿಕಾಲ ಪೂಜಾನಿಷ್ಠರಾಗಿದ್ದ ಗುರುಗಳು ತಮಗಾಗಿ ಏನನ್ನೂ ಮಾಡಿಕೊಳ್ಳಲಿಲ್ಲ. ಹಳ್ಳಿಗಳಿಗೆ ಹೋಗಿ ಕೀರ್ತನೆ ಮಾಡಿ ದವಸ ಧಾನ್ಯ ಸಂಗ್ರಹಿಸಿ ನಮ್ಮಂತಹ ಬಡವರನ್ನು ಸಾಕಿದರು. ನಲವತ್ತು ವರ್ಷದ ಹಿಂದೆ ಅರಮನೆ ಒಳಗೆ ಹಾಡುತ್ತಿದ್ದೆ. ಇದೇ ಸಂಗೀತ ವಿದ್ವಾನ್ ಪ್ರಶಸ್ತಿಗೆ ಕಲಾವಿದರನ್ನು ಆಯ್ಕೆ ಮಾಡುವ ಸಮಿತಿಗೆ ಈ ಹಿಂದೆ ನಾನು ಅಧ್ಯಕ್ಷನಾಗಿದ್ದೆ. ಈಗ ನಾನೇ ಈ ಪ್ರಶಸ್ತಿ ಸ್ವೀಕರಿಸಿದ್ದೇನೆ. ಎಂದೂ ಮರೆಯಲಾಗದ ಸಮಯವಿದು ಎಂದರು. ಇದೇ ವೇಳೆ ಅವರು ಕನಕದಾಸರ ಕೀರ್ತನೆಯ 'ತೊರೆದು ಜೀವಿಸಬಹುದೇ ಹರಿ ನಿನ್ನ ಚರಣಗಳ...' ಸಾಲುಗಳನ್ನು ಹಾಡುತ್ತಿದ್ದಂತೆ ನೆರೆದಿದ್ದವರೆಲ್ಲಾ ಮಂತ್ರಮುಗ್ಧಗೊಂಡರು. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಹಾಗೂ ಶಾಸಕ ಶ್ರೀವತ್ಸ ಮಾತನಾಡಿ ದಸರಾ ಮಹೋತ್ಸವದ ವೈವಿದ್ಯಮಯ ಕಾರ್ಯಕ್ರಮಗಳನ್ನು ಬಣ್ಣಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ವೈದ್ಯ ಸುಮಂತ್ ವಶಿಷ್ಠ ಹಾಗೂ ತಂಡದವರು ನಾಡಗೀತೆ ಹಾಗೂ ಮೈಸೂರು ಸಂಸ್ಥಾನದ ಆಸ್ಥಾನದ ಗೀತೆಯನ್ನು ಪ್ರಸ್ತುತಪಡಿಸಿದರು.

ಸಮಾರಂಭದಲ್ಲಿ ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಶಾಸಕರಾದ ತನ್ವೀರ್ ಸೇಠ್, ಡಾ.ಡಿ.ತಿಮ್ಮಯ್ಯ, ಡಿ.ರವಿಶಂಕರ್, ಎ.ಆರ್.ಕೃಷ್ಣಮೂರ್ತಿ, ಅನಿಲ್ ಚಿಕ್ಕಮಾದು, ಸಂಸದ ಸುನೀಲ್ ಬೋಸ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಪುಷ್ಪಾ ಅಮರ್ ನಾಥ್, ಕಾಡಾ ಅಧ್ಯಕ್ಷ ಮರಿಸ್ವಾಮಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ವೆಂಕಟೇಶ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಹರಿಹರನ್ ಮೋಡಿ: ಸಭಾ ಕಾರ್ಯಕ್ರಮದ ನಂತರ ಖ್ಯಾತ ಹಿನ್ನೆಲೆ ಗಾಯಕ ಹರಿಹರನ್ ಮತ್ತು ತಂಡದ ಕಲಾವಿದರು ಪ್ರಸ್ತುತಪಡಿಸಿದ ಗಝಲ್ ಮತ್ತು ಶಾಸ್ತ್ರೀಯ ಫ್ಯೂಷನ್‌ಗೆ ಸಂಗೀತಾಸಕ್ತರು ತಲೆದೂಗಿದರು.

ಬಾನು ಮುಷ್ತಾಕ್ ದಸರಾ ಉದ್ಘಾಟಿಸಿದ ಐದನೇ ಮಹಿಳೆ!

ಮೈಸೂರು,ಸೆ.22(ಎಂಟಿವೈ)– ಪ್ರಸಕ್ತ ಸಾಲಿನ ದಸರಾ ಮಹೋತ್ಸವ ಉದ್ಘಾಟಿಸಿದ ಅಂತರ ರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತ ಲೇಖಕಿ ಬಾನು ಮುಷ್ತಾಕ್ ಅವರು ದಸರಾ ಉದ್ಘಾಟಿಸಿದ ಐದನೇ ಮಹಿಳೆ ಹೆಗ್ಗಳಿಕೆಗೆ ಪಾತ್ರರಾದರು.

ದಸರಾ ಮಹೋತ್ಸವಕ್ಕೆ 415 ವರ್ಷಗಳ ಇತಿಹಾಸವಿದ್ದು, 1610ರಲ್ಲಿ ವಿಜಯನಗರ ಸಾಮ್ರಾಜ್ಯದ ಪತನದ ನಂತರ ರಾಜ ಒಡೆಯರ್ ಅವರು ಶ್ರೀರಂಗಪಟ್ಟಣದಲ್ಲಿ ದಸರಾ ಮಹೋತ್ಸವ(ಮಹಾನವಮಿ ಆಚರಣೆ) ಆರಂಭಿಸಿದರು. ಅಂದಿನಿಂದ 1963ರವರೆಗೆ ಮೈಸೂರು ರಾಜವಂಶಸ್ಥರು ಅಂಬಾರಿ ಮೇಲೆ ಕುಳಿತು ಜಂಬೂ ಸವಾರಿ ಮೆರವಣಿಗೆಯಲ್ಲಿ ಸಾಗಿದ್ದರು. ಅಂಬಾರಿಯಲ್ಲಿ ಕುಳಿತ ಕೊನೆ ಅರಸರಾದ ಜಯಚಾಮರಾಜೇಂದ್ರ ಒಡೆಯರ್ ಆಗಿದ್ದು, ಆ ನಂತರ ಸರ್ಕಾರದ ವತಿಯಿಂದ ದಸರಾ ಮಹೋತ್ಸವ ಮುಂದುವರೆಯುತ್ತಾ ಬಂದಿದೆ.

ಐದನೇ ಮಹಿಳೆ: ತನ್ನದೇ ಆದ ಇತಿಹಾಸವುಳ್ಳ ದಸರಾ ಮಹೋತ್ಸವಕ್ಕೆ ಐದನೇ ಮಹಿಳೆ ಹೆಗ್ಗಳಿಕೆಗೆ ಬಾನು ಮುಷ್ತಾಕ್ ಪಾತ್ರರಾಗಿದ್ದಾರೆ. 1999ರಲ್ಲಿ ಸಂಗೀತ ವಿದ್ವಾನ್, ಗಾನಕೋಗಿಲೆ ಡಾ. ಗಂಗೂಬಾಯಿ ಹಾನಗಲ್ ದಸರಾಕ್ಕೆ ಚಾಲನೆ ನೀಡಿದ್ದರು. ಬಳಿಕ 2001ರಲ್ಲಿ ಹಿರಿಯ ನಟಿ ಬಿ. ಸರೋಜಾದೇವಿ, 2018ರಲ್ಲಿ ಇನ್ಫೋಸಿಸ್ ಸಂಸ್ಥೆಯ ಡಾ.ಸುಧಾಮೂರ್ತಿ, 2022ರಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಈ ಸಾಲಿನ (2025) ದಸರಾ ಮಹೋತ್ಸವವನ್ನು ಲೇಖಕಿ ಬಾನು ಮುಷ್ತಾಕ್ ಉದ್ಘಾಟಿದರು.

ಬಾನು ಮುಷ್ತಾಕ್ ಆಯ್ಕೆ ವಿರೋಧಿಸಿದ್ದವರ ವಿಷಾದ!

ಮೈಸೂರು,ಸೆ.22(ಎಂಟಿವೈ)– ದಸರಾ ಮಹೋತ್ಸವಕ್ಕೆ ಸಂಪ್ರದಾಯಬದ್ಧವಾಗಿ ಚಾಲನೆ ನೀಡಿದ ಲೇಖಕಿ ಬಾನು ಮುಷ್ತಾಕ್ ಅವರ ನಡೆ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅತೀವ ಮೆಚ್ಚುಗೆ ವ್ಯಕ್ತವಾಗಿದೆ.

ಈ ಸಲದ ದಸರಾ ಮಹೋತ್ಸವ ಉದ್ಘಾಟಕರ ಆಯ್ಕೆಗೆ ಸಂಬಂಧಿಸಿದಂತೆ ದೊಡ್ಡ ಮಟ್ಟದ ವಿವಾದ ಉಂಟಾಗಿತ್ತು. ಅನ್ಯ ಧರ್ಮ 'ಪ್ಲೇಕಾರ್ಡ್' ಬಳಸಿ ಉದ್ಘಾಟಕರ ಆಯ್ಕೆ ಪ್ರಶ್ನಿಸಿ, ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್ ಮೆಟ್ಟಿಲೇರಲಾಗಿತ್ತು. ಆದರೆ, ಎರಡೂ ನ್ಯಾಯಾಲಯಗಳೂ ಉದ್ಘಾಟಕರ ಆಯ್ಕೆ ಔಚಿತ್ಯ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿದ್ದವು. ಆದರೂ, ಪ್ರತಿಭಟನೆ ಆತಂಕ ನಿರ್ಮಾಣವಾಗಿತ್ತು. ಇಷ್ಟೆಲ್ಲಾ ಬೆಳವಣಿಗೆ ನಡುವೆಯೂ ಲೇಖಕಿ ಬಾನು ಮುಷ್ತಾಕ್ ಅವರು ದಸರಾ ಉದ್ಘಾಟಿಸಿದ್ದಾರೆ.

ಉದ್ಘಾಟನೆಗೂ ಮುನ್ನ ಬಾನು ಮುಷ್ತಾಕ್ ಅವರು, ಗರುಡ ಕಂಬದ ಬಳಿ ಇರುವ ಚಾಮುಂಡೇಶ್ವರಿ ಪಾದ ಮುಟ್ಟಿ ನಮಸ್ಕರಿಸಿದ್ದು, ಮಂಗಳಾರತಿ ಪಡೆದದ್ದು, ದೀಪ ಹಚ್ಚಿ, ನಾಡದೇವಿಗೆ ಪುಷ್ಪಾರ್ಚನೆ ಮಾಡಿದ್ದನ್ನು ಕಂಡವರ ಮನ ಪರಿವರ್ತನೆ ಆದಂತಿದೆ. ಅವರ ಆಯ್ಕೆ ವಿರೋಧಿಸಿದ್ದಕ್ಕೆ ವಿಷಾದ ವ್ಯಕ್ತಪಡಿಸಿ, ಬಾನು ಮುಷ್ತಾಕ್ ಅವರ ನಡೆಯನ್ನು ಮುಕ್ತವಾಗಿ ಕೊಂಡಾಡಿ, ನಿಮ್ಮನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದೆವು ಎಂದು ಬರೆದುಕೊಂಡಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 23 ಸೆಪ್ಟೆಂಬರ್ 2025



ಮುಸ್ಲಿಂ ಹೆಣ್ಣು ಮಗಳು ಬಾಗಿನ ಪಡೆದಾಗ ಮನಸ್ಸಿನ ಭಾವನೆ ಹೀಗಿತ್ತು



ಮೈಸೂರು, ಸೆ.22(ಬಿಎಲ್‌ಯು)–ತಾನೊಬ್ಬ ಕವಯಿತ್ರಿಯಾಗಿದ್ದು, ಕವಿತೆಯ ಮೂಲಕ ನನ್ನ ಸಂದೇಶ ತಿಳಿಸಲು ಬಯಸುತ್ತೇನೆ ಎಂದು ಹೇಳಿದ ಬಾನು ಮುಷ್ತಾಕ್ ಅವರು, ಹಿಂದೂಗಳು ಮುಸ್ಲಿಂ ಹೆಣ್ಣು ಮಗಳಿಗೆ ಬಾಗಿನ ಕೊಟ್ಟಾಗ ಆಕೆಯ ಭಾವನೆ ಹೇಗಿರುತ್ತೆ ಅನ್ನೋದರ ಬಗ್ಗೆ ಬಹಳ ಹಿಂದೆ ಕವನವೊಂದನ್ನು ಬರೆದಿದ್ದೇನೆ ಅದನ್ನು ಇಲ್ಲಿ ಹೇಳ ಬಯಸುತ್ತೇನೆ ಎಂದು ಕವಿತೆಯನ್ನು ವಾಚನ ಮಾಡಿದರು.

ಬಾಗಿನ

ಮೊರ ಅಂದರೆ ಗೊತ್ತಲಾ...
ಕೇರುತ್ತೆ ಅದು, ಅಲ್ಲಿ
ಇಲ್ಲಿ ಮತ್ತು ಎಲ್ಲೆಲ್ಲೂ

ಆ ದಿನ....
ಸೇವಂತಿಗೆ ಹೂವು ಚಳ್ಳನೆ ನಗು
ಚಿಮುಕಿಸುತ್ತಿತು. ದಿನ ತುಂಬಿದ್ದ
ಮೋಡ ಎರಡೂ ಕೈಯಲಿ ಸೊಂಟ
ಹಿಡಿದು ಬೆವರಿನಿಂದ ತೊಯ್ದು
ಉಸ್ಸೆಂದಾಗ

ಆಕಾಶ ಭೂಮಿ ಮತ್ತು ಸಮಸ್ತವೂ ಗಲಗಲ
ಅಂತ ಚಿಮ್ಮುತ್ತಿದ್ದವು. ಅಸೂಯೆಯಿಂದ ಸೂರ್ಯ
ಕೆಂಪಾಗಿದ್ದ, ನನಗಿಲ್ಲದ ವಾತ್ಸಲ್ಯದಲ್ಲಿ ಇವಳು
ಹೇಗೆ ಮಿನುಗುತ್ತಾಳೆ ಅಂತ

ಅದೇನೂ ಎಂದಿನ ದಿನವಾಗಿರಲಿಲ್ಲ
ಸಂಭ್ರಮಕೇ ದೊಡ್ಡ ಮುಳ್ಳು ಚಿಕ್ಕ ಮುಳ್ಳು
ಅಂಟಿ ಜೂಟಾಟವಾಡುತ್ತಿದ್ದವಲ್ಲಾ

ಅಚ್ಚ ಕೃಷಿಕ ಬಸವರಾಜಣ್ಣನ ಎಡ
ಹೆಗಲಿನ ವಲ್ಲಿಯೊಡನೆ ಮಣ್ಣಿನ
ಗುಣ ಹೀರಿದ್ದ ನಾನು ಬಾನು
ಏನಿಂದ ಜಯಾ ಅಗಿದ್ದು ಹೀಗೆ
ಯಾವುದೇ ಗೋಡೆಗಳಿರಲಿಲ್ಲ ಬಿಡಿ
ಪ್ರೀತಿಯ ಒಳ ಒರತೆಗಳು
ಜಿನುಗುವುದು ಹೀಗೆ ನೋಡಿ

ಸಾಬರ ಮಗಳು ಸಾಬರ ಸೊಸೆಗೆ
ಜೀವದುಂಬಿದ ಹಸಿ ಮಣ್ಣಿನ ಬಾಗಿನ
'ಜಯಾ.... ನಡಿಯವ್ವ ಹಬ್ಬಕೆ'
ಅರಿಶಿನದ ಎಲೆ ಕಡುಬು

ಗಂಡನ ಮನೆಯ ಕಸೂತಿ ನೆರಿಗೆಗಳ
ಸದಾ ಚಿಮ್ಮುತ್ತಿದ್ದರೂ ಎದೆಯಾಳದಲಿ
ಪಿಸುಗುಟ್ಟಿದ್ದು ಆ ಎಲೆ ಹಸಿರು
ವಾತ್ಸಲ್ಯವ ನೆಯ್ದ ಸಾದಾ ಸೀರೆ

ಮಡಿಲಲಿ ತುಂಬಿಸಿ ಕವುಚಿದ ಮೊರವ
ಮರಳುವ ದಾರಿಯಲಿ ನಿಂತು
ಅರಳಿಮರವ ಕೇಳಿದ್ದೆ
ಹೇಗೆ ಕೊಂಡೊಯ್ಯಲಿ ಇದನು
ನನ್ನತ್ತೆ ಮನೆಗೆ ಅರಿಶಿನ ಕುಂಕುಮದೊಡನೆ

ಹೇಗೆ ಬಿಡಿಸಲಿ ಬಾಂಧವ್ಯದ ಎಳೆಗಳ
ರಂಗೋಲಿಯನು ಸಾಬರ ಮನೆ ಬಾಗಿಲಲಿ
ಕೊಡಲೇ ಯಾರಿಗಾದರೂ ದಾರಿಹೋಕರಿಗೆ?
ಕೊಡಬಹುದೇ ಅದನು ಯಾರಿಗಾದರೂ
ಆ ಒಲವನು ಬಲವನು
ಪಿತೃ ವಾತ್ಸಲ್ಯದ ಮಾತೃತ್ವವನು

ನೆನೆಸಿಕೊಂಡಾಗ ಈಗಲೂ
ಕಣ್ಣಂಚಿನಲಿ ತೇವ
ಮೊರದ ತುಂಬಾ ಬದುಕಿನ ಪಸೆಯು
ಹಸೆಯು ಬರೆದ ಬೇಸಿಗೆ ಹಕ್ಕಿಯ ವಿದಾಯ

ಬಸವರಾಜಣ್ಣ...
ನೀವು ಕೊಟ್ಟ ಮೊರಹೇಳುತ್ತೆ
ಮಿಡಿಯುತ್ತೆ ಸಹಸ್ರ ಆರೋಪಗಳೆದುರು
ಒಂಟಿಯಾಗಿ ನಿಲ್ಲುತ್ತೆ, ದ್ವೇಷದ ಎಲ್ಲಾ
ಭಾಷೆಗಳ ಕವುಚಿ ಹಾಕುತ್ತೆ ಮುಂಜಾವಿನ
ಹೊಂಬೆಳಕಿನೊಂದಿಗೆ ಪ್ರೀತಿಯ ನಿರ್ಮಲ
ಅಲೆಗಳು ಮೊರದ ತುಂಬಾ
ತೂರುತ್ತಿರುತ್ತವೆ.

ದಸರಾ ಆಹಾರ ಮೇಳಕ್ಕೆ ಚಾಲನೆ

ಬಾಯಲ್ಲಿ ನೀರೂರಿಸುವ ವೆಜ್, ನಾನ್ ವೆಜ್ ಖಾದ್ಯಗಳು



ಪರಂಪರೆ ಮೇಲುಕೋಟೆ ಪುಳಿಯೋಗರೆ ಮಳಿಗೆ ಉದ್ಘಾಟಿಸಿ, ಪುಳಿಯೋಗರೆ, ಸಿಹಿ ಮತ್ತು ಖಾರ ಪೊಂಗಲ್ ಖರೀದಿಸಿ, ಸವಿಯುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಹೆಚ್.ಮುನಿಯಪ್ಪ 'ದಸರಾ ಆಹಾರ ಮೇಳ'ಕ್ಕೆ ಸೋಮವಾರ ಚಾಲನೆ ನೀಡಿದರು.



ಆಹಾರ ಮೇಳದ ಮಳಿಗೆಯೊಂದರ ಮುಂದೆ ನೆರೆದಿದ್ದ ಆಹಾರಪ್ರಿಯರು

ಮೈಸೂರು, ಸೆ.22(ಎಂಕೆ)– ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವ–2025 ದ ಪ್ರಮುಖ ಆಕರ್ಷಣೆಯಾದ 14 ದಿನಗಳ ಖಾದ್ಯ ಪ್ರಿಯರ 'ದಸರಾ ಆಹಾರ ಮೇಳ'ಕ್ಕೆ ಸೋಮವಾರ ವಿದ್ಯುಕ್ತ ಚಾಲನೆ ದೊರೆಯಿತು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ದಸರಾ ಆಹಾರ ಮೇಳ ಉಪಸಮಿತಿ ವತಿಯಿಂದ ಆಯೋಜಿಸಿರುವ 'ದಸರಾ ಆಹಾರ ಮೇಳ'ದಲ್ಲಿ ಪರಂಪರೆ ಮೇಲುಕೋಟೆ ಪುಳಿಯೋಗರೆ ಮಳಿಗೆಯನ್ನು ಉದ್ಘಾಟಿಸಿ, ಮೇಲುಕೋಟೆ ಪುಳಿಯೋಗರೆ, ಸಿಹಿ ಮತ್ತು ಖಾರ ಪೊಂಗಲ್ ಖರೀದಿಸಿ, ಸವಿಯುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಹೆಚ್.ಮುನಿಯಪ್ಪ ಚಾಲನೆ ನೀಡಿದರು.

ಇಂಧನ ಸಚಿವ ಕೆ.ಜೆ.ಜಾರ್ಜ್, ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಕೆ.ಆರ್.ನಗರ ಶಾಸಕ ರವಿಶಂಕರ್, ಚೆಸ್ಕಾಂ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ದಸರಾ ಆಹಾರ ಉಪಸಮಿತಿ ಪದಾಧಿಕಾರಿಗಳು ಸಾಥ್ ನೀಡಿದರು.

ಸುವಿಶಾಲ ಮಹಾರಾಜ ಕಾಲೇಜು ಮೈದಾನದಲ್ಲಿ ಮೊದಲ ಬಾರಿಗೆ 14 ದಿನಗಳ ಕಾಲ (ಅ.5 ರವರೆಗೆ) ನಡೆಯುವ ದಸರಾ ಆಹಾರ ಮೇಳದಲ್ಲಿ 139 ವೆಜ್ ಮತ್ತು ನಾನ್ ಮಳಿಗೆಗಳು ಇದ್ದು, ಸಿಹಿ ತಿನಿಸುಗಳ 20ಕ್ಕೂ ಹೆಚ್ಚು ಮಳಿಗೆ ಸೇರಿ 160 ಮಳಿಗೆಗಳನ್ನು ತೆರಯಲಾಗಿದೆ. ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ ರಾಜ್ಯಾಧ್ಯಕ್ಷ ಎಂ.ಕೃಷ್ಣಯ್ಯ ಹಾಗೂ ಹುಣಸೂರಿನ ಲೋಕೇಶ್ ನೇತೃತ್ವದ ಆದಿವಾಸಿ ಬುಡಕಟ್ಟು ಆಹಾರ ಮಳಿಗೆ(ಹಟ್)ಯಲ್ಲಿ ಚಿಕನ್, ಮಟನ್ ಮತ್ತು ನಾಟಿ ಕೋಳಿ ಬಂಬೂ ಬಿರಿಯಾನಿ, ಬಿದರಕ್ಕಿ ಪಾಯಸ, ಮಾಕಳಿ ಬೇರಿನ ಟೀ, ಕ್ರ್ಯಾಬ್(ಏಡಿ) ಸಾಂಬರ್ ಮತ್ತು ಮುದ್ದೆ, ಕಾಡು ಜೇನುತುಪ್ಪ ಲಭ್ಯವಿದೆ.

ಹಾಗೆಯೇ ನಾನ್‌ವೆಜ್ ಮಳಿಗೆಗಳ ಸಾಲಿನಲ್ಲಿ ದೊನ್ನೆ ಬಿರಿಯಾನಿ, ಹೈದರಾಬಾದಿ ಧಮ್ ಬಿರಿಯಾನಿ, ಹೊಸರು ಸ್ಟೈಲ್‌ನಲ್ಲಿ ತೊಕ್ಕು ಬಿರಿಯಾನಿ, ಸಾವಿಗೆ, ಕಾಯಿಹಾಲು, ನಾಟಿಕೋಳಿ ಸಾಂಬಾರ್, ಕಾಲ್ ಸೂಪ್, ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಮತ್ಸ್ಯ ದರ್ಶಿನಿ ಮಳಿಗೆಯಲ್ಲಿ ಅಂಜಲ್ ರವಾ ಪ್ರೈ, ಬ್ಲಾಕ್ ಪಾಂಪ್ರೆಟ್, ಅಂಜಲ್ ತವಾ ಪ್ರೈ, ಸಿಗಡಿ ಕ್ರಬ್ಸ್ ಪ್ರೈ, ಬಂಗುಡೆ ರವಾ ಪ್ರೈ, ಫಿಶ್ ಫಿಂಗರ್‌ನಂತಹ ಮೀನಿನ ಖಾದ್ಯ ಹಾಗೂ ಮಂಡ್ಯ ನಾಟಿ ಸ್ಟೈಲ್‌ನಲ್ಲಿ ಚಿಕನ್ ಪಲಾವ್, ಚಿಕನ್ ಚಾಪ್ಸ್, ಕೊಮಾ ದೋಸೆ, ನೀರ್ ದೋಸೆ ಮತ್ತು ಹಲವು ಬಗೆಯ ನಾನ್ ವೆಜ್ ಖಾದ್ಯಗಳನ್ನು ಸವಿಯಬಹುದಾಗಿದೆ.

ಸಸ್ಯಾಹಾರ ಮಳಿಗೆಗಳಲ್ಲಿ ಮೇಲುಕೋಟೆ ಪುಳಿಯೋಗರೆಯಿಂದ ಹಿಡಿದು ಪಾವ್ ಭಾಜಿ, ಸ್ಯಾಂಡ್ ವಿಚ್, ವಡಪಾವ್‌ದಂತಹ ಬಾಂಬೆ ಚಾಟ್ಸ್, ಡ್ರೈ ಮೊಶ್ರೂಮ್, ಮುಳಬಾಗಲ್ ದೋಸೆ, ರುಮಾಲಿ ರೋಟಿ, ಗಿರ್ಮಿಟ್, ಮಶ್ರೂಮ್ ಬೈಟ್ಸ್.. ಡೆಲ್ಲಿ ಮಸಾಲ ಪಾಪಡ್, ಶಿಮ್ಲಾ ಮಿರ್ಚಿ, ಬನಾನ ಬಜ್ಜಿಯಂತಹ ಖಾರ ತಿನಿಸುಗಳು ದೊರೆಯಲಿದೆ. ಅದೇ ರೀತಿ ಈ ವರ್ಷ 20ಕ್ಕೂ ಹೆಚ್ಚು ಸಿಹಿ ತಿಂಡಿಗಳ ಯೂನಿಕ್ ಮಳಿಗೆಗಳನ್ನು ತೆರೆಯಲಾಗಿದ್ದು, ಹೋಂ ಮೇಡ್ ಸಿಹಿ ತಿನಿಸು ಮತ್ತು ಬಗೆ ಬಗೆಯ ಐಸ್ ಕ್ರೀಂಗಳು, ಬೆಲ್ಲದ ದೇಸಿ ಗಿಣ್ಣು, ಅಮಿನಗಡ ಕರದಂಟು, ಬೆಳಗಾವಿ ಕುಂದಾ, ಧಾರವಾಡ ಪೇಡ, ಡ್ರೈ ಫ್ರೂಟ್ಸ್ ರೋಸ್ ಗುಲ್ಕನ್, ಬಾನನಾ ಗುಲ್ಕನ್, ಸಿರಿಧಾನ್ಯದಿಂದ ತಯಾರಿಸಿರುವ ಸಿಹಿ ಮತ್ತು ಖಾರದ ಪದಾರ್ಥಗಳನ್ನು ಆಹಾರ ಪ್ರಿಯರ ಮನ ಸೆಳೆಯುವಂತಿವೆ.

ಅಚ್ಚುಕಟ್ಟು ವ್ಯವಸ್ಥೆ: ದಸರಾ ಆಹಾರ ಮೇಳದಲ್ಲಿ ವೆಜ್ ಮತ್ತು ನಾನ್ ವೆಜ್ ಮಳಿಗೆಗಳನ್ನು ಪ್ರತ್ಯೇಕ ಸಾಲುಗಳಲ್ಲಿ ವ್ಯವಸ್ಥೆ ಮಾಡಲಾಗಿದ್ದು, ಮಧ್ಯದಲ್ಲಿ ಸಿಹಿ ತಿನಿಸು ಮಳಿಗೆಗಳು, ಮಕ್ಕಳ ಆಟಿಕೆಗಳ ಜಾಯಿಂಟ್ ವ್ಹೀಲ್ ಹಾಗೂ ಕುಳಿತು ಊಟ ಮಾಡಲು ಮತ್ತು ವಿಶ್ರಾಂತಿ ಪಡೆಯಲು ಅವಕಾಶ ಮಾಡಿಕೊಡಲಾಗಿದೆ. ಹಾಗೆಯೇ ಕೈ ತೊಳೆದುಕೊಳ್ಳಲು ಅಲ್ಲಲ್ಲಿ ಟ್ಯಾಂಕ್‌ಗಳನ್ನು ಇಟ್ಟು, ಕೈ ತೊಳೆದ ನೀರು ಒಂದೆಡೆ ಸಂಗ್ರಹವಾಗುವಂತೆ ಗುಂಡಿಗಳನ್ನು ಮಾಡಲಾಗಿದೆ. ಹಾಗೆಂಯೇ ಪ್ರತ್ಯೇಕವಾಗಿ ತಾತ್ಕಾಲಿಕ ಶೌಚಾಲಯ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ.

ಕಸ ಸಂಗ್ರಹಣೆಗೆ 50ಕ್ಕೂ ಹೆಚ್ಚು ಡ್ರಮ್: ಆಹಾರ ಮೇಳದಲ್ಲಿ ಕಸ ಸಂಗ್ರಹಣೆಗಾಗಿ ಪಾಲಿಕೆ ವತಿಯಿಂದ ಹಸಿಕಸ ಮತ್ತು ಒಣಕಸ ಹಾಕಲು 50ಕ್ಕೂ ಹೆಚ್ಚು ಡ್ರಮ್‌ಗಳನ್ನು ಇರಿಸಲಾಗಿದೆ. ಅಲ್ಲದೆ ಪ್ರತೀ ಮಳಿಗೆದಾರರೂ ಕೂಡ ಹಸಿಕಸ ಮತ್ತು ಒಣ ಕಸ ಸುರಿಯಲು 2 ಡ್ರಮ್‌ಗಳನ್ನು ಕಡ್ಡಾಯವಾಗಿ ಮಳಿಗೆ ಎದುರು ಇಟ್ಟುಕೊಂಡಿರಬೇಕೆಂದು ಪಾಲಿಕೆ ಅಧಿಕಾರಿಗಳು ಜಾಗೃತಿ ಮೂಡಿಸಿದರು.

ಸಿಸಿ ಕ್ಯಾಮರಾ ಕಣ್ಗಾವಲು: ದಸರಾ ಆಹಾರ ಮೇಳದ ಎಲ್ಲೆಡೆ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ನೂರಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿದೆ. ಹಾಗೆಯೇ ಪ್ರವೇಶ ದ್ವಾರಗಳಲ್ಲಿ ನೂಕು ನುಗ್ಗಲು ಉಂಟಾಗದಂತೆ ಬ್ಯಾರಿಕೇಡ್‌ಗಳನ್ನು ಅಳವಡಿಸಿ ಸರತಿ ಸಾಲಿನಲ್ಲಿ ತೆರಳುವಂತೆ ಮಾಡಲಾಗಿದೆ

ಪ್ರತಿ ನಿತ್ಯ 90 ಸಾವಿರ ಕೋಟಿ ಮೌಲ್ಯದ ಆಹಾರ ವ್ಯರ್ಥ: ಕೆ.ಹೆಚ್.ಮುನಿಯಪ್ಪ ಬೇಸರ

ಮೈಸೂರು, ಸೆ.22(ಎಂಕೆ)– ರಾಜ್ಯದಲ್ಲಿ ಪ್ರತಿ ನಿತ್ಯ 90 ಸಾವಿರ ಕೋಟಿ ರೂ.ನಷ್ಟು ತಯಾರಾದ ಆಹಾರ ವ್ಯರ್ಥವಾಗುತ್ತಿದೆ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಹೆಚ್.ಮುನಿಯಪ್ಪ ಬೇಸರ ವ್ಯಕ್ತಪಡಿಸಿದರು.

'ದಸರಾ ಆಹಾರ ಮೇಳ' ಉದ್ಘಾಟಿಸಿ ಮಾತನಾಡಿದ ಅವರು, ಚೆಲ್ಲುವ ಅನ್ನ ಬಡವರಿಗೆ ಚಿನ್ನ, ಆದ್ದರಿಂದ ಆಹಾರವನ್ನು ವೇಸ್ಟ್(ವ್ಯರ್ಥ) ಮಾಡಬಾರದೆಂದು ಮನವಿ ಮಾಡಿದರು. ರಾಜ್ಯದಲ್ಲಿ ಪ್ರತೀ ನಿತ್ಯ 90 ಸಾವಿರ ಕೋಟಿ ರೂ.ನಷ್ಟು ತಯಾರಾದ ಆಹಾರ ವ್ಯರ್ಥವಾಗುತ್ತಿದ್ದು, ಮುಂದಿನ ದಿನಗಳಲ್ಲಿ ಆಹಾರ ವ್ಯರ್ಥ ಮಾಡದಂತೆ ಕಾರ್ಯಕ್ರಮವೊಂದನ್ನು ಜಾರಿಗೊಳಿಸಲು ಚಿಂತನೆ ನಡೆಸಲಾಗುವುದು ಎಂದು ತಿಳಿಸಿದರು.

ರಾಜ್ಯದ ಜನತೆ ಹಸಿವಿನಿಂದ ಇರಬಾರದು ಎಂಬ ಉದ್ದೇಶದಿಂದ ಅನ್ನಭಾಗ್ಯ ಯೋಜನೆ ಜಾರಿಗೆ ತಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಆಹಾರ ಇಲಾಖೆ ಶಕ್ತಿ ತುಂಬಿದ್ದಾರೆ ಎಂದು ಮೆಚ್ಚುಗೆ ಮಾತುಗಳನ್ನಾಡಿದರಲ್ಲದೆ ದಸರಾ ಆಹಾರ ಮೇಳದಲ್ಲಿ 160ಕ್ಕೂ ಹೆಚ್ಚು ಮಳಿಗೆಗಳಿದ್ದು, ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲಾಗಿದೆ ಎಂದರು.

ಆಹಾರ ಪ್ರಿಯರ ಆಗಮನ...!

ನಾಡಹಬ್ಬ ದಸರಾ ಆಹಾರ ಮೇಳ ಉದ್ಘಾಟನೆಯಾಗುತ್ತಿದ್ದಂತೆ ತಂಡೋಪ ತಂಡವಾಗಿ ಆಗಮಿಸಿ ಆಹಾರ ಪ್ರಿಯರು ಇಷ್ಟದ ತಿಂಡಿ–ತಿನಿಸುಗಳನ್ನು ಸವಿದು ಸಂಭ್ರಮಿಸಿದರು. ಮಧ್ಯಾಹ್ನದ ನಂತರ ಸಸ್ಯಹಾರ ಸಾಲಿನ ಬಹುತೇಕ ಮಳಿಗೆಗಳು ತೆರೆದಿದ್ದು, ಮಳಿಗೆದಾರರು ಭರ್ಜರಿ ವ್ಯಾಪಾರ ಆರಂಭಿಸಿದರು.





ಆಹಾರ ಮೇಳದಲ್ಲಿ ಮಕ್ಕಳ ಮನರಂಜನೆಗಾಗಿ ಅಳವಡಿಸಿರುವ ಆಟಿಕೆಗಳು. ಮತ್ತೊಂದು ಚಿತ್ರದಲ್ಲಿ ಕಸಸಂಗ್ರಹಣೆಗಾಗಿ ಇಟ್ಟಿರುವ ಕಸದ ಬುಟ್ಟಿಗಳನ್ನು ಕಾಣಬಹುದು

ಸಮತೋಲನ ಆಹಾರದಿಂದ ಉತ್ತಮ ಆರೋಗ್ಯ

ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ

ಮೈಸೂರು, ಸೆ.22(ಎಂಕೆ)– ಸಮತೋಲನ ಆಹಾರ ತೆಗೆದುಕೊಂಡರೆ ಆರೋಗ್ಯ ಚೆನ್ನಾಗಿರುತ್ತೆ ದಸರಾ ಮುಕ್ತಾಯವಾದರೂ ಈ ವರ್ಷ ದಸರಾ ಆಹಾರ ಮೇಳ ಇರಲಿದ್ದು, ಭಾಗವಹಿಸಿ... ಸಂಭ್ರಮಿಸಿ... ಸಂತೋಷ ಪಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ದಸರಾ ಆಹಾರ ಮೇಳ' ಉದ್ಘಾಟಿಸಿ ಮಾತ ನಾಡಿದ ಅವರು, ಕರ್ನಾಟಕದ ಯಾವ್ಯಾವ ಪ್ರದೇಶಗಳಲ್ಲಿ ಯಾವ್ಯಾವ ಬಗೆಯ ಆಹಾರ ಪದ್ಧತಿಗಳು ಇವೆ ಎಂಬುದನ್ನು ತಿಳಿಸುವ ಉದ್ದೇಶದಿಂದ ನಾಡಹಬ್ಬದ ಅಂಗವಾಗಿ ಆಹಾರ ಮೇಳ ಆಯೋಜಿಸಲಾಗಿದೆ ಎಂದರು.

ದಾವಣಗೆರೆ ಬಿಟ್ಟರೆ ಮೇಲಕ್ಕೆ(ಉತ್ತರ ಕರ್ನಾಟಕ ಭಾಗಕ್ಕೆ) ಮುದ್ದೆ ಸಿಗಲ್ಲ. ಜೋಳದ ರೊಟ್ಟಿ ಗೋಧಿ ರೊಟ್ಟಿ ತಿನ್ನುವುದು ಅಲ್ಲಿನ ಜನರ ಆಹಾರ ಪದ್ಧತಿ. ಅದೇ ರೀತಿ ದಾವಣಗೆರೆ ಯಿಂದ ಕೆಳಗೆ(ದಕ್ಷಿಣಕ್ಕೆ) ಬಂದರೆ ಮುದ್ದೆ, ನಾಟಿ ಕೋಳಿ ಸಾಂಬಾರ್ ಚಿರಪರಿಚಿತ. ಅದರಲ್ಲಿಯೂ ಕರಾವಳಿ ಮತ್ತು ಮೈಸೂರು ಭಾಗದ ಆಹಾರ ಪದ್ಧತಿಗಳು ಬೇರೆ ಬೇರೆ ಇವೆ. ಆದ್ದರಿಂದ ರಾಜ್ಯದಲ್ಲಿನ ಎಲ್ಲಾ ಬಗೆಯ ಆಹಾರ ಖಾದ್ಯಗಳನ್ನು ಒಂದೇ ಕಡೆ ಸವಿಯಲು ಅವಕಾಶ ಮಾಡಿಕೊಡಲಾಗಿದೆ ಎಂದರು.

ಕನ್ನಡ ಲೇಖಕಿ, ಹೋರಾಟಗಾರ್ತಿ: ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಇವತ್ತಿನಿಂದ ಚಾಲನೆಯಾಗಿದೆ. ಪ್ರತೀ ವರ್ಷದಂತೆಯೇ ಈ ವರ್ಷವೂ ಅಂತರರಾಷ್ಟ್ರೀಯ ಮಟ್ಟದ ಬೂಕರ್ ಪ್ರಶಸ್ತಿ ವಿಜೇತರಾದ ಬಾನು ಮುಷ್ತಾಕ್ ಅವರು ಉದ್ಘಾಟನೆ ಮಾಡಿದ್ದಾರೆ. ಅವರ ಬಗ್ಗೆ ನಿಮಗೆಲ್ಲಾ ಗೊತ್ತಿದೆ. ಅವರು ಹಾಸನದವರು. ಮುಸಲ್ಮಾನ ಕನ್ನಡ ಲೇಖಕಿ ಹಾಗೂ ಹೋರಾಟಗಾರ್ತಿ ಮತ್ತು ದಿಟ್ಟ ಮಹಿಳೆ ಎಂದು ಶ್ಲಾಘಿಸಿದರು.

ರಾಜ್ಯ ಸರ್ಕಾರದಿಂದ ಗೌರವ: ಬಾನು ಮುಷ್ತಾಕ್ ಅವರ 'ಹೃದಯ ಹಣತೆ' ಕನ್ನಡದ ಕೃತಿಯನ್ನು ಇಂಗ್ಲಿಷ್‌ಗೆ ಭಾಷಾಂತರಿಸಿದ ಲೇಖಕಿ ದೀಪಾ ಬಸ್ತಿ ಹಾಗೂ ಬಾನು ಮುಷ್ತಾಕ್ ಅವರಿಗೆ 10 ಲಕ್ಷ ರೂ.ಗೌರವ ಧನ ನೀಡುವ ಮೂಲಕ ರಾಜ್ಯ ಸರ್ಕಾರ ಇಬ್ಬರಿಗೂ ಗೌರವ ನೀಡಿದೆ ಎಂದು ಲೇಖಕಿ ದೀಪಾ ಬಸ್ತಿ ಅವರ ಸಾಧನೆಯನ್ನು ಸ್ಮರಿಸಿದರು.

ಬರೀ ದಡ್ಡ ಅಲ್ಲ ಮೂರ್ಖ....! ನಾನು ಉತ್ತಮವಾದ ಹಿಂದೂ...

ಮೈಸೂರು ದಸರಾ ನಾಡಹಬ್ಬ. ಯಾವುದೇ ಜಾತಿ, ಧರ್ಮ ಭೇದವಿಲ್ಲದೆ ಎಲ್ಲರೂ ಸೇರಿ ಆಚರಿಸುವ ಹಬ್ಬ. ಕನ್ನಡಕ್ಕೆ ಅಂತರರಾಷ್ಟ್ರೀಯ ಪ್ರಶಸ್ತಿ ತಂದುಕೊಟ್ಟ ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟನೆಗೆ ಆಯ್ಕೆ ಮಾಡಿದ್ದನ್ನೇ ಕೆಲವರು ವಿರೋಧಿಸಿದರು. ಕೋರ್ಟ್‌ಗೆ ಹೋದರು. ಆದರೆ, ಕೋರ್ಟ್ ಕೂಡ ಅವರ ಕೇಸ್ ವಜಾ ಮಾಡಿತು. ಎರಡು ಬಾರಿ ಎಂಪಿ ಆಗಿದ್ದ ಆತ ಬರೀ ದಡ್ಡನಲ್ಲ, ಮೂರ್ಖ ಎನ್ನುವ ಮೂಲಕ ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಹರಿಹಾಯ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ನನ್ನ ಹೆಸರಿನಲ್ಲೇ ಎರಡು ದೇವರುಗಳಿವೆ. ಸಿದ್ದ ಎಂದರೆ ಈಶ್ವರ... ರಾಮ ಎಂದರೆ ವಿಷ್ಣು... ಹಾಗಾಗಿ ನಾನು ಪ್ರತಾಪ್ ಸಿಂಹನಿಗಿಂತಲೂ ಉತ್ತಮವಾದ ಹಿಂದೂ. ನಾನು ಸಾಮಾಜಿಕ ನ್ಯಾಯದ ಮೇಲೆ ನಂಬಿಕೆ ಇಟ್ಟುಕೊಂಡಿದ್ದು, ಎಲ್ಲರಿಗೂ ಅವಕಾಶ, ಆದ್ಯತೆಗಳು ಸಿಗಬೇಕು ಎಂದರು.

ಮೋದಿ ಹೆಂಗೆ ಟೋಪಿ ಹಾಕ್ತಾರೆ ತಿಳಿದುಕೊಳ್ಳಿ...!

ಇವತ್ತು ಜಿಎಸ್‌ಟಿ ಕಡಿಮೆ ಮಾಡಿದ್ದೇವೆ ಎಂದು ಪ್ರಧಾನಿ ಮೋದಿ ಅವರು ಹೇಳುತ್ತಿದ್ದಾರೆ. ಆದರೆ, ಕಳೆದ 8 ವರ್ಷದಿಂದ ಜಿಎಸ್‌ಟಿ ಹಾಕಿದ್ದು ಯಾರು? ಜಿಎಸ್‌ಟಿ ಸ್ಲ್ಯಾಬ್‌ಗಳನ್ನು ಮಾಡಿದ್ದು ಯಾರು? 8 ವರ್ಷ ತೆಗೆದುಕೊಂಡಿರುವ ಜಿಎಸ್‌ಟಿ ತೆರಿಗೆಯನ್ನು ಜನರಿಗೆ ವಾಪಸ್ ಕೊಡಲಿ ನೋಡೋಣ. ಇದನೆಲ್ಲಾ ಜನರು ಅರ್ಥ ಮಾಡಿಕೊಳ್ಳಬೇಕು. ಮೋದಿ ಹೆಂಗೆ ಟೋಪಿ ಹಾಕ್ತಾರೆ ತಿಳಿದುಕೊಳ್ಳಿ.

- ಸಿದ್ದರಾಮಯ್ಯ, ಮುಖ್ಯಮಂತ್ರಿ

ದಸರಾ ಕ್ರೀಡಾಕೂಟ ಸಿಎಂ ಕಪ್; ಕುಸ್ತಿಪಟು ವಿನೇಶ್ ಫೋಗಟ್ ಉದ್ಘಾಟನೆ

ಮೈಸೂರು, ಸೆ.22(ವಿವಿಹೆಚ್)– ರಾಜ್ಯದ ಕಾಂಗ್ರೆಸ್ ಸರ್ಕಾರ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ಇಲ್ಲಿನ ಕ್ರೀಡಾಸಕ್ತಿ ಗಮನಿಸಿದರೆ, ಮುಂಬರುವ ಒಲಂಪಿಕ್ಸ್‌ನಲ್ಲಿ ರಾಜ್ಯದ ಪ್ರತಿಭೆಗಳು ಚಿನ್ನವನ್ನು ಗೆಲ್ಲುತ್ತಾರೆ ಎಂದು ಕುಸ್ತಿಪಟು ವಿನೇಶ್ ಫೋಗಟ್ ತಿಳಿಸಿದರು.

ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ದಸರಾ ಕ್ರೀಡಾಕೂಟ ಸಿಎಂ ಕಪ್–2025 ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ನಮಸ್ಕಾರ ಮೈಸೂರು ಎಂದು ಹೇಳುವ ಮೂಲಕ ತಮ್ಮ ಭಾಷಣ ಆರಂಭಿಸಿದ ಫೋಗಟ್, ಕರ್ನಾಟಕ ಜನರು ಎಲ್ಲರೂ ಬಹಳ ವಿಶ್ವಾಸದಿಂದ ಸ್ವಾಗತಿಸುತ್ತಾರೆ. ನೀವು ತೋರಿದ ಪ್ರೀತಿಗೆ ನಾನು ಋಣಿಯಾಗಿರುತ್ತೇನೆ. ಪ್ರತಿವರ್ಷ ನನ್ನನ್ನು ಇಂತಹ ಕಾರ್ಯಕ್ರಮಗಳಿಗೆ ಆಹ್ವಾನಿಸಿ, ತಪ್ಪದೇ ಬಂದು ಇಲ್ಲಿನ ಮಕ್ಕಳಿಗೆ ಅಗತ್ಯ ತರಬೇತಿ ನೀಡುತ್ತೇನೆ ಎಂದು ಹೇಳಿದರು.

ಇಂದಿನ ಮಕ್ಕಳು ಮುಂದೆ ದೇಶದ ಭವಿಷ್ಯ ನಿರ್ಧರಿಸುತ್ತಾರೆ. ಇವರಿಗೆ ಚಿಕ್ಕಂದಿನಲೇ ಉತ್ತಮ ತರಬೇತಿ ನೀಡಬೇಕಿದೆ. ಅದನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಸಮರ್ಪಕವಾಗಿ ಒದಗಿಸುತ್ತಿದೆ ಎಂದು ನಾನು ಭಾವಿಸುತ್ತೇನೆ ಎಂದರು.

ಕ್ರೀಡಾಪಟುಗಳು ಯಾವುದೇ ಆಟವಿರಲಿ, ಒಮ್ಮೆ ಮೈದಾನಕ್ಕೆ ಇಳಿದ ಬಳಿಕ ಯಾವುದಕ್ಕೂ ಅಂಜದೇ ಮುನ್ನುಗ್ಗುವುದನ್ನು ಕಲಿಯಿರಿ. ನಿರಂತರ ಪರಿಶ್ರಮದಿಂದ ಮಾತ್ರ ಕಾರ್ಯಸಿದ್ಧಿ. ಹಾರ್ಡ್ ವರ್ಕ್ ಜೊತೆಗೆ ತಂತ್ರಗಾರಿಕೆ ರೂಪಿಸುವ ಸ್ಮಾರ್ಟ್‌ವರ್ಕ್ ಕಡೆಗೂ ಹೆಚ್ಚಿನ ಗಮನ ನೀಡಬೇಕು. ಇದರಲ್ಲಿ ನಿಮ್ಮ ಯಶಸ್ಸು ಅಡಗಿದೆ. ನಿಮ್ಮ ಬೆನ್ನ ಹಿಂದೆ ನನ್ನಂತಹ ಸಾವಿರಾರು ಜನರು ಇರುತ್ತಾರೆ. ನಿಮ್ಮ ಉಜ್ವಲ ಭವಿಷ್ಯಕ್ಕೆ ಸಹಕರಿಸುವ ಕೆಲಸ ಮಾಡುತ್ತೇವೆ ಎಂದು ಹರ್ಯಾಣ ಕಿಲಾಡಿ ಕಿವಿಮಾತು ಹೇಳಿದರು.

ಕ್ರೀಡಾಪಟುಗಳ ಪ್ರೋತ್ಸಾಹಕ್ಕೆ ಸ್ಥಳೀಯ ಸರ್ಕಾರ ಹಲವಾರು ಕಾರ್ಯಗಳನ್ನು ಮಾಡುತ್ತಿದೆ ಎಂಬ ವಿಶ್ವಾಸವಿದೆ. ಸಿದ್ದರಾಮಯ್ಯ ಅವರು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪಣ ತೊಡಬೇಕು. ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟಕ್ಕೆ ಕರ್ನಾಟಕದಿಂದ ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾಪಟುಗಳು ಆಯ್ಕೆಯಾಗಬೇಕು. ಇದರಿಂದ ದೇಶದ, ರಾಜ್ಯದ ಕೀರ್ತಿ ಹೆಚ್ಚುತ್ತದೆ ಎಂದು ತಿಳಿಸಿದರು.



'ಮೈಸೂರು ದಸರಾ ಸಿಎಂ ಕಪ್–2025' ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಕ್ರೀಡಾಪಟುಗಳು



ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಕುಸ್ತಿಪಟು ವಿನೇಶ್ ಫೋಗಟ್ ಅವರನ್ನು ಗೌರವಿಸಲಾಯಿತು.

ಒಲಂಪಿಕ್ಸ್‌ನಲ್ಲಿ ಪದಕ ಗೆದ್ದರೆ 6 ಕೋಟಿ ಬಹುಮಾನ

ಚಾಮುಂಡಿವಿಹಾರ ಕ್ರೀಡಾಂಗಣದ ಗ್ಯಾಲರಿ ಹಾಗೂ ಈಜುಕೊಳಗಳಿಗೆ ಅತ್ಯಾಧುನಿಕ ಟೆನ್ಸೈಲ್ ಮೆಂಬ್ರೇನ್ ಛಾವಣಿ ಅಳವಡಿಸುವ ಮತ್ತು ಫುಟ್ಬಾಲ್ ಅಂಕಣ ನಿರ್ಮಿಸುವ ಕಾಮಗಾರಿಯನ್ನು ರೂ. 20.78 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದೆ. ಇದನ್ನು ಕ್ರೀಡಾಪಟುಗಳು ಸದ್ಬಳಕೆ ಮಾಡಿಕೊಳ್ಳಬೇಕು. ಕ್ರೀಡೆಯಲ್ಲಿ ಸೋಲು, ಗೆಲುವುಗಳಿಗಿಂತ, ಕ್ರೀಡಾಮನೋಭಾವ ಮುಖ್ಯ ಎಂದು ತಿಳಿಸಿದರು.

ಸರ್ಕಾರ ಕ್ರೀಡಾಪಟುಗಳಿಗೆ ಎಲ್ಲ ರೀತಿಯ ಸಹಕಾರವನ್ನು ನೀಡುತ್ತಿದೆ. ಮುಂದಿನ ಒಲಿಂಪಿಕ್ಸ್‌ಗೆ ತರಬೇತಿ ಪಡೆಯಲು ರಾಜ್ಯದ 60 ಅತ್ಯಂತ ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ವಾರ್ಷಿಕ ತಲಾ ರೂ 10 ಲಕ್ಷ ಸಹಾಯಧನ ನೀಡಿ ತರಬೇತಿ ನೀಡಲಾಗುವುದು. ಅಲ್ಲದೇ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಪದಕ ವಿಜೇತ ಕ್ರೀಡಾಪಟುಗಳಿಗೆ ಸರ್ಕಾರ 6 ಕೋಟಿ ರೂಗಳ ನಗದು ಬಹುಮಾನವನ್ನೂ ನೀಡಲಿದೆ. ಕ್ರೀಡಾಪಟುಗಳಿಗೆ ಸರ್ಕಾರಿ ಉದ್ಯೋಗ ಒದಗಿಸಲು ಎಲ್ಲ ಇಲಾಖೆಗಳಲ್ಲಿ ಶೇ.2 ರಷ್ಟು ಮೀಸಲಾತಿಯನ್ನು, ಹಾಗೂ ಪೊಲೀಸ್ ಇಲಾಖೆಯಲ್ಲಿ ಶೇ.3 ರಷ್ಟು ಕ್ರೀಡಾ ಮೀಸಲಾತಿಯನ್ನು ನೀಡಲಾಗುತ್ತಿದೆ ಎಂದರು.

ದಸರಾ ಕರಗೋತ್ಸವಕ್ಕೆ ಸಾಂಪ್ರದಾಯಿಕ ನಾಂದಿ


ದಸರಾಕ್ಕೆ ಕರಗೋತ್ಸವದ ಮೂಲಕ ಸಾಂಪ್ರದಾಯಿಕ ಚಾಲನೆ ನೀಡಲಾಯಿತು.

ಮಡಿಕೇರಿ,ಸೆ.22–ಐತಿಹಾಸಿಕ ಹಿನ್ನೆಲೆ ಹೊಂದಿರುವ ಮಡಿಕೇರಿ ದಸರಾಕ್ಕೆ ಕರಗೋತ್ಸವದ ಮೂಲಕ ಸೋಮವಾರ ಸಾಂಪ್ರದಾಯಿಕಚಾಲನೆ ನೀಡಲಾಯಿತು.

ನಗರದ ಪಂಪಿನ ಕೆರೆಯಲ್ಲಿ 4 ಶಕ್ತಿ ದೇವತೆಗಳಾದ ಶ್ರೀ ಕುಂದುರುಮೊಟ್ಟೆ, ಚೌಟಿ ಮಾರಿಯಮ್ಮ, ಶ್ರೀ ದಂಡಿನ ಮಾರಿಯಮ್ಮ, ಶ್ರೀ ಕೋಟೆಮಾರಿಯಮ್ಮ ಹಾಗೂ ಶ್ರೀ ಕಂಚಿ ಕಾಮಾಕ್ಷಿಯಮ್ಮ ಕರಗಗಳನ್ನು ಹೊರಡಿಸುವ ಮೂಲಕ ನಾಡಿನ ಸುಭೀಕ್ಷೆಗಾಗಿ ಪ್ರಾರ್ಥಿಸಲಾಯಿತು. ನವರಾತ್ರಿ ಆರಂಭದ ಮೊದಲ ದಿನದಂದು 4 ಶಕ್ತಿ ದೇವತೆಗಳ ಕರಗಗಳನ್ನು ಹೊರುವ ವ್ರತಾಧಾರಿಗಳು ಶಕ್ತಿ ದೇವಾಲಯಗಳಲ್ಲಿ ಪೂಜೆ ಸಲ್ಲಿಸಿ, ಸಾಂಪ್ರದಾಯಿಕ ವಾದ್ಯದೊಂದಿಗೆ ಕರಗ ಕಟ್ಟಲು ಅಗತ್ಯವಿರುವ ಶಕ್ತಿ ದೇವತೆಗಳ ಬೆಳ್ಳಿಯ ಮುಖವಾಡ, ಮಲ್ಲಿಗೆ, ಸೇವಂತಿಗೆ, ಕನಕಾಂಬರ ಹೂವುಗಳು, ದೇವಿಯ ಪವಿತ್ರ ಆಯುಧಗಳಾದ ಬೆತ್ತ, ಚೂರಿ ಹಾಗೂ ಇತರ ಪೂಜಾ ಪರಿಕರಗಳೊಂದಿಗೆ ಪಂಪಿನಕೆರೆಗೆ ಆಗಮಿಸಿದರು. ಬಳಿಕ ಶ್ರದ್ಧಾಭಕ್ತಿಯ ಪ್ರಾರ್ಥನೆಯ ಮೂಲಕ ಕರಗ ಕಟ್ಟಲು ಪ್ರಾರಂಭಿಸಿದರು. ಕರಗ ಶೃಂಗಾರ ಪೂರ್ಣಗೊಂಡ ನಂತರ ವಿಶೇಷ ಪ್ರಾರ್ಥನೆ ಮೂಲಕ 4 ಶಕ್ತಿ ದೇವತೆಗಳನ್ನು ಆಹ್ವಾನಿಸಿದರು, ಕರಗಗಳಿಗೆ ವಿಶೇಷ ಪೂಜೆ ನೆರವೇರಿಸಿ ಕರಗಗಳನ್ನು ತಲೆಯ ಮೇಲೆ ಹೊತ್ತ ವ್ರತಾದಾರಿಗಳು ಪಂಪಿನಕೆರೆಯಿಂದ ಸಾಂಪ್ರದಾಯಿಕ ವಾದ್ಯಗಳಿಗೆ ನರ್ತಿಸುತ್ತಾ ನಗರದ ವಿಜಯ ದಶಮಿಯಂದು ಬನ್ನಿ ಕಡಿಯುವ ಬನ್ನಿಮಂಟಪಕ್ಕೆ ಆಗ ಮಿಸಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಶ್ರೀ ಚೌಡೇಶ್ವರಿ ದೇವಾಲಯ ಮತ್ತು ವಿಷ್ಣುವಿನ ಅವತಾರವಾದ ಶ್ರೀ ಪೇಟೆ ರಾಮಮಂದಿರಕ್ಕೆ ತೆರಳಿ ನಂತರ ತಮ್ಮ ದೇವಾಲಯದ ನೆಲೆಗಳಿಗೆ ಮರಳಿದವು.

ಜಿಲ್ಲಾ ಉಸ್ತುವಾರಿ ಸಚಿವ ಬೋಸ್ ರಾಜು, ಶಾಸಕ ಡಾ.ಮಂತರ್ ಗೌಡ, ಮಾಜಿ ಶಾಸಕರಾದ ಅಪ್ಪಚ್ಚು ರಂಜನ್, ಕೆ.ಜಿ. ಬೋಪಯ್ಯ, ಡಿಸಿ ವೆಂಕಟ್‌ರಾಜಾ, ಎಸ್‌ಪಿ ಕೆ.ರಾಮರಾಜನ್, ದಶ ಮಂಟಪಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಕರಗ ದೇವಾಲಯ ಸಮಿತಿ ಪ್ರಮುಖರು ಹಾಜರಿದ್ದರು.

ಜನೋತ್ಸವಕ್ಕೆ ಅದ್ದೂರಿ ಚಾಲನೆ


ಶ್ರೀ ಚಾಮುಂಡೇಶ್ವರಿ ದೇವಿಯ ಪೂಜಾ ಕಾರ್ಯಕ್ರಮದ ಮೂಲಕ ಜನೋತ್ಸವ ಕಾರ್ಯಕ್ರಮಕ್ಕೆ ಸೋಮವಾರ ಚಾಲನೆ ನೀಡಲಾಯಿತು.

ಗೋಣಿಕೊಪ್ಪ ಸೆ22–ಶ್ರೀ ಚಾಮುಂಡೇಶ್ವರಿ ದೇವಿಯ ಪ್ರತಿಷ್ಠಾಪನೆ ಹಾಗೂ ಪೂಜಾ ಕಾರ್ಯಕ್ರಮದ ಮೂಲಕ 47ನೇ ವರ್ಷದ ಜನೋತ್ಸವ ಕಾರ್ಯಕ್ರಮಕ್ಕೆ ಸೋಮವಾರ ಅದ್ದೂರಿ ಚಾಲನೆ ನೀಡಲಾಯಿತು.

ಶಾಸಕ ಎ.ಎಸ್.ಪೊನ್ನಣ್ಣ, ಶ್ರೀ ಕಾವೇರಿ ದಸರಾ ಸಮಿತಿ ಅಧ್ಯಕ್ಷ ಪ್ರಮೋದ್ ಗಣಪತಿ, ದಸರಾ ಸಮಿತಿಗೆ ಚಾಮುಂಡೇಶ್ವರಿ ದೇವಿ ವಿಗ್ರಹ ದಾನಿಗಳಾದ ಕೇಶವ ಕಾಮತ್ ಹಾಗೂ ಸಂಧ್ಯಾಸಮಿತಿ ಸಂಚಾಲಕ ಪಿ ಜಿ.ರಾಜಶೇಖರ್, ದಶ ಮಂಟಪಗಳ ಅಧ್ಯಕ್ಷ ಶಾಜಿ ಅಚ್ಚುತ್ತನ್, ಮಹಿಳಾ ದಸರಾ ಸಮಿತಿ ಅಧ್ಯಕ್ಷೆ ಶ್ರೀಮತಿ ಮಂಜುಳಾ, ಪೊನ್ನಂಪೇಟೆ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ ಕಾಳಿಮಾಡ ಪ್ರಶಾಂತ್, ಕಾವೇರಿ ದಸರಾ ಸಮಿತಿ ಪ್ರಧಾನ ಕಾರ್ಯದರ್ಶಿ ಕಂದಾ ದೇವಯ್ಯ, ಕೊಡಗು ಜಿಲ್ಲಾ ಕಾಂಗ್ರೆಸ್ ಪ್ರಧಾನ ಶ್ರೀ ಕಾವೇರಿ ದಸರಾ ಸಂಯೋಜಕ ಚಂದನ್ ಕಾಮತ್ ಹಾಗೂ ಮನೆಯಪಂಡ ಶೀಲಾ ಬೋಪ್ಪಣ್ಣ ಕಾರ್ಯದರ್ಶಿ ಕಡೇಮಡ ಕುಸುಮ ಜೋಯಪ್ಪ, ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ.ಜೆಬಾಬು ಪ್ರಚಾರ ಸಮಿತಿ ಸಂಚಾಲಕ ಪಿ.ಕೆ ಪ್ರವೀಣ್ ಕೊಡಗು ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯೆ ಶ್ರೀಮತಿ ನೂರೇರ ಧನ್ಯ ವಿರಾಜಪೇಟೆ ಕೆಡಿಪಿ ಸದಸ್ಯ ಅಜಿತ್ ಅಯ್ಯಪ್ಪ ಹಾಗೂ ಅಬ್ದುಲ್ ಸಮದ್, ಶ್ರೀ ಕಾವೇರಿ ದಸರಾ ಸಮಿತಿ ಉಪಾಧ್ಯಕ್ಷ ಶಿವಾಜಿ, ಗ್ರಾಮ ಪಂಚಾಯಿತಿ ಸದಸ್ಯರು ಇದ್ದರು.

ಮಕ್ಕಳ ದಸರಾ, ಮಹಿಳಾ ದಸರಾ, ಯುವ ದಸರಾ ಸೇರಿದಂತೆ ಕಬಡ್ಡಿ, ಬಹುಭಾಷಾ ಕವಿಗೋಷ್ಠಿ ದಸರಾದ ವಿಶೇಷತೆಯಾಗಿದೆ.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮೈದಾನಲ್ಲಿ ನಿರ್ಮಿಸಿರುವ ಕಾವೇರಿ ಕಲಾ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ. ಪಟ್ಟಣದ ಮುಖ್ಯ ರಸ್ತೆಯಲ್ಲಿ ಲೈಟಿಂಗ್ ವ್ಯವಸ್ಥೆ ಕೂಡ ಮಾಡಲಾಗಿದೆ. ಸಂಜೆ 6 ಗಂಟೆಗೆ ನಿತ್ಯ ಸ್ಥಳೀಯ ಕಾರ್ಯಕ್ರಮಗಳು ಮತ್ತು ರಾತ್ರಿ 7.30 ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು, 8.30 ಗಂಟೆಯಿಂದ ತಡರಾತ್ರಿ 11.30 ಗಂಟೆವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ.

ಮಳಿಗೆಯಲ್ಲಿ ಸರಗಳ್ಳತನ ಮಾಡಿದ್ದ ಮೂವರು ಮಹಿಳೆಯರ ಬಂಧನ


ಪೂಜಾ


ಬಬಿತಾ


ಅಲ್ಪನಾ

ಮಡಿಕೇರಿ, ಸೆ.22– ಸುಂಟಿ ಕೊಪ್ಪ ಪಟ್ಟಣದ ಫ್ಯಾಷನ್ ಜ್ಯುವೆಲ್ಲರಿಯಲ್ಲಿ ಇತ್ತೀಚೆಗೆ ನಡೆದಿದ್ದ ಸರ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರ ಮೂಲದ ಮೂವರು ಮಹಿಳಾ ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯ ಅಲ್ಪನಾ(37), ಬಬಿತಾ(47) ಹಾಗೂ ಪೂಜಾ (29) ಬಂಧಿತ ಆರೋಪಿಗಳಾಗಿದ್ದು, ಇವರು ಕಳವು ಮಾಡಿದ್ದ 22. 180 ಗ್ರಾಂ ತೂಕದ 2 ಚಿನ್ನದ ಸರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೆ.14ರಂದು ಅಪರಿಚಿತ ಮೂವರು ಮಹಿಳೆಯರು ಚಿನ್ನಾಭರಣ ಖರೀದಿಯ ನೆಪದಲ್ಲಿ ಸುಂಟಿಕೊಪ್ಪದ ಫ್ಯಾಷನ್ ಜ್ಯುವೆಲ್ಲರಿಗೆ ಬಂದಿದ್ದರು. ಯಾರ ಗಮನಕ್ಕೂ ಬಾರದ ಹಾಗೆ ಅಂದಾಜು 22 ಗ್ರಾಂ ತೂಕದ 2 ಚಿನ್ನದ ಸರವನ್ನು ಕಳವು ಮಾಡಿರುವ ಕುರಿತು ಅಂಗಡಿ ಮಾಲೀಕರು ಸುಂಟಿಕೊಪ್ಪ ಪೊಲೀಸರಿಗೆ ದೂರು ನೀಡಿದ್ದರು.

ತನಿಖೆ ಕೈಗೊಂಡ ಸೋಮವಾರಪೇಟೆ ಉಪ ವಿಭಾಗದ ಡಿವೈಎಸ್‌ಪಿ ಚಂದ್ರಶೇಖರ್.ಪಿ, ಕುಶಾಲನಗರ ವೃತ್ತದ ಸಿಪಿಐ ದಿನೇಶ್ ಕುಮಾರ್, ಪಿಎಸ್‌ಐ ಮೋಹನ್ ರಾಜು.ಪಿ, ಸುಂಟಿಕೊಪ್ಪ ಠಾಣೆಯ ಪಿಎಸ್ಐ ಭಾರತಿ ಕೆ.ಹೆಚ್ ಹಾಗೂ ಸಿಬ್ಬಂದಿಗಳ ವಿಶೇಷ ತನಿಖಾ ತಂಡ ಆರೋಪಿಗಳನ್ನು ಪ್ರಕರಣ ನಡೆದ 7 ದಿನಗಳಲ್ಲಿ ಬಂಧಿಸುವಲ್ಲಿ ಯಶಸ್ವಿಯಾಗಿದೆ.

ಎಮ್ಮೆಮಾಡು ದರ್ಗಾಕ್ಕೆ ಸ್ಪೀಕರ್ ಖಾದರ್ ಭೇಟಿ

ನಾಪೋಕ್ಲು: ಎಮ್ಮೆಮಾಡು ಗ್ರಾಮದಲ್ಲಿನ ಇತಿಹಾಸ ಪ್ರಸಿದ್ಧ ಸೂಫೀ ಶಹೀದ್(ರ) ದರ್ಗಾದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ ಖಾದರ್ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಎಮ್ಮೆಮಾಡುವಿನಲ್ಲಿ ಖಾಸಗಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ಅವರು ಇಸ್ಲಾಂ ಮುಸ್ಲಿಂ ಜಮಾತ್ ಕಚೇರಿಗೆ ಭೇಟಿ ನೀಡಿದ್ದಾಗ ಅವರನ್ನು ಜಮಾತ್ ಪರವಾಗಿ ಸನ್ಮಾನಿಸಲಾಯಿತು.

ರಾಜ್ಯ ಸರ್ಕಾರದ ಧೋರಣೆ ಖಂಡಿಸಿ ನಾಳೆ ರಾಜ್ಯವ್ಯಾಪಿ ರಾಸ್ತಾ ರೋಕೋ:ಬೋಪಯ್ಯ


ವಿಧಾನಸಭಾ ಮಾಜಿ ಅಧ್ಯಕ್ಷ ಕೆ.ಜಿ. ಬೋಪಯ್ಯ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು

ಮಡಿಕೇರಿ, ಸೆ.22–ಕನಿಷ್ಟ ನಿರ್ವಹಣೆಯನ್ನು ಮಾಡದೆ ರಾಜ್ಯವ್ಯಾಪಿ ರಸ್ತೆಗಳು ಸಂಪೂರ್ಣ ಹದಗೆಡಲು ಕಾರಣವಾಗುತ್ತಿರುವ ಸರ್ಕಾರದ ಧೋರಣೆಯನ್ನು ಖಂಡಿಸಿ ಸೆ.24ರಂದು ಜಿಲ್ಲೆಯ ಪ್ರಮುಖ ಪಟ್ಟಣ ಪ್ರದೇಶಗಳಲ್ಲಿ ಬೆಳಗ್ಗೆ 11ರಿಂದ 12 ಗಂಟೆಯವರೆಗೆ ಏಕ ಕಾಲಕ್ಕೆ 'ರಾಸ್ತಾ ರೋಕೋ' ಚಳವಳಿಯನ್ನು ಹಮ್ಮಿಕೊಳ್ಳಲಾಗಿದೆ. ಎಂದು ವಿಧಾನಸಭಾ ಮಾಜಿ ಅಧ್ಯಕ್ಷ ಕೆ.ಜಿ. ಬೋಪಯ್ಯ ತಿಳಿಸಿದ್ದಾರೆ.

ಮಳೆಯಿಂದ ರಸ್ತೆಗಳು ಹದಗೆಟ್ಟಿದೆ ಎಂದರೆ ಅದು ಸಮರ್ಥನೀಯವಲ್ಲ. ಜಿಲ್ಲೆಯಲ್ಲಿ 2018ರಿಂದ ನಿರಂತರವಾಗಿ ಪ್ರತಿ ವರ್ಷ ಅಧಿಕ ಮಳೆಯಾಗುತ್ತಿದೆ. ಹೀಗಿದ್ದೂ ಹಿಂದಿನ ಬಿಜೆಪಿ ಅವಧಿಯಲ್ಲಿ ಆಯಾ ಸಂದರ್ಭಗಳಲ್ಲಿ ದುರಸ್ತಿ ಕಾರ್ಯಗಳೊಂದಿಗೆ ರಸ್ತೆಗಳನ್ನು ವ್ಯವಸ್ಥಿತವಾಗಿಡುವ ಪ್ರಯತ್ನ ನಡೆಯುತಿತ್ತು. ಆದರೆ 2023ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಇಲ್ಲಿಯವರೆಗೂ ರಸ್ತೆಗಳ ಕನಿಷ್ಟ ನಿರ್ವಹಣಾ ಕಾರ್ಯವೂ ಇಲ್ಲದೆ ಬಹುತೇಕ ರಸ್ತೆಗಳು ಸಂಚಾರಕ್ಕೆ ಸಾಧ್ಯವಿಲ್ಲದಂಥ ಸ್ಥಿತಿ ಪರಿಣಮಿಸಿದೆಯೆಂದು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ನವರಾತ್ರಿ ಆರಂಭದಲ್ಲೆ ಪ್ರಧಾನಿ ಮೋದಿ ಅವರು ಬಡವರ್ಗ ಮತ್ತು ಮಧ್ಯಮವರ್ಗವನ್ನು ಕೇಂದ್ರೀಕರಿಸಿ ಜಿಎಸ್‌ಟಿ ತೆರಿಗೆಯನ್ನು ಇಳಿಸುವ ಮೂಲಕ ಉತ್ಸವದ ಕೊಡುಗೆಯನ್ನು ನೀಡಿದ್ದಾರೆ. ಇದರಿಂದ ಜೀವ ಸಂರಕ್ಷಕ ಔಷಧಿಯೊಂದಿಗೆ 375 ನಿತ್ಯೋಪಯೋಗಿ ವಸ್ತುಗಳ ದರ ಇಳಿದಿದೆ. ಇದರಿಂದ ರಾಷ್ಟ್ರದ ಜನತೆಯ 1.50 ಲಕ್ಷ ಕೋಟಿ ಹಣ ಉಳಿತಾಯವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಮಾಜಿ ಸಚಿವ ಎಂ.ಪಿ.ಅಪ್ಪಚ್ಚು ರಂಜನ್ ಮಾತನಾಡಿ, ಜಾತಿ ಗಣತಿ ಹಿನ್ನೆಲೆಯಲ್ಲೆ 'ಕೊಡವ ಧರ್ಮ' ಪ್ರಸ್ತಾಪವಾಗುತ್ತಿದೆ. ಆದರೆ ಇದಕ್ಕೆ ಯಾವುದೇ ಮಾನ್ಯತೆ ಇಲ್ಲ. ಗಣತಿಯಲ್ಲಿ ಕೊಡವ ಧರ್ಮ ಎಂದು ನಮೂದಿಸಿದರೆ ಅದು ಕೇವಲ 'ಇತರೆ' ಎಂದಷ್ಟೆ ಪರಿಗಣಿಸಲಾಗುತ್ತದೆ. ಈ ಹಿನ್ನೆಲೆ ಕೊಡವರು 'ಹಿಂದೂ' ಧರ್ಮ ಎಂದೇ ನಮೂದಿಸಬೇಕೆಂದು ಮನವಿ ಮಾಡಿದರು.

ರಸ್ತೆ ದುರಸ್ತಿಗೆ ಚಿಕ್ಕಾಸು ಇಲ್ಲ: ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಪ್ರತಿ ಕಿ.ಮೀ. ರಸ್ತೆ ನಿರ್ವಹಣೆಗೆ ವಾರ್ಷಿಕ 60 ಸಾವಿರ ರೂ.ಗಳನ್ನು ಒದಗಿಸಲಾಗುತಿತ್ತು. ಆದರೆ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಈ ಹಣ ಯಾರ ಜೇಬಿಗೆ ಹೋಗಿದೆ ಎಂದು ಪ್ರಶ್ನಿಸಿದರು. ಈ ಸರ್ಕಾರದ ಬಳಿ ರಸ್ತೆ ದುರಸ್ತಿಗೆ ಚಿಕ್ಕಾಸು ಇಲ್ಲ ಎಂದು ಆರೋಪಿಸಿದರು. ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಚಲನ್ ಮಾತನಾಡಿ, ಅಖಿಲ ಕೊಡವ ಸಮಾಜ ಕೊಡವರು 'ಕೊಡವ ಧರ್ಮಕ್ಕೆ' ಸೇರಿದವರು ಎನ್ನುವ ತನ್ನ ನಿಲುವಿನಿಂದ ಹಿಂದಕ್ಕೆ ಸರಿಯಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಎಸ್‌ಟಿ ಮೋರ್ಚಾ ಜಿಲ್ಲಾಧ್ಯಕ್ಷ ಆರ್.ಕೆ. ಚಂದ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ಜಿಲ್ಲಾ ಉಪಾಧ್ಯಕ್ಷ ಮನು ಮಂಜುನಾಥ್ ಉಪಸ್ಥಿತರಿದ್ದರು.

ಪ್ರಕೃತಿ ಬಿಟ್ಟರೆ ಹಬ್ಬ–ಆಚರಣೆಗೆ ಬೆಲೆ ಇಲ್ಲ

ವಿರಾಜಪೇಟೆ: ಪ್ರಕೃತಿಯ ಹೊರತಾಗಿ ಯಾವುದೇ ಹಬ್ಬ ಅಥವಾ ಆಚರಣೆಗಳಿಗೆ ಮೌಲ್ಯಗಳಿಲ್ಲ ಎಂದು ಅರಮೇರಿ ಕಳಂಚೇರಿ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಅಭಿಪ್ರಾಯಪಟ್ಟರು.

ಪಟ್ಟಣದ ಸದ್ಭಾವನಾ ಮಂಚ್‌ನಿಂದ ಸಂತ ಅನ್ನಮ್ಮ ಸಭಾಂಗಣದಲ್ಲಿ ನಡೆದ ಸೌಹಾರ್ದ ಸಂಗಮ ಕಾರ್ಯಕ್ರಮದಲ್ಲಿ ಮಾತನಾಡಿ, ಪ್ರತಿ ಹಬ್ಬವೂ ಪ್ರಕೃತಿಯೊಂದಿಗೆ ಹತ್ತಿರದ ಸಂಬಂಧವನ್ನು ಹೊಂದಿದೆ. ಹಬ್ಬಗಳಲ್ಲಿನ ಸಾತ್ವಿಕವಾದ ಮೂಲತತ್ವಗಳನ್ನು ದೂರವಿಟ್ಟು, ಇಂದು ಕೇವಲ ಅದನ್ನು ವೈಭವೀಕರಿಸುವ ಕೆಲಸವಾಗುತ್ತಿದೆ. ನಿಜಕ್ಕೂ ಹಬ್ಬಗಳ ಮೂಲ ತತ್ವಕ್ಕೆ ಹೆಚ್ಚಿನ ಒತ್ತನ್ನು ನೀಡಬೇಕಿದೆ. ಹಬ್ಬಗಳ ಮೂಲ ಉದ್ದೇಶ ಎಲ್ಲರನ್ನೂ ಒಂದುಗೂಡಿಸುವುದೇ ಆಗಿದೆ ಎಂದರು.

ಅಮ್ಮತ್ತಿಯ ಸಂತ ಅಂಥೋಣಿ ಚರ್ಚ್‌ನ ಧರ್ಮಗುರು ಮದಲೈ ಮುತ್ತು ಮಾತನಾಡಿ, ದ್ವೇಷ ಹಾಗೂ ಪರ ದೂಷಣೆಯನ್ನು ದೂರ ಮಾಡಿದರೆ ಉತ್ತಮ ಬದುಕು ಸಾಧ್ಯ. ಐಕ್ಯತೆ ಒಗ್ಗಟು ಹಾಗೂ ಪ್ರೀತಿಯಿಂದ ಬದುಕಿದರೆ ಬಾಳು ಸಾರ್ಥಕ ಎಂದರು.

ಜಮಾಅತೆ ಇಸ್ಲಾಂನ ರಾಜ್ಯ ಘಟಕದ ಜಂಟಿ ಕಾರ್ಯದರ್ಶಿ ರಿಯಾಜ್ ಅಹಮದ್ ಮಾತನಾಡಿ, ಜಾತಿ–ಧರ್ಮಗಳ ನಡುವೆ ಹೋರಾಟ ನಡೆಯದೆ, ಮಾದಕ ವಸ್ತುಗಳು ಸೇರಿದಂತೆ ಸಮಾಜದಲ್ಲಿನ ಅನಿಷ್ಠಗಳ ವಿರುದ್ಧ ಹೋರಾಟ ನಡೆಯಬೇಕಿದೆ ಎಂದರು.

ಕಾವೇರಿ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪಟ್ಟಡ ಪೂವಣ್ಣ, ಸದ್ಭಾವನಾ ಮಂಚ್‌ನ ಅಧ್ಯಕ್ಷ ಡಾ.ಎಂ.ಸಿ. ಕಾರ್ಯಪ್ಪ ಅಧ್ಯಕ್ಷತೆ ವಹಿಸಿದ್ದರು. ಪುರಸಭೆಯ ಅಧ್ಯಕ್ಷೆ ದೇಚಮ್ಮ ಕಾಳಪ್ಪ ಹಾಗೂ ವಕೀಲರ ಸಂಘದ ಅಧ್ಯಕ್ಷ ಸಿ.ಕೆ. ಪೂವಣ್ಣ ಸಭೆಯನ್ನುದ್ದೇಶಿಸಿ ಮಾತನಾಡಿದರು. ಕೊಡವ ಸಮಾಜದ ಅಧ್ಯಕ್ಷರಾಗಿ ಆಯ್ಕೆಗೊಂಡ ಸದ್ಭಾವನಾ ಮಂಚ್‌ನ ಕಾರ್ಯಾಧ್ಯಕ್ಷ ಅಮ್ಮಣಿಚಂಡ ರವಿ ಉತ್ತಪ್ಪ ಅವರನ್ನು ಸನ್ಮಾನಿಸಲಾಯಿತು. ಮಂಚ್‌ನ ಕಾರ್ಯದರ್ಶಿ ಅಬ್ದುಲ್ ರೆಹಮಾನ್, ಚೋಪಿ ಜೋಸೆಫ್, ರಶೀದ್, ಪುಷ್ಪರಾಜ್ ಪದಾಧಿಕಾರಿಗಳು, ಭಾಗವಹಿಸಿದ್ದರು.


ಕೊಡವ ಸಮಾಜದ ನೂತನ ಅಧ್ಯಕ್ಷ ಅಮ್ಮಣಿಚಂಡ ರವಿ ಉತ್ತಪ್ಪರನ್ನು ಸನ್ಮಾನಿಸಲಾಯಿತು.

ನಾಳೆ ಬಸವ ಸಂಸ್ಕೃತಿ ಅಭಿಯಾನ

ಕೊಳ್ಳೇಗಾಲ: ಇದೇ ಪ್ರಥಮ ಬಾರಿಗೆ ನಗರದಲ್ಲಿ ಸೆ.24ರಂದು ಲಿಂಗಾಯಿತ ಮಠಾಧಿಪತಿಗಳ ಒಕ್ಕೂಟದ ವತಿಯಿಂದ ಬಸವ ಸಂಸ್ಕೃತಿ ಅಭಿಯಾನ ನಡೆಯಲಿದೆ.

ವಿಶ್ವಗುರು ಬಸವಣ್ಣನವರಿಗೆ ರಾಜ್ಯ ಸರ್ಕಾರ ಸಾಂಸ್ಕೃತಿಕ ನಾಯಕನೆಂದು ಘೋಷಣೆ ಮಾಡಿ ವರ್ಷಗಳೆ ಸಂದಿದೆ. ಇದರ ಮುಂದುವರಿದ ಭಾಗವಾಗಿ ಲಿಂಗಾಯಿತ ಮಠ ಅಧಿಪತಿಗಳ ಒಕ್ಕೂಟದ ವತಿಯಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಬಸವ ಸಂಸ್ಕೃತಿ ಅಭಿಯಾನವು ಜರುಗುತ್ತಿದ್ದು ಅದರಂತೆ ಜಿಲ್ಲೆಯಲ್ಲಿ ಸೆ.24ರ ಬೆಳಿಗ್ಗೆ 10.30ಕ್ಕೆ ವಿದ್ಯಾರ್ಥಿಗಳೊಂದಿಗೆ ಸಂವಾದ, ಮಧ್ಯಾಹ್ನ 12ಕ್ಕೆ ಜಾಗೃತಿ ಜಾಥ, 3 ಗಂಟೆಗೆ ಬಹಿ ರಂಗ ಸಮಾ ವೇಶ, ರಾತ್ರಿ 7ಕ್ಕೆ ಜಂಗಮದೆಡೆಗೆ ಎಂಬ ನಾಟಕ ಪ್ರದರ್ಶನವಿರುತ್ತದೆ ಎಂದು ಅಖಿಲ ಭಾರತ ವೀರಶೈವ ಮಹಾಸಭೆ ತಾಲೂಕು ಅಧ್ಯಕ್ಷ ತಿಮ್ಮರಾಜಿಪುರ ಪುಟ್ಟಣ್ಣ, ಜಾಗತಿಕ ಲಿಂಗಾಯಿತ ಮಹಾಸಭೆ ತಾಲೂಕು ಅಧ್ಯಕ್ಷ ಬಿಂದು ಲೋಕೇಶ್ ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಜಾತಿ ಕಾಲಂನಲ್ಲಿ ಉಪ್ಪಾರ ಎಂದು ಬರೆಸಿ

ಚಾಮರಾಜನಗರ, ಸೆ.22– ಜಿಲ್ಲೆಯಲ್ಲಿ ವಾಸಮಾಡುವ ಉಪ್ಪಾರ ಸಮುದಾಯದವರು ಜಾತಿ ಕಾಲಂನಲ್ಲಿ ಉಪ್ಪಾರ ಧರ್ಮದ ಕಾಲಂನಲ್ಲಿ ಹಿಂದೂ ಎಂದು ಬರೆಸುವಂತೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಮನವಿ ಮಾಡಿದರು.

ಉಪ್ಪಾರ ಸಮುದಾಯ ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಹಿಂದುಳಿದಿದ್ದು, ಜೀವನೋಪಾಯಕ್ಕಾಗಿ ಸುಣ್ಣ ಸುಡುವುದು, ಮೀನು ಹಿಡಿಯುವುದು, ಗಾರೆ ಕೆಲಸ ಸೇರಿದಂತೆ ವಿವಿಧವೃತ್ತಿ ಅವಲಂಬಿಸಿದ್ದಾರೆ. ಶೋಷಿತ ಸಮುದಾಯದವರು ಆರ್ಥಿಕವಾಗಿ ಸಬಲರಾಗಬೇಕು ಎಂಬ ದೃಷ್ಟಿಯಿಂದ ರಾಜ್ಯಸರ್ಕಾರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕೈಗೊಂಡಿರುವುದು ಸ್ವಾಗತಾರ್ಹ, ಇದಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಮುದಾಯದ ಪರವಾಗಿ ಅಭಿನಂದಿಸುವುದಾಗಿ ಸುದ್ಧಿಗೋಷ್ಠಿಯಲ್ಲಿ ಹೇಳಿದರು.

ಸರ್ಕಾರದ ವಿವಿಧಸೌಲಭ್ಯ ಪಡೆಯಲು ಸಮೀಕ್ಷೆ ಸಹಕಾರಿಯಾಗಿದ್ದು, ಮನೆಗಳಿಗೆ ಜಾತಿಸಮೀಕ್ಷೆ ಗಣತಿದಾರರು ಬಂದ ವೇಳೆ ಜಾತಿಕಾಲಂನಲ್ಲಿ ಉಪ್ಪಾರ ಎಂದು ಬರೆಸಬೇಕು ಎಂದು ಮನವಿ ಮಾಡಿದರು.

ಗೋಷ್ಠಿಯಲ್ಲಿ ಜಿಲ್ಲಾಪ್ರಧಾನ ಕಾರ್ಯದರ್ಶಿ ಚಿಕ್ಕಮಹಾದೇವ, ಗಡಿ ಯಜಮಾನರಾದ ಕೋಡಿಮೋಳೆ ಗೋವಿಂದಶೆಟ್ಟಿ, ಮಸಣಶೆಟ್ಟಿ, ಶ್ರೀನಿವಾಸ್, ನಾಗಶೆಟ್ಟಿ, ಸಿದ್ದಲಿಂಗ ಶೆಟ್ಟಿ, ನಾರಾಯಣಿ ಹಾಜರಿದ್ದರು.

ಪುರಸಭೆ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ


ಪುರಸಭೆ ನೂತನ ಅಧ್ಯಕ್ಷ ಉಪಾಧ್ಯಕ್ಷರನ್ನು ಮುಖಂಡರು ಅಭಿನಂದಿಸಿದರು.

ಗುಂಡ್ಲುಪೇಟೆ, ಸೆ.22–ಪಟ್ಟಣದ ಪುರಸಭೆ ನೂತನ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆ ಅವಿರೋಧವಾಗಿ ನಡೆಯಿತು.

ಕಾಂಗ್ರೆಸ್ ಪಕ್ಷದ ಆಂತರಿಕ ಒಪ್ಪಂದದಂತೆ ಹಿಂದೆ ಅಧ್ಯಕ್ಷರಾಗಿದ್ದ ಜಿ.ಎಸ್. ಮಧು ಸೂದನ್ ಉಪಾಧ್ಯಕ್ಷ ಅಣ್ಣಯ್ಯ ಸ್ವಾಮಿಯರ ರಾಜಿನಾಮೆಯಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಶಶಿಧರ್(ದೀಪು) ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಕಪ್ಪಣ್ಣ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ತಹಸೀಲ್ದಾರ್ ಎಂ.ಎಸ್.ತನ್ಮಯಿ ಘೋಷಿಸಿದರು. ನೂತನ ಅಧ್ಯಕ್ಷ ಉಪಾಧ್ಯಕ್ಷರನ್ನು ಶಾಸಕ ಎಚ್.ಎಂ.ಗಣೇಶ ಪ್ರಸಾದ್, ಜಿ.ಪಂ. ಮಾಜಿ ಸದಸ್ಯ ಕೆ.ಎಸ್. ಮಹೇಶ್ ಹಾಗೂ ಪುರಸಭೆ ಸದಸ್ಯರು ಅಭಿನಂದಿಸಿದರು.

ಇಂದು ಚಾ.ನಗರದಲ್ಲಿ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಕಾರ್ಯಕ್ರಮ

ಚಾಮರಾಜನಗರ, ಸೆ.22–ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಕಾರ್ಯಕ್ರಮವನ್ನು ಜನರಿಗಾಗಿ ಮತ್ತು ಜಗತ್ತಿಗಾಗಿ ಆಯುರ್ವೇದ ಎಂಬ ಘೋಷ ವಾಕ್ಯದೊಂದಿಗೆ ಸೆ.23ರ ಬೆಳಿಗ್ಗೆ 10.30 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆವರಣ ದಲ್ಲಿರುವ ಎಸ್.ಬಿ.ಐ ಬ್ಯಾಂಕ್ ಮೇಲ್ಭಾಗದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ಸುನೀಲ್ ಬೋಸ್ ಉಪಸ್ಥಿತಿ ವಹಿಸುವರು. ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್. ಮಂಜುನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ.ಮಾದೇಗೌಡ, ಕೆ.ವಿವೇಕಾನಂದ, ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ.ಮರಿಸ್ವಾಮಿ, ನಗರಸಭೆ ಅಧ್ಯಕ್ಷ ಎಸ್. ಸುರೇಶ್, ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಹೆಚ್.ವಿ. ಚಂದ್ರು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮ್ಮದ್ ಅಸ್ಗರ್ (ಮುನ್ನ), ಉಪಾಧ್ಯಕ್ಷೆ ಮಮತ, ಸದಸ್ಯರಾದ ಕಲಾವತಿ, ಎಂ. ಲೋಕೇಶ್ವರಿ ಮುಖ್ಯ ಅತಿಥಿಗಳಾಗಿರುವರು. ಆಯುಷ್ ಇಲಾಖೆಯ ಆಯುಕ್ತ ವಿಪಿನ್ ಸಿಂಗ್ ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು.

ಜಾತಿ ಕಾಲಂನಲ್ಲಿ ನಾಯಕ ಎಂದು ಬರೆಸಲು ಆಗ್ರಹ

ಚಾಮರಾಜನಗರ, ಸೆ.22–ಹಿಂದುಳಿದ ವರ್ಗಗಳ ಆಯೋಗದಿಂದ ಆರಂಭಿಸಿರುವ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಜಿಲ್ಲೆಯಲ್ಲಿ ವಾಸ ಮಾಡುವ ನಾಯಕ ಸಮುದಾಯದವರು ಜಾತಿ ಕಾಲಂನಲ್ಲಿ 9ರಲ್ಲಿ ಉಪ್ಪಾರ 10ನೇ ಧರ್ಮದ ಕಾಲಂನಲ್ಲಿ ಹಿಂದೂ 11ನೇ ಕಾಲಂನಲ್ಲಿ ಪರ್ಯಾಯವಾಗಿ ಪರಿವಾರ (ನಾಯಕ) ಎಂದು ಬರೆಸಬೇಕು ಎಂದು ತಾಲೂಕು ವಿದ್ಯಾಭಿವೃದ್ಧಿ ಸಂಘದ ಉಪಾಧ್ಯಕ್ಷ ಮ. ಶ್ರೀನಿವಾಸ ನಾಯಕ ಹೇಳಿದ್ದಾರೆ

ಸರ್ಕಾರದ ವಿವಿಧ ಸೌಲಭ್ಯ ಪಡೆಯಲು ಸಮೀಕ್ಷೆ ಸಹಕಾರಿಯಾಗಿದ್ದು, ಮನೆಗಳಿಗೆ ಜಾತಿಸಮೀಕ್ಷೆ ಗಣತಿದಾರರು ಬಂದ ವೇಳೆ ಜಾತಿಕಾಲಂನಲ್ಲಿ ನಾಯಕ ಎಂದು ಬರೆಸುವುದು ಕಡ್ಡಾಯ, ಗಣತಿದಾರರು ಮನೆ ಬಳಿ ಬಂದ ವೇಳೆ ಅವರು ಕೇಳುವ ದಾಖಲಾತಿ ಒದಗಿಸಿ ಸಮುದಾಯದ ಹೆಸರು ನಮೂದಿಸಬೇಕು ಎಂದು ಮನವಿ ಮಾಡಿದರು.

ಮೈಸೂರು–ಚಾಮರಾಜನಗರ ನಾಯಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ. ರಾಮಚಂದ್ರ ಮಾತನಾಡಿ, ಪರಿಶಿಷ್ಟ ವರ್ಗಕ್ಕೆ ಇತರೇ ಸಮುದಾಯದವರ ಸೇರ್ಪಡೆಗೆ ನಾವು ವಿರೋಧ ವ್ಯಕ್ತಪಡಿಸುವುದಿಲ್ಲ. ಬದಲಿಗೆ ಜನಸಂಖ್ಯೆಗನುಗುಣವಾಗಿ ಮೀಸಲಾತಿ ಹೆಚ್ಚಳಕ್ಕೆ ಸರ್ಕಾರ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಗೋಷ್ಠಿಯಲ್ಲಿ ತಾಲೂಕು ವಿದ್ಯಾಭಿವೃದ್ಧಿ ಸಂಘದ ಅಧ್ಯಕ್ಷ ಮಹದೇವನಾಯಕ, ಗುಂಡ್ಲುಪೇಟೆ ಮಲ್ಲೇಶ್ ನಾಯಕ, ಶಿವುವಿರಾಟ್, ಕಪಿನಿನಾಯಕ, ಜಯಸುಂದರ, ಸುರೇಶ್ ನಾಯಕ ಹಾಜರಿದ್ದರು.

ಪರಂಪರೆ ಉಳಿಸುವಲ್ಲಿ ಕಲಾವಿದರ ಕೊಡುಗೆ ಅಪಾರ

ಚಾಮರಾಜನಗರದಲ್ಲಿ ದಸರಾ ಮಹೋತ್ಸವಕ್ಕೆ ವಿದ್ಯುಕ್ತ ಚಾಲನೆ


ಚಾಮರಾಜನಗರ ದಸರಾ ಮಹೋತ್ಸವಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಲಾಯಿತು.

ಚಾಮರಾಜನಗರ: ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಇಂದಿನಿಂದ 9ದಿನಗಳವರೆಗೆ ಹಮ್ಮಿಕೊಂಡಿರುವ ಚಾಮರಾಜ ನಗರ ದಸರಾ ಮಹೋತ್ಸವಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಲಾಯಿತು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಆರಂಭ ವಾದ ದಸರಾ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಜಾನಪದ ವಿದ್ವಾಂಸ ದೊಡ್ಡಗವಿ ಬಸವಪ್ಪ ಚಾಲನೆ ನೀಡಿ ರಾಜ್ಯ ಸರ್ಕಾರವೇ ದಸರಾ ಆಚರಣೆ ಮಾಡಬೇಕಿತ್ತು. ಮುಖ್ಯಮಂತ್ರಿಗಳು ಅನುದಾನ ಕೊಡದಿದ್ದರೂ ಜಿಲ್ಲಾ ಉಸ್ತುವಾರಿ ಸಚಿವರಾಗಲಿ, ಅಥವಾ ಶಾಸಕರಾಗಲೀ ಮಾಡಬಹುದಿತ್ತು. ಆದರೆ ದಸರಾ ಪರಂಪರೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ ದಸರಾ ಆಚರಣೆ ಮಾಡುತ್ತಿರುವುದು ಒಳ್ಳೆಯ ಕೆಲಸವಾಗಿದೆ ಎಂದರು.

ರಂಗಕರ್ಮಿ ಕೆ.ವೆಂಕಟರಾಜು ಮಾತನಾಡಿ, ಅಖಿಲ ಕರ್ನಾಟಕ ಕನ್ನಡ ಮಹಾಸಭಾ 9 ದಿನಗಳ ಕಾಲ ಕಾರ್ಯಕ್ರಮ ಮಾಡುವುದು ಸುಲಭದ ಕೆಲಸವಲ್ಲ. ನಾಡಹಬ್ಬ ಮೈಸೂರು ದಸರಾ ಜನಸಾಮಾನ್ಯರ ಹಬ್ಬವಾಗಿದೆ. ಕಲಾವಿದರಿಂದ ಈ ಕಾರ್ಯಕ್ರಮ ನಡೆಯುತ್ತಿರುವುದು ಒಂದು ವಿಶೇಷವಾಗಿದೆ. ಮುಂದಿನ ವರ್ಷಕ್ಕೆ ಚಾಮರಾಜೇಶ್ವರ ದೇವಾಲಯ ನಿರ್ಮಾಣಗೊಂಡು 200 ವರ್ಷ ಆಗುವುದರಿಂದ ಉತ್ತಮ ಕಾರ್ಯಕ್ರಮ ಮಾಡಬೇಕಾದ ಜವಾಬ್ದಾರಿ ಇದೆ ಎಂದರು.

ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿಪಾಪು ಮಾತನಾಡಿ, ಜಿಲ್ಲೆಯ ಕಲಾವಿದರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ದಸರಾ ಆಚರಣೆ ಮಾಡಬೇಕು ಎಂದು ಸಚಿವ ಮಹದೇವಪ್ಪರೊಂದಿಗೆ ಮಾತನಾಡಿ ಸದ್ಯದಲ್ಲೇ ಶ್ರೀ ಮಂಟೇಸ್ವಾಮಿ ಉತ್ಸವಕ್ಕೆ 5ಕೋಟಿ ಕೊಡುತ್ತೇವೆ ಎಂದು ಅವರು ನುಡಿದರು.

ಮಹಾಸಭಾದ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಪ್ರಾಸ್ತಾವಿಕ ಮಾತನಾಡಿದರು. ಚಾಮರಾಜೇಶ್ವರ ಸ್ವಾಮಿ ತಂಡದಿಂದ ನಾದಸ್ವರ ಕಾರ್ಯಕ್ರಮ, ರವಿಚಂದ್ರ ಪ್ರಸಾದ್ ಅವರಿಂದ ಕೊಂಬು ಕಹಳೆವಾದನ, ದೊಡ್ಡ ಗವಿಬಸಪ್ಪ ತಂಡದಿಂದ ಜನಪದ ಗೀತೆಗಳ ಗಾಯನ, ಶಾರದ ಭಜನಾ ತಂಡದ ಭಜನೆ, ಕಾಳಿಕಾಂಬ ಭಜನಾ ಮಂಡಳಿ ಯಿಂದ ಭಜನೆ, ಅಕ್ಷತಾ ಜೈನ್ ತಂಡದಿಂದ ಭರತ ನಾಟ್ಯ, ಅಪ್ಪ ಮೆಲೋಡಿನ್ ತಂಡದಿಂದ ಚಲನಚಿತ್ರ ಗೀತೆ ಗಾಯನ ನಡೆಯಿತು.

ನಗರಸಭಾ ಮಾಜಿ ಅಧ್ಯಕ್ಷ ಸುರೇಶ್ ನಾಯಕ, ಉದ್ಯಮಿ ಶ್ರೀನಿಧಿ ಕುದರ್, ಕಲಾವಿದರಾದ ಘಟಂ ಕೃಷ್ಣ, ಜ.ಸುರೇಶ್ ನಾಗ್, ಬಂಗಾರು, ನಟರಾಜು, ಉಮ್ಮತ್ತೂರು ಬಸವರಾಜು, ಚಂದ್ರು. ಮಾಜಿ ಸದಸ್ಯ ಗಣೇಶ್ ದೀಕ್ಷಿತ್, ಚಾ.ವೆಂ.ರಾಜ್‌ಗೋಪಾಲ್, ಮಹೇಶ್‌ಗೌಡ, ಪಣ್ಯದ ಹುಂಡಿರಾಜು, ಜಗದೀಶ್, ಹೊನ್ನಮ್ಮ, ಚಿನ್ನಮ್ಮ, ಮಂಗಲದ ಶಿವಣ್ಣ, ಮಲ್ಲಣ್ಣ ಇತರರಿದ್ದರು.

ಅಶೋಕ ಅಂಬೇಡ್ಕರ್ ಧಮ್ಮಾ ಯಾತ್ರೆಗೆ ಅದ್ದೂರಿ ಸ್ವಾಗತ



ಚಾಮರಾಜನಗರಕ್ಕೆ ಆಗಮಿಸಿದ ಧಮ್ಮಾ ಯಾತ್ರೆಗೆ ಅದ್ದೂರಿ ಸ್ವಾಗತ ಕೋರಲಾಯಿತು.

ಚಾಮರಾಜನಗರ: ನಗರಕ್ಕೆ ಆಗಮಿಸಿದ ಅಶೋಕ ಅಂಬೇಡ್ಕರ್ ಧಮ್ಮಾ ಯಾತ್ರೆಗೆ ಭಾರತೀಯ ಬೌದ್ಧ ಮಹಾಸಭಾದ ಜಿಲ್ಲಾ ಸಮಿತಿ ವತಿಯಿಂದ ಅದ್ದೂರಿ ಸ್ವಾಗತ ಕೋರಲಾಯಿತು. ನಗರದ ಕರಿನಂಜನಪುರ ರಸ್ತೆಯಲ್ಲಿರುವ ಸಾರನಾಥ ಬುದ್ಧ ವಿಹಾರದ ಮುಂಭಾಗಕ್ಕೆ ಆಗಮಿಸಿದ ಧಮ್ಮಾ ಯಾತ್ರೆಗೆ ಅದ್ದೂರಿ ಸ್ವಾಗತ ಕೋರಲಾಯಿತು.

ಈ ಸಂದರ್ಭದಲ್ಲಿ ಭಾರತೀಯ ಬೌದ್ಧ ಮಹಾಸಭಾದ ಕರ್ನಾಟಕ ರಾಜ್ಯ ಶಾಖೆ ದಕ್ಷಿಣ ವಿಭಾಗದ ಅಧ್ಯಕ್ಷ ಸಿದ್ದರಾಜು ಮಾತನಾಡಿ, ರಾಷ್ಟ್ರೀಯ ಧಮ್ಮಾ ಯಾತ್ರಾ ಸಮಿತಿ ವತಿಯಿಂದ ಸೆ.7 ರಿಂದ ಅ.1 ತನಕ ಕೇರಳ ಧಮ್ಮಾ ಭೂಮಿಯಿಂದ ನಾಗಪುರ ದೀಕ್ಷೆ ಭೂಮಿಯ ತನಕ ಕೇರಳ, ತಮಿಳುನಾಡು, ಪಾಂಡಿಚೇರಿ, ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ ರಾಜ್ಯಗಳಲ್ಲಿ ಸಂಚರಿಸಿ ಅ.1 ರಂದು ನಾಗಪುರ ದೀಕ್ಷ ಭೂಮಿ ತಲುಪಲಿದೆ. ಇದರ ಉದ್ದೇಶ ಅಂಬೇಡ್ಕರ್ ಅವರ ಪ್ರಬುದ್ಧ ಭಾರತ ನಿರ್ಮಾಣವಾಗಿದೆ ಎಂದರು.

1956 ಅ.14ರಂದು ಡಾ. ಬಿ.ಆರ್.ಅಂಬೇಡ್ಕರ್ ಅವರು 8 ಲಕ್ಷಕ್ಕೂ ಹೆಚ್ಚು ಅನುಯಾಯಿಗಳೊಂದಿಗೆ ಮರಳಿ ಮನೆಗೆ ಧಮ್ಮಾದೆಡೆಗೆ ಅಂಥಾ ಹೋದರು. ಕಾರಣ ಏನಪ್ಪ ಅಂದರೆ ಹಿಂದೂ ಧರ್ಮದಲ್ಲಿ ಅಸಮಾನತೆ, ಅಸ್ಪೃಶ್ಯತೆ ಹೀನಾಯ ಬದುಕನ್ನು ತೊಡೆದು ನೆಲದ ಧಮ್ಮಾವಾದ ಬೌದ್ಧ ಧರ್ಮಕ್ಕೆ ಹೋದದ ಪ್ರಯುಕ್ತ ನಾವು ಇಂದು ಬುದ್ಧ ವಿಹಾರವನ್ನು ಕಟ್ಟಿ ಬೌದ್ಧ ಅನುಯಾಯಿಗಳಾಗಿ ಸಣ್ಣ ಪ್ರಮಾಣದಲ್ಲಿ ಒಗ್ಗಟ್ಟು ಆಗುತ್ತಿದ್ದೇವೆ ಮುಂದೊಂದು ದಿನ ಇದು ದೊಡ್ಡ ಪ್ರವಾಹವಾಗಿ ಒಂದು ಪ್ರಬುದ್ಧ ಭಾರತ ನಿರ್ಮಾಣ ಮಾಡುವುದಕ್ಕೆ ನಾವೆಲ್ಲರೂ ಪ್ರವಾಹದ ರೀತಿಯಲ್ಲಿ ಒಗ್ಗೂಡಿ ಭವಿಷ್ಯದ ಮುಂದಿನ ಪೀಳಿಗೆಗೆ ಯುವಜನತೆ ವಿಶೇಷವಾಗಿ ಹಣತೆ ಹಚ್ಚುವ ಮೂಲಕ ಬುದ್ಧ ಮತ್ತು ಧಮ್ಮಾ ದೀಪವನ್ನು ಅರ್ಥ ಮಾಡಿಕೊಳ್ಳಬೇಕು ಚಾಮರಾಜನಗರ ಭಾವೈಕ್ಯತೆ ಶಿಬಿರದಂತೆ ಇದೆ. ಅತಿ ಅಚ್ಚುಮೆಚ್ಚಿನ ಊರು ಇದಾಗಿದೆ ಎಂದರು.

ಜಿಲ್ಲಾಧ್ಯಕ್ಷ ಆರ್.ಬಸವರಾಜು ಮಾತನಾಡಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಉಮೇಶ್ ಕುದರ್, ಮಲ್ಲಿಕಾರ್ಜುನ ಸ್ವಾಮಿ, ರಾಮಸಮುದ್ರ ಪುಟ್ಟಸ್ವಾಮಿ, ನಾಗಶಿಲ್ಪ, ಜಿಲ್ಲಾ ಕಾರ್ಯದರ್ಶಿ ನಂಜುಂಡಯ್ಯ, ತಾಲೂಕು ಅಧ್ಯಕ್ಷ ಕೃಷ್ಣಯ್ಯ ಹಾಗೂ ಪದಾಧಿಕಾರಿಗಳು ಹಾಜರಿದ್ದರು.

ಒಳಮೀಸಲಾತಿ ವರದಿ ತಡೆಯಲು ಆಗ್ರಹ

ಚಾಮರಾಜನಗರ: ಒಳಮೀಸಲಾತಿ ಜಾರಿ ಸಂಬಂಧ ಬೆಂಗಳೂರಿನಲ್ಲಿ ಸಮುದಾಯದ ಮಠಾಧೀಶರ ನೇತೃತ್ವದಲ್ಲಿ ನಡೆದ ಬಲಗೈ ಜಾತಿ ಗಳ ಒಕ್ಕೂಟದ ಸಭೆಯಲ್ಲಿ ದಲಿತ ಸಮುದಾಯದ ಸಚಿವರು, ಮಾಜಿ ಸಚಿವರು, ಶಾಸಕರು ಒಟ್ಟಿಗೆ ಸೇರಿ ಸಮಾಲೋಚಿಸದಿರುವುದರಿಂದ ನಮ್ಮ ಸಮುದಾಯ 9ನೇ ಸ್ಥಾನಕ್ಕಿಳಿದಿದೆ ಎಂದು ಅಂಬೇಡ್ಕರ್ ಸಂಘಟನೆಗಳ ತಾಲೂಕು ಅಧ್ಯಕ್ಷ ಸಿ.ಕೆ.ಮಂಜುನಾಥ್ ಆರೋಪಿಸಿದರು.

ಶೋಷಿತ ಸಮುದಾಯಗಳು ಆಡಳಿತ ಚುಕ್ಕಾಣಿ ಹಿಡಿಯಬೇಕು ಎಂಬುದು ಅಂಬೇಡ್ಕರ್ ಅವರ ನಿಲುವು, ಒಳಮೀಸಲಾತಿ ಎಂಬುದೇ ಅವೈಜ್ಞಾನಿಕ, ನಮಗೆ ನಾವು ವಿಭಜನೆ ಮಾಡಿಕೊಂಡು, ವೈಷಮ್ಯ ಸೃಷ್ಟಿಸಿರುವ ಹಿರಿಯವಕೀಲರಾದ ಭಾಸ್ಕರ್ ಪ್ರಸಾದ್, ಅರುಣ್‌ಕುಮಾರ್ ಅಂಬೇಡ್ಕರ್ ವಾದಿಗಳೇ ಎಂದು ಪ್ರಶ್ನಿಸಿದರು. ರಾಜ್ಯ ಸರ್ಕಾರ ಘೋಷಣೆಮಾಡಿರುವ ಒಳಮೀಸಲಾತಿ ಅವೈಜ್ಞಾನಿಕವಾಗಿದ್ದು, ಇದನ್ನು ತಡೆಹಿಡಿಯಬೇಕು ಎಂದು ಆಗ್ರಹಿಸಿದರು.

ಗೋಷ್ಠಿಯಲ್ಲಿ ಕೂಡ್ಲೂರು ಶ್ರೀಧರಮೂರ್ತಿ, ಬಿವಿಎಸ್ ಜಿಲ್ಲಾಸಂಯೋಜಕ ಪರ್ವತ ರಾಜ್, ಕೃಷ್ಣರಾಜು, ಸೋಮಸುಂದರ್, ಬಿ.ಎಲ್.ಮಹದೇವಸ್ವಾಮಿ ಹಾಜರಿದ್ದರು.

ಇಂದು ದಸರಾ ಸ್ಕೇಟಿಂಗ್ ಪಂದ್ಯಾವಳಿ

ಮೈಸೂರು, ಸೆ. 22– ಮೈಸೂರು ಜಿಲ್ಲಾ ರೋಲರ್ ಸ್ಕೇಟಿಂಗ್ ಅಸೋಸಿಯೇಷನ್, ದಸರಾ ಕ್ರೀಡಾ ಉಪ ಸಮಿತಿ ಹಾಗೂ ಯುವಜನ ಮತ್ತು ಕ್ರೀಡಾ ಇಲಾಖೆ ಸಂಯುಕ್ತಾಶ್ರಯದಲ್ಲಿ ದಸರಾ ಮಹೋತ್ಸವದ ಪ್ರಯುಕ್ತ ಸೆ.23ರಂದು ರಾವ್ಸ್ ಇಂಟರ್‌ನ್ಯಾಷನಲ್ 200 ಮೀ. ಬ್ಯಾಂಕೆಡ್ ಟ್ರ್ಯಾಕ್ ದಸರಾ ಮುಕ್ತ ಸ್ಕೇಟಿಂಗ್ ಪಂದ್ಯಾವಳಿ ಆಯೋಜಿಸಲಾಗಿದೆ. ಪಂದ್ಯಾವಳಿಯಲ್ಲಿ ಮೈಸೂರಿನ ವಿವಿಧ ಕ್ಲಬ್‌ಗಳಿಂದ ವೃತ್ತಿಪರ ಮತ್ತು ವೇಗದ ಸ್ಕೇಟರ್‌ಗಳು ಸ್ಪೀಡ್ ಇನ್‌ಲೈನ್ ಮತ್ತು ಕ್ವಾಡ್ ಡಿವಿಷನ್ ವಿಭಾಗದಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. ಕೆಲವು ಸ್ಟಾರ್ ಐಸ್ ಸ್ಕೇಟರ್‌ಗಳಾದ ಶ್ರೀವತ್ಸ ಎಸ್.ರಾವ್, ಪ್ರತೀಕ್ಷಾ ಕೆ.ಎಸ್., ಆರ್ಯನ್ ಹೆಚ್.ರಾವ್ ಮತ್ತಿತರರು ಭಾಗವಹಿಸಲಿದ್ದಾರೆ. ಸ್ಟಾರ್ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಗಳಾದ ಶ್ರೀಜಾ ಎಸ್.ರಾವ್ ಮತ್ತು ಅರವ್ ಅವರು ಕೂಡ ಭಾಗವಹಿಸಲಿದ್ದಾರೆ.



ದಸರಾ ಕುಸ್ತಿ ಪಂದ್ಯಾವಳಿಗೆ ಚಾಲನೆ



ಕುಸ್ತಿಪಟುಗಳಿಗೆ ಬೆನ್ನು ತಟ್ಟಿ ದಸರಾ ಮಹೋತ್ಸವದ ಕುಸ್ತಿ ಪಂದ್ಯಾವಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

ಮೈಸೂರು,ಸೆ.22(ಜಿಎ)–ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಕುಸ್ತಿ ಪಂದ್ಯಾವಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕುಸ್ತಿಪಟುಗಳಿಗೆ ಬೆನ್ನು ತಟ್ಟುವ ಮೂಲಕ ಚಾಲನೆ ನೀಡಿದರು.

ಮೈಸೂರಿನ ಕರ್ನಾಟಕ ವಸ್ತುಪ್ರದರ್ಶನದ ಪ್ರಾಧಿಕಾರ ಆವರಣದಲ್ಲಿರುವ ಶ್ರೀ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಆಯೋಜಿಸಿರುವ ದಸರಾ ಕುಸ್ತಿ ಪಂದ್ಯಾವಳಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವೀಕ್ಷಿಸಿ ಕುಸ್ತಿಪಟುಗಳಿಗೆ ಪ್ರೋತ್ಸಾಹ ನೀಡಿದರು.

ಕುಸ್ತಿ ಉದ್ಘಾಟಿಸಲು ಮಧ್ಯಾಹ್ನ 3.30ಕ್ಕೆ ಆಗಮಿಸಬೇಕಿದ್ದ ಸಿದ್ದರಾಮಯ್ಯ ಅರ್ಧ ಗಂಟೆ ಮುಂಚಿತವಾಗಿಯೇ ವಸ್ತುಪ್ರದರ್ಶನ ಆವರಣದ ದೇವರಾಜ ಅರಸು ವಿವಿಧೋದ್ದೇಶ ಕುಸ್ತಿ ಅಖಾಡಕ್ಕೆ ಬಂದರು. ಎಂದಿನಂತೆ ವಿಶೇಷ ಹುರುಪಿನಲ್ಲಿ ವೇದಿಕೆಗೆ ಬಂದ ಅವರು ಕುಸ್ತಿಪಟುಗಳನ್ನು ಕಂಡು ಸಂತೋಷ ವ್ಯಕ್ತಪಡಿಸಿದರು.

ಹೆಚ್ಚು ಕಾಲಹರಣ ಮಾಡದೇ ಮಹದೇವಪುರದ ವಿಕಾಸ್ ಮತ್ತು ದಾವಣಗೆರೆಯ ಕಿರಣ್ ನಡುವಿನ ಮೊದಲ ಕುಸ್ತಿಯನ್ನು ಉದ್ಘಾಟಿಸಿದರು. ಬಳಿಕ ಮುಂದಿನ ಕಾರ್ಯಕ್ರಮಕ್ಕೆ ತೆರಳಲು ಮುಂದಾದಾಗ ಕುಸ್ತಿಪಟುಗಳ ನಡುವೆ ಉಂಟಾದ ಪೈಪೋಟಿ ಕಂಡು ಜಾಗ ಬಿಟ್ಟು ಕದಲದೇ ಕುಸ್ತಿ ವೀಕ್ಷಿಸಿದರು. ಆರಂಭದ ಹತ್ತು ನಿಮಿಷದವರೆಗೆ ಇಬ್ಬರು ಕುಸ್ತಿಪಟುಗಳ ನಡುವೆ ಸಮಬಲದ ಹೋರಾಟ ನಡೆಯಿತು. ನಂತರ ಮಹದೇವಪುರದ ವಿಕಾಸ್ ಎದುರಾಳಿ ಕಿರಣ್ ವಿರುದ್ಧ ನಿಯಂತ್ರಣ ಸಾಧಿಸಲು ಮುಂದಾದರು. ಪಟ್ಟಿಗೆ ಪ್ರತಿಪಟ್ಟು ನೀಡಿ ಕ್ರಮೇಣ ನಿಯಂತ್ರಣ ಸಾಧಿಸಲು ಆರಂಭಿಸಿದರು. ಎಲ್ಲರ ನಿರೀಕ್ಷೆಯಂತೆ 30 ನಿಮಿಷಗಳ ಕುಸ್ತಿಯಲ್ಲಿ ಅಂತಿಮವಾಗಿ ಸ್ಥಳೀಯ ಪ್ರತಿಭೆ ವಿಕಾಸ್ 27.59 ಸೆಕೆಂಡ್‌ನಲ್ಲಿ ಗೆಲುವು ಸಾಧಿಸಿದರು. ಈ ಗೆಲುವಿಗೆ ಸಿಎಂ ಕೂಡ ಸಾಕ್ಷಿಯಾಗಿ ಶಹಬಾಸ್‌ಗಿರಿ ನೀಡಿದರು.

ಬಳಿಕ ಗಾಣಿಗರಕೊಪ್ಪಲಿನ ನಂದಿನಿ ಮತ್ತು ಬೆಂಗಳೂರಿನ ಪುಷ್ಪಾ ನಡುವೆ ನಡೆದ ಕುಸ್ತಿ ಪಂದ್ಯಾವಳಿಯನ್ನು ವೀಕ್ಷಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಹಿಳೆಯರು ಕುಸ್ತಿ ಕ್ರೀಡೆಯಲ್ಲಿ ತೋರುತ್ತಿರುವ ಕೌಶಲವನ್ನು ಕಂಡು ಅಚ್ಚರಿ ವ್ಯಕ್ತಪಡಿಸಿದರು. ಅಲ್ಲದೇ ಈ ಕ್ರೀಡಾ ಬೆಳವಣಿಗೆಗೆ ಶ್ಲಾಘನೆ ವ್ಯಕ್ತಪಡಿಸಿದರು.

1.10 ಸೆಕೆಂಡ್‌ಗಳಲ್ಲಿ ಗಾಣಿಗರಕೊಪ್ಪಲಿನ ನಂದಿನಿ ಅವರು ಬೆಂಗಳೂರಿನ ಪುಷ್ಪಾ ಅವರ ವಿರುದ್ಧ ಜಯಿಸಿದರು. ಮಹಿಳೆಯರ ಈ ಕ್ರೀಡಾ ಸಾಧನೆಗೆ ಸ್ವತಃ ಸಿಎಂ ಸಾಕ್ಷಿಯಾಗಿ ವಿಜೇತರನ್ನು ಬೆನ್ನು ತಟ್ಟಿದ್ದು ವಿಶೇಷವಾಗಿತ್ತು. ಕಾರ್ಯಕ್ರಮದಲ್ಲಿ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಚಾಮರಾಜನಗರ ಸಂಸದ ಸುನೀಲ್ ಬೋಸ್, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಡಿ.ರವಿಶಂಕರ್, ಟಿ.ಎಸ್.ಶ್ರೀವತ್ಸ, ಅನಿಲ್ ಚಿಕ್ಕಮಾದು, ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಗ್ಯಾರಂಟಿ ಯೋಜನೆ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರ ನಾಥ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಕುಸ್ತಿಪಟುಗಳ ರಣರೋಚಕ ಕಾಳಗ

ಕಂಗೊಳಿಸಿದ ಚಾಮುಂಡೇಶ್ವರಿ

ಬಾನು ಮುಷ್ತಾಕ್‌ಗೆ ಭಾರಿ ಭದ್ರತೆ

ಮೈಸೂರು, ಸೆ.22(ಬಿಎಲ್‌ಯು)– ಚಾಮುಂಡಿಬೆಟ್ಟದಲ್ಲಿ ನಡೆದ ದಸರಾ ಉದ್ಘಾಟನಾ ಸಮಾರಂಭದ ವೇದಿಕೆಯಲ್ಲಿ ಬೆಳ್ಳಿ ರಥದಲ್ಲಿ ಪ್ರತಿಷ್ಠಾಪನೆಗೊಂಡಿದ್ದ ನಾಡದೇವತೆ ತಾಯಿ ಚಾಮುಂಡೇಶ್ವರಿಯನ್ನು ಚಿನ್ನಾಭರಣಗಳಿಂದ ಅಲಂಕರಿಸಲಾಗಿದ್ದು, ದೇವಿಯ ವೈಭವ ನೋಡಲು ಎರಡು ಕಣ್ಣು ಸಾಲದಾಯಿತು. ವಿವಿಧ ಹೂವಿನಿಂದ ಬೆಳ್ಳಿ ರಥವನ್ನು ಸಿಂಗರಿಸಲಾಗಿತ್ತು. ಚಾಮುಡೇಶ್ವರಿ ಉತ್ಸವ ಮೂರ್ತಿಗೆ ಕೆಂಪು ಮತ್ತು ಹಳದಿ ಮಿಶ್ರಿತ ಝರಿಯುಳ್ಳ ನೀಲಿ ಸೀರೆಯಿಂದ ಅಲಂಕರಿಸಲಾಗಿತ್ತು.

ದಸರಾ ಉದ್ಘಾಟನೆಗೆ ಬಿಜೆಪಿ ಹಾಗೂ ಸಂಘ ಪರಿವಾರದವರು ತೀವ್ರ ವಿರೋಧ ವ್ಯಕ್ತಪಡಿಸಿದ್ದ ಕಾರಣ ಬಾನು ಮುಷ್ತಾಕ್ ಅವರಿಗೆ ಬಿಗಿ ಪೊಲೀಸ್ ಭದ್ರತೆ ಕಲ್ಪಿಸಲಾಗಿತ್ತು.

ನಗರದ ರ‍್ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಕುಟುಂಬದವರ ಜೊತೆ ವಾಸ್ತವ್ಯ ಹೂಡಿದ್ದ ಬಾನು ಮುಷ್ತಾಕ್ ಅವರು ಚಾಮುಂಡಿಬೆಟ್ಟಕ್ಕೆ ಹೋಗುವ ಸಂದರ್ಭದಲ್ಲಿ ಪೊಲೀಸ್ ಎಸ್ಕಾರ್ಟ್ ನೀಡಲಾಗಿತ್ತು. ಅಪರಿಚಿತರು ಅವರ ಬಳಿ ಸುಳಿಯಂತೆ ಪೊಲೀಸರು ಭದ್ರತೆ ನೀಡಿದ್ದರು.

ದಸರಾ ಉದ್ಘಾಟನೆ ನಂತರ ಮಾತನಾಡಿದ ಬಾನು ಮುಷ್ತಾಕ್ ಅವರು, ನಾನು ಈ ಮೊದಲು ಹಲವು ಕಾರ್ಯಕ್ರಮಗಳಲ್ಲಿ ಮಂಗಳಾರತಿ ಪಡೆದಿದ್ದೇನೆ. ದೇವರಿಗೆ ಪುಷ್ಪಾರ್ಚನೆ ಮಾಡಿದ್ದೇನೆ. ಈ ಎಲ್ಲಾ ವಿಚಾರದ ಬಗ್ಗೆ ನಾನು ಬರೆದಿರುವ ಆತ್ಮಕಥನದಲ್ಲಿ ವಿವರಣೆ ನೀಡುವೆ ಎಂದು ತಿಳಿಸಿದರು.

ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಹೆಚ್.ಮುನಿಯಪ್ಪ ಅವರಂತೂ ಭಕ್ತಿಯಲ್ಲಿ ಮಿಂದೆದ್ದರು. ದೇವಾಲಯದ ಪ್ರವೇಶ ದ್ವಾರದಲ್ಲಿರುವ ಚಾಮುಂಡೇಶ್ವರಿ ಪಾದ ಮುಟ್ಟಿ ನಮಸ್ಕರಿಸಿದ ಮುನಿಯಪ್ಪ ಪ್ರದಕ್ಷಿಣೆ ಮಾಡಿ ಅಡ್ಡ ನಮಸ್ಕಾರ ಹಾಕಿದರು.

ಕೆಲವು ಕಾಂಗ್ರೆಸ್ ಮುಖಂಡರು ತಮ್ಮ ಪ್ರಭಾವ ಬಳಸಿ, ವೇದಿಕೆ ಬಳಿ ಆಗಮಿಸಿದರು. ಆದರೆ ಮುಂದೆ ಹೋಗಲು ಪೊಲೀಸರು ಅಡ್ಡಗಟ್ಟಿದ್ದರಿಂದ ಪೊಲೀಸರೊಂದಿಗೆ ಮಾತಿನ ಚಕಮಕಿ ನಡೆಯಿತು.

ದಸರಾ ಉದ್ಘಾಟನಾ ಕಾರ್ಯಕ್ರಮದಲ್ಲಿ ಕಲಾವಿದರು ಗೊರವರ ಕುಣಿತ, ಕಂಸಾಳೆ ಸೇರಿದಂತೆ ಇತರೆ ಜಾನಪದ ನೃತ್ಯಗಳ ಪ್ರದರ್ಶನ ನೀಡಿದರು. ಆ ವೇಳೆ ಸಿದ್ದರಾಮಯ್ಯ ಅವರು ಜಾನಪದ ಕಲಾವಿದರ ಜೊತೆ ಕಂಸಾಳೆಗೆ ಸಾಂಕೇತಿಕವಾಗಿ ಕೆಲ ಕ್ಷಣ ಹೆಜ್ಜೆ ಹಾಕಿದರು.





ಪೊಲೀಸರೊಂದಿಗೆ ಸಾರ್ವಜನಿಕರ ಮಾತಿನ ಚಕಮಕಿ

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಸೆ.22– ಹುರ ಶಾಖಾ ವ್ಯಾಪ್ತಿಯಲ್ಲಿ ಬರುವ ಹಂಚೀಪುರ ಎನ್.ಜೆ.ವೈ ನಿರ್ವಹಣೆ ಕಾಮಗಾರಿ ನಿಮಿತ್ತ ಸೆ.23 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಹುರ ವಿದ್ಯುತ್ ವಿತರಣಾ ಕೇಂದ್ರ ಹುರ, ಹಲ್ಲರೆ, ಮಲ್ಕುಂಡಿ, ಅಂಬಳೆ, ಹಂಚಿಪುರ, ಚನ್ನಪಟ್ಟಣ, ಸಿದ್ದೇಗೌಡನಹುಂಡಿ, ಮಲ್ಲಹಳ್ಳಿ, ಕೊಲ್ಲೂಪುರ, ನಾಗಣಾಪುರ, ಬಳ್ಳೂರುಹುಂಡಿ, ಕೊತ್ತನಹಳ್ಳಿ, ರಾಜನಗರ, ಬೀರದೇವನಪುರ, ಬೋಗವಾಳು ಬಡೆಯನಪುರ, ಎಂ.ಕೊಂಗಳ್ಳಿ ಕಗ್ಗಲೂರು, ಯಡಹಳ್ಳಿ ಗ್ರಾಮಗಳು ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಲಿಂಗಾಂಬುದಿ ಕೆರೆಯ ಪುಷ್ಪಮೇಳದಲ್ಲಿ 'ಬೇಡರ ಕಣ್ಣಪ್ಪ' ಆಕರ್ಷಣೆ





ಲಿಂಗಾಂಬುದಿ ಪಾರ್ಕ್‌ನಲ್ಲಿನ ಬೊಟಾನಿಕಲ್ ಗಾರ್ಡನ್‌ನಲ್ಲಿ ಆರಂಭವಾಗಿರುವ ಪುಷ್ಪ ಮೇಳ ವೀಕ್ಷಿಸುತ್ತಿರುವ ಸಾರ್ವಜನಿಕರು. ಮತ್ತೊಂದು ಚಿತ್ರದಲ್ಲಿ ಪುಷ್ಪಮೇಳದಲ್ಲಿ ನಿರ್ಮಿಸಿರುವ ಜನಾಕರ್ಷಣೀಯ ಬೇಡರಕಣ್ಣಪ್ಪ ಆಕೃತಿಯನ್ನು ಕಾಣಬಹುದು

ಮೈಸೂರು,ಸೆ.22(ಎಂಟಿವೈ)– ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಲಿಂಗಾಂಬುದಿ ಕೆರೆಯ ಬೊಟಾನಿಕಲ್ ಗಾರ್ಡನ್‌ನಲ್ಲಿ ಆಯೋಜಿಸಿರುವ ಪುಷ್ಪ ಮೇಳದಲ್ಲಿ ಸಾವಿರಾರು ಹೂಗಳಿಂದ ತಲೆ ಎತ್ತಿರುವ 'ಬೇಡರ ಕಣ್ಣಪ್ಪ' ನೋಡುಗರ ಮನಸೂರೆಗೊಳ್ಳುತ್ತಿದೆ.

ಈ ಬಾರಿ ದಸರಾ ಮಹೋತ್ಸವದಲ್ಲಿ ಕುಪ್ಪಣ್ಣ ಪಾರ್ಕ್‌ನಲ್ಲಿ ಆಯೋಜಿಸಿರುವಂತೆ ಲಿಂಗಾಂಬುದಿ ಕೆರೆಯ ಬೊಟಾನಿಕಲ್ ಗಾರ್ಡನ್‌ನಲ್ಲೂ ಪುಷ್ಪಮೇಳ ಆಯೋಜಿಸಲಾಗಿದ್ದು, ಸುಮಾರು 35 ಬಗೆಯ ಹೂವಿನ ಗಿಡಗಳನ್ನು 40 ಸಾವಿರ ಪಾಟ್‌ಗಳಲ್ಲಿ ಬೆಳೆಸಲಾಗಿದ್ದು, ಉದ್ಯಾನವನದ ವಿವಿಧೆಡೆ ಆಕರ್ಷಣೀಯ ವಿನ್ಯಾಸದಲ್ಲಿ ಜೋಡಣೆ ಮಾಡಲಾಗಿದೆ.

ಪುಷ್ಪಮೇಳದಲ್ಲಿ ಬೇಡರ ಕಣ್ಣಪ್ಪ ಆಕೃತಿ ಪ್ರತಿಷ್ಠಾಪಿಸಿ, ಅದಕ್ಕೆ ಹೂವಿನಿಂದಲೇ ಮಂಟಪ ನಿರ್ಮಿಸಲಾಗಿದೆ. ಇದು ನೋಡುಗರ ಮನಸೂರೆಗೊಳ್ಳುತ್ತಿದೆ. ಇದೇ ಮೊದಲ ಬಾರಿಗೆ ನಿರ್ಮಿಸಿರುವ ಸಂಗೀತ ಕಾರಂಜಿಯೂ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ನೀರಿನ ಕಾರಂಜಿಯ ನೃತ್ಯದ ನಾನಾ ಭಂಗಿ ಮಕ್ಕಳಿಗೆ ಮುದ ನೀಡುತ್ತಿದೆ.

ಇಂದಿನಿಂದ ಆರಂಭವಾಗಿರುವ ಬೊಟಾನಿಕಲ್ ಗಾರ್ಡನ್‌ನಲ್ಲಿನ ಪುಷ್ಪ ಮೇಳ ಅ.2ರವರೆಗೆ ಬೆಳಗ್ಗೆ 9ರಿಂದ ರಾತ್ರಿ 9 ಗಂಟೆವರೆಗೆ ವೀಕ್ಷಣೆಗೆ ಅವಕಾಶ ನೀಡಲಾಗಿದೆ. ವಯಸ್ಕರಿಗೆ 60 ರೂ., ಮಕ್ಕಳಿಗೆ 30 ರೂ. ಪ್ರವೇಶ ಶುಲ್ಕ ನಿಗದಿ ಮಾಡಲಾಗಿದೆ. ಪ್ರಾಣಿ, ಪಕ್ಷಿಗಳ ಆಕೃತಿಯುಳ್ಳ ಟೋಪಿಯರಿ ಉದ್ಯಾನವನ, ನೈಸರ್ಗಿಕವಾಗಿ ಬೊಂಬು, ಬಿದಿರು ಉದ್ಯಾನ, ಚಿಟ್ಟೆ ಪಾರ್ಕ್, ಔಷಧೀಯ ಸಸ್ಯವುಳ್ಳ ಪಾರ್ಕ್, ಗುಲಾಬಿ ಪಾರ್ಕ್ ಸೇರಿದಂತೆ ಇನ್ನಿತರ ಕಿರು ಉದ್ಯಾನಗಳು ಪ್ರವಾಸಿಗರಿಗೆ ಮುದ ನೀಡುತ್ತಿವೆ.



ಪುಷ್ಪಮೇಳದಲ್ಲಿ ನೃತ್ಯ ಕಾರಂಜಿ ವೀಕ್ಷಿಸುತ್ತಿರುವ ಕುತೂಹಲಿಗಳು.

ಕಾವಾದಲ್ಲಿ ಸಾಂಪ್ರದಾಯಿಕ ಚಿತ್ರಕಲೆ ಪ್ರದರ್ಶನ ಉದ್ಘಾಟನೆ

ಸಂಸ್ಥೆಯಲ್ಲಿ ಖಾಲಿ ಇರುವ 43 ಹುದ್ದೆಗಳ ಭರ್ತಿಗೆ ಕ್ರಮ ; ಸಚಿವ ಶಿವರಾಜ್ ತಂಗಡಗಿ ಭರವಸೆ

ಮೈಸೂರು,ಸೆ.22(ಪಿಎಂ)– ಮೈಸೂರು ಶೈಲಿಯ ಸಾಂಪ್ರದಾಯಿಕ ಚಿತ್ರಕಲೆಗಳ ವೈವಿಧ್ಯಮಯ ನೋಟದೊಂದಿಗೆ ಸಾಮಾಜಿಕ ಸಂದೇಶ ಸಾರುವ ಅನೇಕ ಕಲಾಕೃತಿಗಳ ಒಳಗೊಂಡಂತೆ ಬಗೆಬಗೆಯ ಕಲಾ ಪ್ರದರ್ಶನಕ್ಕೆ ಸೋಮವಾರ ಚಾಲನೆ ದೊರೆಯಿತು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು (ಕಾವಾ) ಆವರಣದಲ್ಲಿ ಲಲಿತಕಲೆ ಮತ್ತು ಕರಕುಶಲ ಕಲೆ ಉಪಸಮಿತಿ ವತಿಯಿಂದ ಹಮ್ಮಿಕೊಂಡಿರುವ ಇಂತಹ ಮನಮೋಹಕ ಪ್ರದರ್ಶನಕ್ಕೆ ಕನ್ನಡ ಮತ್ತು ಸಂಸ್ಕೃತಿ ಸಚಿವ ತಂಗಡಗಿ ಶಿವರಾಜ ಸಂಗಪ್ಪ (ಶಿವರಾಜ್ ತಂಗಡಗಿ)ಚಾಲನೆ ನೀಡಿದರು.

ತೊಗಲು ಗೊಂಬೆ ಭಿತ್ತಿ ಚಿತ್ರಕಲಾ ಶಿಬಿರಕ್ಕೂ ಚಾಲನೆ ನೀಡಿ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧೀನದ ಕಾವಾ, ರಾಜ್ಯದಲ್ಲಿ ಅತ್ಯಂತ ಹೆಸರು ಮಾಡಿದ ಸಂಸ್ಥೆ. ಇಲ್ಲಿ ಬೋಧಕ–ಬೋಧಕೇತರು ಸೇರಿದಂತೆ 43 ಹೆಚ್ಚು ಹುದ್ದೆಗಳು ಖಾಲಿ ಇವೆ. 59 ಮಂಜೂರಾದ ಹುದ್ದೆಗಳಲ್ಲಿ 16 ಹುದ್ದೆಗಳು ಮಾತ್ರ ಭರ್ತಿಯಾಗಿವೆ. ಒಳಮೀಸಲಾತಿ ಕಾರಣ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿರಲಿಲ್ಲ. ಮುಂದಿನ ದಿನಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಜೊತೆಗೆ ಈ ಸಂಸ್ಥೆಗೆ ಕಾಯಕಲ್ಪ ನೀಡಲಾಗುವುದು ಎಂದು ತಿಳಿಸಿದರು.

ಕಾವಾಗೆ ಕಾಯಕಲ್ಪ ನೀಡುವ ಸಂಬಂಧ ಈಗಾಗಲೇ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಇಲ್ಲಿ ಕಲಾ ಗ್ಯಾಲರಿ ನಿರ್ಮಿಸಬೇಕೆಂದೂ ಮನವಿ ಮಾಡಿದ್ದು, ಈ ಬಗ್ಗೆಯೂ ಚರ್ಚೆ ಮಾಡುತ್ತೇನೆ. ಇಲ್ಲಿ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಬೇಕೆಂದು ಶಾಸಕ ತನ್ವೀರ್ ಸೇಠ್ ಇದೀಗ ಹೇಳಿದರು. ಆದರೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸುವುದು ಸರಳ ಕೆಲಸವಲ್ಲ. ಆದಾಗ್ಯೂ ಈ ಬಗ್ಗೆಯೂ ವಿಚಾರ ಮಾಡಲಾಗುವುದು. ಆದರೆ ನಮ್ಮ ಸರ್ಕಾರದಿಂದ ಈ ಸಂಸ್ಥೆ ಬೆಳವಣಿಗೆಗೆ ಸಾಧ್ಯವಿರುವ ಎಲ್ಲವನ್ನೂ ಮಾಡಲಾಗುವುದು ಎಂದು ಭರವಸೆ ನೀಡಿದರು.

ವಿವಿ ಮಾನ್ಯತೆ ನೀಡಿ: ಇದಕ್ಕೂ ಮುನ್ನ ಮಾತನಾಡಿದ ಶಾಸಕ ತನ್ವೀರ್ ಸೇಠ್, ಕಾವಾಗೆ ಹಾಸ್ಟೆಲ್ ಸೌಲಭ್ಯ ಕಲ್ಪಿಸಬೇಕು. ಜೊತೆಗೆ ಈ ಸಂಸ್ಥೆಗೆ ವಿಶ್ವವಿದ್ಯಾನಿಲಯದ ಸ್ಥಾನಮಾನ ಒದಗಿಸಬೇಕು. ದಸರಾ ಸೇರಿದಂತೆ ಸರ್ಕಾರದ ಕಾರ್ಯಕ್ರಮಗಳಲ್ಲಿ ನೀಡುವ ಸ್ಮರಣಿಕೆಗಳನ್ನು ಈ ಸಂಸ್ಥೆ ಮೂಲಕವೇ ತಯಾರು ಮಾಡುವಂತಹ ವ್ಯವಸ್ಥೆ ಮುಂದಿನ ದಿನಗಳಲ್ಲಿ ಆಗಲು ಕ್ರಮ ವಹಿಸಬೇಕೆಂದು ಸಚಿವರಲ್ಲಿ ಮನವಿ ಮಾಡಿದರು.

ಕಲೆಯಲ್ಲಿ ಸಾಮಾಜಿಕ ಸಂದೇಶ: ಮೈಸೂರು ಶೈಲಿಯ ಸಾಂಪ್ರದಾಯಿಕ ಚಿತ್ರಕಲೆಯಲ್ಲಿ ಕಲಾವಿದರಿಂದ ಮೂಡಿಬಂದಿರುವ ದೇವಾನುದೇವತೆಗಳ ಚಿತ್ರಗಳು ಗಮನ ಸೆಳೆದವು. ಅಲ್ಲದೆ, ಮೊಬೈಲ್ ಹಾಗೂ ಸಾಮಾಜಿಕ ಮಾಧ್ಯಮಗಳಿಂದ ಉಂಟಾಗುವ ದುಷ್ಪರಿಣಾಮ ಕುರಿತು ಎಚ್ಚರಿಸುವಂತೆ ಸಿದ್ಧಪಡಿಸಿರುವ ಕಲಾಕೃತಿಗಳು ಗಮನ ಸೆಳೆದವು. ಮಗುವೊಂದು ಮಲಗಿ ಮೊಬೈಲ್ ನೋಡುವಂತೆ ಥರ್ಮೋಕೋಲ್‌ನಲ್ಲಿ ಸಿದ್ಧಪಡಿಸಿರುವ ಕಲಾಕೃತಿಯು ಮೊಬೈಲ್‌ನಿಂದ ಮಕ್ಕಳ ಮೇಲೆ ಉಂಟಾಗುವ ದುಷ್ಪರಿಣಾಮ ಅನಾವರಣಗೊಳಿಸುತ್ತಿದೆ. ಸಾಮಾಜಿಕ ಮಾಧ್ಯಮಗಳ ಅತಿಯಾದ ಬಳಕೆಯಿಂದ ಮಾನವ ಎದುರಿಸುವ ಸಮಸ್ಯೆಗಳನ್ನು ಮತ್ತೊಂದು ಕಲಾಕೃತಿಯಲ್ಲಿ ಮೂಡಿಸಿರುವುದು ಗಮನ ಸೆಳೆದವು.

ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ, ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸ.ಕುಮಾರ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ಎಂ.ಸಿ.ರಮೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಡಾ.ಎಂ.ವಿ. ವೆಂಕಟೇಶ್, ನಿರ್ದೇಶಕಿ ಕೆ.ಎಂ.ಗಾಯತ್ರಿ, ಉಪಸಮಿತಿ ಉಪ ವಿಶೇಷಾಧಿಕಾರಿ ಎ.ದೇವರಾಜು, ಕಾರ್ಯಾಧ್ಯಕ್ಷೆ ನಿರ್ಮಲಾ ಎಸ್.ಮಠಪತಿ ಮತ್ತಿತರರು ಹಾಜರಿದ್ದರು.



ಮೈಸೂರಿನ ಕಾವಾದಲ್ಲಿ ಸೋಮವಾರ ಮೈಸೂರು ಶೈಲಿಯ ಸಾಂಪ್ರದಾಯಿಕ ಚಿತ್ರಕಲೆಗಳ ಪ್ರದರ್ಶನಕ್ಕೆ ಸಚಿವ ಶಿವರಾಜ್ ತಂಗಡಗಿ ಚಾಲನೆ ನೀಡಿದರು.





ಮಕ್ಕಳು ಮೊಬೈಲ್ ಗೀಳಿಗೆ ಒಳಗಾಗಿ ಸಮಸ್ಯೆಗೆ ಸಿಲುಕುವ ಬಗ್ಗೆ ಜಾಗೃತಿ ಮೂಡಿಸಲು ಸಿದ್ಧಪಡಿಸಿರುವ ಕಲಾಕೃತಿ.



ಚಿತ್ತಾರದಲ್ಲಿ ಗಣೇಶನ ವೈವಿಧ್ಯತೆ

ಕೇಂದ್ರ, ರಾಜ್ಯ ಸರ್ಕಾರದ ಕಾರ್ಯಕ್ರಮಗಳ ಜಾರಿಗೆ ಬದ್ಧ

ಸಂಘದ ಯಶಸ್ಸಿಗೆ ಸದಸ್ಯರು, ನಿರ್ದೇಶಕರ ಶ್ರಮವೇ ಕಾರಣ: ಯಾಚೇನಹಳ್ಳಿ ಪಿಎಸಿಎಸ್ ಅಧ್ಯಕ್ಷ ವೈ.ಎನ್.ಶಂಕರೇಗೌಡ

ತಿ.ನರಸೀಪುರ, ಸೆ.22– ಕೇಂದ್ರ ಮತ್ತು ರಾಜ್ಯ ಸರ್ಕಾರದ ಯಾವುದೇ ಕಾರ್ಯಕ್ರಮಗಳನ್ನು ತಕ್ಷಣ ಜಾರಿಗೆ ತರುವ ಚುರುಕಾದ ಆಡಳಿತ ಮಂಡಳಿ ನಮ್ಮದಾಗಿದ್ದು, ಯಾವುದೇ ಅನುದಾನ ಕೊಟ್ಟರೂ ಅದನ್ನು ಪ್ರಾರಂಭದಲ್ಲೇ ಜಾರಿಗೊಳಿಸುವ ಕೆಲಸಕ್ಕೆ ಬದ್ಧರಾಗಿದ್ದೇವೆ ಎಂದು ಯಾಚೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವೈ.ಎನ್.ಶಂಕರೇಗೌಡ ತಿಳಿಸಿದರು.

ತಾಲೂಕಿನ ಯಾಚೇನಹಳ್ಳಿ ಪಿಎಸಿಎಸ್ ಆವರಣದಲ್ಲಿ ಸೋಮವಾರ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಳೆದ 15 ವರ್ಷಗಳ ಹಿಂದೆ ಕೇವಲ 35 ಲಕ್ಷದಿಂದ ಆರಂಭವಾದ ಸಂಘ ಇಂದು 8 ಕೋಟಿ ರೂ.ಗಳ ವ್ಯವಹಾರ ನಡೆಸುತ್ತಿರುವುದಕ್ಕೆ ಸಂಘದ ಸದಸ್ಯರು ಹಾಗೂ ಆಡಳಿತ ಮಂಡಳಿ ನಿರ್ದೇಶಕರ ಪರಿಶ್ರಮವೇ ಕಾರಣ. ಷೇರುದಾರರ ಸಹಕಾರವಿಲ್ಲದಿದ್ದರೆ ಈ ಮಟ್ಟಿಗೆ ಸಂಸ್ಥೆ ಕಟ್ಟಲು ಸಾಧ್ಯವಾಗುತ್ತಿರಲಿಲ್ಲ. ಸಾಲ ಸಿಕ್ಕರೆ ಸಾಕು ಪಲಾಯನ ಮಾಡುವ ಮನಸ್ಥಿತಿ ಇರುವವರ ನಡುವೆ ಕಳೆದ 15 ವರ್ಷಗಳಿಂದ ಶೇ.100ರಷ್ಟು ಸಕಾಲಕ್ಕೆ ಸಾಲ ಮರುಪಾವತಿಯಾಗುತ್ತಿದೆ. ಸಂಘ ಶಿಸ್ತಿನಿಂದ ನಡೆದುಕೊಂಡು ಬರುತ್ತಿದ್ದು, ಕಳೆದ 4 ಚುನಾವಣೆಯಲ್ಲಿ ನಮ್ಮನ್ನು


ಸಭೆಯಲ್ಲಿ ರಾಜ್ಯ ಸಹಕಾರ ಮಹಾ ಮಂಡಲದ ನಿರ್ದೇಶಕ ಜಯರಾಮು ಅವರನ್ನು ಸನ್ಮಾನಿಸಲಾಯಿತು.

ಬೆಂಬಲಿಸುತ್ತಾ ಬಂದಿರುವ ನಿಮ್ಮ ಗೌರವವನ್ನು ನಾವು ಉಳಿಸಿದ್ದೇವೆ ಎಂದು ಭಾವಿಸಿದ್ದೇನೆ ಎಂದರು.

ಬಹಳಷ್ಟು ಸಂಘಗಳು ಕೇವಲ ಕೃಷಿ ಸಾಲಕ್ಕೆ ಸೀಮಿತವಾಗಿರುತ್ತವೆ. ಆದರೆ ನಾವು ಹಳ್ಳಿ ಜನಕ್ಕೆ ಎಲ್ಲಾ ರೀತಿಯ ಮೂಲ ಸೌಕರ್ಯ ಕಲ್ಪಿಸಿದರೇ ಅವರು ಹೋಬಳಿ, ತಾಲೂಕು, ಜಿಲ್ಲೆಗಳಿಗೆ ಹೋಗದೇ ಎಲ್ಲಾ ಸಂಪನ್ಮೂಲಗಳನ್ನು ಇಲ್ಲೇ ಪಡೆದುಕೊಳ್ಳುತ್ತಾರೆ ಎಂಬ ಆಶಯದೊಂದಿಗೆ ನಮ್ಮ ಸಹಕಾರ ಸಂಘ ಜನೌಷಧ, ನಂದಿನಿ ಕೇಂದ್ರ, ನೀರಿನ ಕೇಂದ್ರ, ಶವ ಸಾಗಿಸುವ ವಾಹನ, ಫರ್ಟಿಲೈಸರ್ಸ್ ಸೇರಿದಂತೆ 15ಕ್ಕೂ ಹೆಚ್ಚು ಚಟುವಟಿಕೆ ಆರಂಭಿಸಿದೆ. ಇಲ್ಲಿವರೆಗೂ ಗಮನ ಹರಿಸದ ಇತ್ತೀಚೆಗೆ ಕೇಂದ್ರ ಸರ್ಕಾರ ಸಹಕಾರ ಕ್ಷೇತ್ರದತ್ತ ದಾಪುಗಾಲಿಡುತ್ತಿದೆ. ನಮ್ಮ ಯಾಚೇನಹಳ್ಳಿ ಸಹಕಾರ ಸಂಘದಲ್ಲಿ ಮಾಡುತ್ತಿರುವ ಚಟುವಟಿಕೆಗಳು ಎಲ್ಲಾ ಸಂಘಗಳಲ್ಲೂ ನಡೆಯಬೇಕು. ಒಂದೇ ಸೂರಿನಡಿ ಹಲವು ಸೌಲಭ್ಯ ಸಿಗಬೇಕೆಂಬ ಹಿನ್ನೆಲೆಯಲ್ಲಿ ಸಹಕಾರ ಕ್ಷೇತ್ರ ಪರಿಣಾಮಕಾರಿಯಾಗಿ ಬೆಳೆಯುತ್ತಿದೆ ಎಂದರು.

ಸಹಕಾರ ನೀಡಿ: ಗ್ರಾಮದ ಸಹಕಾರ ಸಂಘ ಜಿಲ್ಲೆಗೆ ಮೊದಲ ಸ್ಥಾನದಲ್ಲಿದ್ದು, ಅಪೆಕ್ಸ್ ಬ್ಯಾಂಕ್ ಪ್ರಶಸ್ತಿ ನೀಡಿ ಗೌರವಿಸಿದೆ. ಆದರೆ ನಮ್ಮ ಸಂಘ ರಾಜ್ಯದಲ್ಲಿಯೇ ಮಾದರಿ ಸಂಘ ಎಂಬ ಹಿರಿಮೆ ಪಡೆಯುವ ನಿಟ್ಟಿನಲ್ಲಿ ಕೆಲಸ ಮಾಡಬೇಕು.ಇದಕ್ಕೆ ಎಲ್ಲರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಸಂಘದ ಸಿಇಓ ವೈ.ಕೆ.ಕ್ಯಾತೇಗೌಡ ವಾರ್ಷಿಕ ವರದಿ ಮಂಡಿಸಿ ಮಾತನಾಡಿ, ಸರ್ವ ಸದಸ್ಯರ ಸಹಕಾರದಿಂದ ಪ್ರಸಕ್ತ ಸಾಲಿನಲ್ಲಿ ಸಂಘವು 15,37,244 ರೂ. ನಿವ್ವಳ ಲಾಭಗಳಿಸಿದೆ. ಸಂಘವು ರೈತರಿಗೆ 7.20 ಕೋಟಿ ರೂ. ಸಾಲ ವಿತರಣೆ ಮಾಡಿದ್ದು, 6,94,86,000 ರೂ.ಗಳ ಸಾಲ ವಸೂಲಿ ಮಾಡಿದೆ ಎಂದರು.

ಸಂಘಕ್ಕೆ 10 ಲಕ್ಷ ರೂ. ಅನುದಾನ ಕೊಡಿಸಲು ಸಹಕರಿಸಿದ ರಾಜ್ಯ ಸಹಕಾರ ಮಾರಾಟ ಮಹಾಮಂಡಲದ ನಿರ್ದೇಶಕ ಜಯರಾಮು ಹಾಗೂ ಯಾಚೇನಹಳ್ಳಿ ಗ್ರಂಥಾಲಯಕ್ಕೆ 30 ಸಾವಿರ ಮೌಲ್ಯದ ಪುಸ್ತಕಗಳನ್ನು ನೀಡಿದ ಪ್ರೀತಮ್ ಅವರನ್ನು ಗೌರವಿಸಲಾಯಿತು. ಎಸ್ಎಸ್ಎಲ್ಸಿ, ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಿ ಸನ್ಮಾನಿಸಲಾಯಿತು.

ಬನ್ನೂರು ಹೋಬಳಿ ಘಟಕದ ಕಸಾಪ ಅಧ್ಯಕ್ಷ ವೈ.ಎ.ಪುಟ್ಟರಾಜು, ಸಂಘದ ಉಪಾಧ್ಯಕ್ಷ ವೈ.ಎಂ.ಚಂದ್ರು, ನಿರ್ದೇಶಕರಾದ ವೈ.ಕೆ.ಬೋರೇಗೌಡ, ವೈ.ಹೆಚ್.ಹನುಂತೇಗೌಡ, ವೈ.ಜಿ.ಮಹೇಂದ್ರ, ಹೆಚ್.ಬಿ.ಪ್ರತಿಭಾ ಮಲ್ಲೇಶ್, ಕೆಂಪಮ್ಮ ಸಿದ್ದೇಗೌಡ, ರಾಜು, ವೈ.ಎಂ.ನಾಗೇಂದ್ರ, ದುರ್ಗೇಶ, ವೈ.ಎಸ್.ಶಿವರಾಮು, ಗ್ರಾಪಂ ಸದಸ್ಯ ಶೇಖರ್, ಸಿಬ್ಬಂದಿ ವರ್ಗದ ಮಹದೇವು, ದಿಲೀಪ್, ನವೀನ್ ಕುಮಾರ್, ಶ್ವೇತಾ, ಮೇಘ, ಪಿ.ಲಕ್ಷ್ಮಿ, ನಂಜೇಗೌಡ, ಗೀತಾ ಸೇರಿದಂತೆ ಇತರರಿದ್ದರು.

ಸಾಲ ವಿತರಣೆಯಲ್ಲಿ ಜಿಲ್ಲೆಗೆ ಮೊದಲು

ಸಾಲದ ಮೇಲಿನ ಬಡ್ಡಿ ದರ ಶೇ.7 ರಷ್ಟಿದ್ದಾಗ ಅಧಿಕಾರಕ್ಕೆ ಬಂದ ನಾವು ಈಗ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುತ್ತಿದ್ದೇವೆ. ನಾವು ರೈತರಿಗೆ 5.5 ಕೋಟಿ ರೂ. ಬೆಳೆ ಸಾಲ ನೀಡಿದ್ದು, 309 ಮಂದಿಗೆ ಪಶು ಸಂಗೋಪನಾ ಸಾಲ ನೀಡಿದ್ದೇವೆ. ಆ ಮೂಲಕ ಸಾಲ ವಿತರಣೆಯಲ್ಲಿ ಇಡೀ ಜಿಲ್ಲೆಯಲ್ಲೇ ನಾವು ಮೊದಲಿಗರಾಗಿದ್ದೇವೆ. ಸಣ್ಣ ವ್ಯಾಪಾರಿಗಳು, ಹೋಟೆಲ್‌ನವರಿಗೆ ಒಂದೇ ಹಳ್ಳಿಯಲ್ಲಿ ಪಿಗ್ಮಿ ಸಾಲವಾಗಿ 2.5 ಕೋಟಿ ರೂ. ನೀಡಿದ್ದೇವೆ. ಈ ಹಣವನ್ನು ಹಿತೈಷಿಗಳು, ಸಂಬಂಧಿಕರಿಂದ ಸಂಗ್ರಹಿಸಿ ಠೇವಣಿ ಇಟ್ಟು, ನಂತರ ಅದನ್ನು ಜನರಿಗೆ ಹಂಚಿ, ಅವರಿಂದ ರೆಕವರಿ ಮಾಡುವ ಮೂಲಕ ಜನರ ಜೀವನಮಟ್ಟ ಸುಧಾರಣೆಗೆ ಕ್ರಮಕೈಗೊಂಡಿದ್ದೇವೆ ಎಂದು ಶಂಕರೇಗೌಡರು ತಿಳಿಸಿದರು.

ಜಾತಿ ಕಾಲಂನಲ್ಲಿ 'ಉಪ್ಪಾರ' ಎಂದು ನಮೂದಿಸಿ


ವಿಜಯ್‌ಕುಮಾರ್

ನಂಜನಗೂಡು, ಸೆ.22– ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಹಿಂದುಳಿದ ವರ್ಗಗಳ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸಲು ಮನೆ ಮನೆಗೆ ಭೇಟಿ ನೀಡಲಿದ್ದು, ಉಪ್ಪಾರ ಸಮಾಜದ ಬಂಧುಗಳು ಜಾತಿ ಕಾಲಂ 9ರಲ್ಲಿ 'ಉಪ್ಪಾರ' ಎಂದು ನಮೂದಿಸಿ ಬರೆಸಬೇಕು ಎಂದು ಯುವ ಕಾಂಗ್ರೆಸ್ ತಾಲೂಕು ಅಧ್ಯಕ್ಷ ವಿಜಯ್ ಕುಮಾರ್ ತಿಳಿಸಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಮಾಜ ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಹಿಂದುಳಿದಿದ್ದು, ಸಮಾಜದ ಪ್ರಗತಿಗಾಗಿ ಎಲ್ಲಾ ಉಪ್ಪಾರ ಸಮಾಜದ ಬಂಧುಗಳು ಉಪಜಾತಿಗಳನ್ನು ಬರೆಸದೆ ಉಪ್ಪಾರ ಎಂದು ನಮೂದಿಸಿ ಬರಸಬೇಕು. ಸಮಾಜದ ಹಿರಿಯ ಮುಖಂಡರು ಆಯಾ ಗ್ರಾಮಗಳಲ್ಲಿ ಎಲ್ಲರಿಗೂ ತಿಳಿ ಹೇಳಿ ಜಾಗೃತಿ ಮೂಡಿಸಬೇಕು ಎಂದು ಮನವಿ ಮಾಡಿದರು.

ಹೆಚ್.ಡಿ.ಕೋಟೆ: ಹುಲಿ ದಾಳಿಗೆ ವ್ಯಕ್ತಿ ಬಲಿ

ಹೆಚ್.ಡಿ.ಕೋಟೆ, ಸೆ.22– ಹುಲಿ ದಾಳಿಗೆ ವ್ಯಕ್ತಿ ಬಲಿಯಾಗಿರುವ ಘಟನೆ ತಾಲೂಕಿನ ಎನ್.ಬೇಗೂರು ಅರಣ್ಯ ವಲಯದಲ್ಲಿ ಶನಿವಾರ ನಡೆದಿದೆ.

ತಾಲೂಕಿನ ಎನ್.ಬೇಗೂರು ಗ್ರಾಪಂ ವ್ಯಾಪ್ತಿಯ ಮಾಳದ ಹಾಡಿಯ ಆದಿವಾಸಿ ಕೆಂಚ (60) ಸಾವನ್ನಪ್ಪಿದವರು. ಈತ ಶನಿವಾರ ಗ್ರಾಮದ ಕೃಷ್ಣಶೆಟ್ಟಿ ಎಂಬುವರ ಜಮೀನಿಗೆ ಕೂಲಿ ಕೆಲಸಕ್ಕೆ ತೆರಳಿದ್ದರು. ಈ ವೇಳೆ ಹುಲಿ ಕೆಂಚನ ಮೇಲೆ ಏಕಾಏಕಿ ದಾಳಿ ನಡೆಸಿದೆ. ಇದನ್ನು ಕಂಡ ಸ್ಥಳದಲ್ಲಿದ್ದವರು ಕೂಗಿಕೊಂಡರೂ ಹುಲಿ ಕೆಂಚನನ್ನು ಎಳೆದೊಯ್ದಿದೆ.

ಸೋಮವಾರ ಬಸವೇಶ್ವರ ಗುಡಿ ಗಸ್ತಿನ ಬೋಗಿಹಳ್ಳ ಅರಣ್ಯ ಪ್ರದೇಶದಲ್ಲಿ ವ್ಯಕ್ತಿ ಶವ ಬಿದ್ದಿರುವುದನ್ನು ಗಮನಿಸಿದ ಅರಣ್ಯ ಸಿಬ್ಬಂದಿ ಮೇಲಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಈ ವೇಳೆ ಸ್ಥಳಕ್ಕಾಗಮಿಸಿದ ಸಿಎಫ್ ಎಸ್.ಪ್ರಭಾಕರನ್, ಹೆಡಿಯಾಲ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎ.ವಿ.ಸತೀಶ್, ಎನ್.ಬೇಗೂರು ವಲಯ ಅರಣ್ಯಾಧಿಕಾರಿ ಅಮೃತೇಶ್ ಬಿ.ಬಿ., ಡಾ.ಕೀರ್ತಿ ಹಾಗೂ ಸಿಬ್ಬಂದಿ


ಕೆಂಚ ಅವರ ಪತ್ನಿ ಮಾರೆ ಅವರಿಗೆ ಸಿಎಫ್ ಪ್ರಭಾಕರನ್ 2 ಲಕ್ಷ ರೂಗಳ ಚೆಕ್ ವಿತರಿಸಿದರು.

ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಮಾಳದ ಹಾಡಿ ಗ್ರಾಮದ ನಿವಾಸಿ ಕೆಂಚ ಎಂದು ಧೃಡಪಟ್ಟ ಹಿನ್ನೆಲೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಗ್ರಾಮಸ್ಥರೊಂದಿಗೆ ಸೇರಿ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ಕೆಂಚ

ಈ ವೇಳೆ ಕೆಂಚ ಅವರ ಪತ್ನಿ ಮಾರೇ ಅವರಿಗೆ ಸಿಎಫ್ ಪ್ರಭಾಕರನ್ ಅವರು 2 ಲಕ್ಷ ರೂ.ಗಳ ಪರಿಹಾರದ ಚೆಕ್ ವಿತರಿಸಿ, ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಶಾಸಕ ಅನಿಲ್ ಅವರ ಸಮ್ಮುಖದಲ್ಲಿ 3 ಲಕ್ಷ ರೂ. ನೀಡಲಾಗುವುದು ಎಂದು ತಿಳಿಸಿದರು.

ಎನ್.ಬೇಗೂರು ಗ್ರಾಪಂ ಅಧ್ಯಕ್ಷ ಶೈಲೇಂದ್ರ, ಸದಸ್ಯ ಮಂಜುನಾಥ್, ಮುಖಂಡರಾದ ಪುಟ್ಟಬಸವ, ಹನುಮಂತಯ್ಯ, ಕಾಳಸ್ವಾಮಿ, ಸಿದ್ದರಾಜು, ವಿಜಿ, ಸುಂದರ್, ವೆಂಕಟ, ರಮೇಶ್, ಮಾಸ್ತಿ, ಬಿಳಿಯಪ್ಪ, ಮೋಹನ, ನಾಗ ರಾಜು, ಪೂರ್ಣಿಮಾ, ಬೊಮ್ಮಿ, ಕುಳ್ಳಮ್ಮ ಸೇರಿದಂತೆ ಇನ್ನಿತರರಿದ್ದರು. ಈ ಸಂಬಂಧ ಅಂತರಸಂತೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಬಿಟಿ ಕಾಲೋನಿ ಪಿಎಸಿಎಸ್‌ಗೆ 22.56 ಲಕ್ಷ ನಿವ್ವಳ ಲಾಭ

ಹುಣಸೂರು, ಸೆ.22– ತಾಲೂಕಿನ ಸಿಬಿಟಿ ಕಾಲೋನಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ 2024–25ನೇ ಸಾಲಿನಲ್ಲಿ 22.56 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಅಧ್ಯಕ್ಷ ಸಿ.ಕುಪ್ಪಸ್ವಾಮಿ ತಿಳಿಸಿದರು.

ಸಹಕಾರ ಸಂಘದ ಆವರಣದಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘದ ಎಲ್ಲರ ಪರಿಶ್ರಮದಿಂದ ಪ್ರತಿ ವರ್ಷ ಸಂಘ ಲಾಭದಾಯಕವಾಗಿ ನಡೆದುಕೊಂಡು ಬರುತ್ತಿದೆ. ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಹಾಗೂ ಸಂಘದ ನಿರ್ದೇಶಕ ಹೆಚ್.ಪಿ.ಅಮರ್‌ನಾಥ್ ಅವರ ಸಹಕಾರದಿಂದ ಹಲವು ವರ್ಷಗಳಿಂದ ಸ್ಥಗಿತಗೊಂಡಿದ್ದ ಟ್ರಾಕ್ಟರ್ ಸಾಲವನ್ನು ಮತ್ತೆ ಆರಂಭಿಸಲಾಗಿದೆ. ಅಲ್ಲದೇ 38 ಹೊಸ ರೈತರಿಗೆ 23.51 ಲಕ್ಷ ರೂ. ಸಾಲ ನೀಡಲಾಗಿದೆ. ಮುಂದೆಯೂ ಸಂಘವನ್ನು ಲಾಭದಾಯವಾಗಿ ಮುನ್ನಡೆಸಲಾಗುವುದು ಎಂದರು.

ಹುಡಾ ಅಧ್ಯಕ್ಷ, ಸಂಘದ ನಿರ್ದೇಶಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ನಮ್ಮ ಸಂಘ ಜಿಲ್ಲೆಗೆ ಉತ್ತಮ ಸಹಕಾರ ಸಂಘ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.


ಸಂಘದ ನಿರ್ದೇಶಕ ಅಮರ್‌ನಾಥ್ ಅವರು ಟ್ರಾಕ್ಟರ್ ವಿತರಿಸುತ್ತಿರುವುದು.

ಪ್ರಸ್ತುತ 1573 ಸದಸ್ಯರಾಗಿದ್ದು, ಮುಂಬರುವ ದಿನಗಳಲ್ಲಿ ವ್ಯಾಪಕ ಪ್ರಚಾರದ ಮೂಲಕ ಮತ್ತಷ್ಟು ರೈತರನ್ನು ಸದಸ್ಯರನ್ನಾಗಿಸಬೇಕಿದೆ. ಕಳೆದ 2 ವರ್ಷಗಳಿಂದ ಹೊಸ ರೈತರಿಗೆ ಸಾಲ ಸಿಗುತ್ತಿರಲಿಲ್ಲ ಟ್ರಾಕ್ಟರ್ ಸಾಲ ನೀಡುತ್ತಿರಲಿಲ್ಲ. ಮಾಜಿ ಶಾಕಸ ಹೆಚ್.ಪಿ.ಮಂಜುನಾಥ್ ಸಹಕಾರ ಇಲಾಖೆ ಅಧಿಕಾರಿಗಳ ಮೇಲೆ ಒತ್ತಡ ಹಾಗೂ ಮೇಲ್ವಿಚಾರಕ ಕೃಷ್ಣ ಅವರ ಉತ್ತಮ ಕಾರ್ಯ ನಿರ್ವಹಣೆಯಿಂದಾಗಿ ಟ್ರಾಕ್ಟರ್ ಹಾಗೂ 38 ರೈತರಿಗೆ ಸಾಲ ದೊರೆತಿದೆ ಎಂದರು.

ಸಿಇಓ ಬಿ.ಸೆಂದಿಲ್‌ಕುಮಾರ್ ಸಂಘದ ವರದಿ ಮಂಡಿಸಿದರು. ಉಪಾಧ್ಯಕ್ಷ ಜವರನಾಯಕ, ನಿರ್ದೇಶಕರಾದ ಶಿವಲಿಂಗಪ್ಪ, ಮಹದೇವ್, ದೊರೆಸ್ವಾಮಿ, ಸುರೇಶ್, ತಂಗಮ್ಮ, ವೇಲುಮಣಿ, ಶಂಕರಪ್ಪ, ಪ್ರದೀಪ್, ಧನರಾಜ್, ಸಿಬ್ಬಂದಿ ಮಾಣಿಕ್ಯ ಸುನೀಲ್ ಕುಮಾರ್, ರೋಷನ್, ಮಾಣಿಕ್ ರಾಜ್ ಇತರರಿದ್ದರು.



ತ್ರಿಪುರ ಸುಂದರಿ ಅಮ್ಮನವರಿಗೆ ಸಿಎಸ್‌ಪಿ ವಿಶೇಷ ಪೂಜೆ

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಮೂಗೂರಿನಲ್ಲಿ ನೆಲೆಸಿರುವ ತಮ್ಮ ಮನೆ ದೇವರಾದ ಶ್ರೀತ್ರಿಪುರ ಸುಂದರಿ ಅಮ್ಮನವರ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು.

ಸದಸ್ಯರು ಸಂಘದ ಅಭಿವೃದ್ಧಿಗೆ ಸಹಕರಿಸಿ

ಹಲ್ಲರೆ ಪಿಎಸಿಎಸ್ ಅಧ್ಯಕ್ಷ ಹೆಚ್.ಎನ್.ಬಸವರಾಜ್


ಸಭೆಯಲ್ಲಿ ಸಂಘದ ಅಧ್ಯಕ್ಷ ಹೆಚ್.ಎನ್.ಬಸವರಾಜ್ ಮಾತನಾಡಿದರು.

ಮಲ್ಕುಂಡಿ, ಸೆ.22– ಸಂಘದ ನಿರ್ದೇಶಕರು, ಸದಸ್ಯರು ಸಹಕಾರ ತತ್ವದಡಿ ಕಾರ್ಯ ನಿರ್ವಹಿಸಿದಾಗ ಮಾತ್ರ ಸಂಘಗಳು ಅಭಿವೃದ್ಧಿ ಪಥದತ್ತ ಸಾಗಲಿವೆ ಎಂದು ಹಲ್ಲರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಎನ್.ಬಸವರಾಜ್ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಸಂಘಗಳು ಬಡವರು, ರೈತರ ಪರವಾಗಿದ್ದು, ಸಂಘದ ಸದಸ್ಯರು ಒಗ್ಗಟ್ಟು ಪ್ರದರ್ಶಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು. ಸಂಘದಿಂದ ಸಾಲ ಪಡೆದವರು ಸಕಾಲಕ್ಕೆ ಮರುಪಾವತಿಸುವ ಸಂಬಂಧ ರೈತರಿಗೆ ನಿರ್ದೇಶಕರು ಹಾಗೂ ಸದಸ್ಯರು ತಿಳುವಳಿಕೆ ಮೂಡಿಸಬೇಕು ಎಂದ ಅವರು ಪ್ರಸಕ್ತ ಸಾಲಿನಲ್ಲಿ ಸಂಘ 48,826 ರೂ. ನಿವ್ವಳ ಲಾಭ ಗಳಿಸಿದೆ ಎಂದರು.

ಸಂಘದ ಸಿಇಓ ಹೆಚ್.ಡಿ.ಶಿವಕುಮಾರ್ ವಾರ್ಷಿಕ ವರದಿ ಮಂಡಿಸಿದರು. ಸಂಘದ ಉಪಾಧ್ಯಕ್ಷ ಪುಟ್ಟದೇವಯ್ಯ, ನಿರ್ದೇಶಕರಾದ ಹೆಚ್.ಸಿ.ಮಹದೇವಸ್ವಾಮಿ, ಹೆಚ್.ಎಲ್.ಶಿವಮೂರ್ತಿ, ಶಿವಣ್ಣ ಬಸವಣ್ಣ, ಸೈಫುಲ್ಲಾ, ಶಿವಣ್ಣನಾಯಕ, ರಾಜಪ್ಪ ಸ್ವಾಮಿ, ಚನ್ನಮ್ಮ, ಭಾಗ್ಯಮ್ಮ, ಬ್ಯಾಂಕ್ ಮೇಲ್ವಿಚಾರಕ ಎಸ್.ನಿರಂಜನ್, ಮಹದೇವಸ್ವಾಮಿ, ರಮೇಶ್ ಸೇರಿದಂತೆ ಇತರರಿದ್ದರು.

ಅಖಿಲ ನಾಮಧಾರಿಗೌಡ ಸಮಾಜದ ಅಧ್ಯಕ್ಷರಿಗೆ ಶ್ರದ್ಧಾಂಜಲಿ

ಸರಗೂರು, ಸೆ.22– ಪಟ್ಟಣದ ಅಖಿಲ ನಾಮಧಾರಿಗೌಡ ಸಮುದಾಯ ಭವನದಲ್ಲಿ ನಡೆದ ಕಾರ್ಯಕಾರಿ ಸಭೆಯಲ್ಲಿ ಇತ್ತೀಚೆಗೆ ನಿಧನರಾದ ನಾಮಧಾರಿಗೌಡ ಸಮಾಜದ ಅಧ್ಯಕ್ಷ ಎಂ.ಎನ್.ಭೀಮರಾಜ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಜಿಪಂ ಮಾಜಿ ಅಧ್ಯಕ್ಷ ಪಿ.ರವಿ ಮಾತನಾಡಿ, ಭೀಮರಾಜ್ ಅವರು ಸಮಾಜದ ಅಧ್ಯಕ್ಷರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಶಿಕ್ಷಣ ಸಂಸ್ಥೆ ಸಂಸ್ಥಾಪಕರಾಗಿ ಸಾಕಷ್ಟು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ್ದು, ಸಮಾಜದ ಅಭಿವೃದ್ಧಿಗೂ ಶ್ರಮಿಸಿದ್ದಾರೆ. ರಾಜಕೀಯವಾಗಿ ಗುರ್ತಿಸಿಕೊಂಡಿದ್ದ ಅವರು ಸಮಾಜದ ಬಂಧುಗಳಿಗೆ ದಾರಿದೀಪವಾಗಿದ್ದರು. ಅವರ ನಿಧನದಿಂದ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ ಎಂದರು.

ನಾಮಧಾರಿಗೌಡ ಸಮಾಜದ ಉಪಾಧ್ಯಕ್ಷ ವಿನೋದ್‌ಕುಮಾರ್, ಸರಗೂರು ತಾಲೂಕು ಹೋರಾಟ ಸಮಿತಿಯಲ್ಲಿ ಮುಂಚೂಣಿಯಲ್ಲಿದ್ದ ಭೀಮರಾಜ್


ಎಂ.ಎನ್.ಭೀಮರಾಜ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಅವರ ಹೋರಾಟದ ಫಲವಾಗಿ ಸರಗೂರು ನೂತನ ತಾಲೂಕಾಗಿ ಘೋಷಣೆಯಾಯಿತು. ಬಿ.ಮಟಕೆರೆ ಕರ್ನಾಟಕ ಪಬ್ಲಿಕ್ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರಾಗಿದ್ದ ಅವರು ಶಾಲೆ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ ಎಂದರು.

ಕಾರ್ಯದರ್ಶಿ ಅಂಕಪ್ಪ ಮಾಸಿಕ ವರದಿ ಓದಿದರು. ಗೌರವಾಧ್ಯಕ್ಷ ರತ್ನಯ್ಯ, ಕಾರ್ಯಾಧ್ಯಕ್ಷ ಬಸವರಾಜು, ಡಿ.ಸುಂದರ್‌ದಾಸ್, ಎಂ.ಎನ್. ಜಗದೀಶ್, ನಟರಾಜು, ಬಿ.ಸಿ.ಬಸಪ್ಪ, ಹೆಚ್.ದೇವದಾಸ್, ಅಭಿಕುಮಾರ್, ಶ್ಯಾಮ್ ಸುಂದರ್, ಕೆ.ಮಹೇಶ್, ನಂದಕುಮಾರ್, ವೈ.ಪಿ.ನಾಗರಾಜ್, ಖಜಾಂಚಿ ಎ.ಪದ್ಮರಾಜ್, ಪದ್ಮರಾಜ್, ಚಾಮರಾಜು, ಮಹದೇವಪ್ಪ ಪಿ.ಮಹದೇವ್, ಅಜಿತ್‌ಕುಮಾರ್, ಉದಯ್ ಕುಮಾರ್, ಬಿ.ಎಸ್.ನವೀನ್ ದಾಸ್, ಕೆ.ಎಸ್.ಮಲ್ಲಿಕಾರ್ಜುನ, ನಾಗೇಂದ್ರಪ್ಪ, ಸುರೇಂದ್ರಕುಮಾರ್ ಸೇರಿದಂತೆ ಸಮಾಜದ ಬಂಧುಗಳು ಹಾಜರಿದ್ದರು.

ಆಹಾರಮೇಳ ಉಪಸಮಿತಿ ಅಧ್ಯಕ್ಷರಾಗಿ ನೇಮಕ



ತಿ.ನರಸೀಪುರ, ಸೆ.22– ಮೈಸೂರು ದಸರಾ ಮಹೋತ್ಸವದ ಆಹಾರಮೇಳ ಉಪಸಮಿತಿ ಅಧ್ಯಕ್ಷರಾಗಿ ಪ್ರಥಮ ದರ್ಜೆ ಗುತ್ತಿಗೆ ದಾರ ಕಗ್ಗಲೀಪುರ ಕೆ.ಎಂ.ಮಧು ಕುಮಾರ್ ಅವರನ್ನು ನೇಮಕ ಮಾಡಿ ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಆದೇಶಿಸಿದ್ದಾರೆ. ತಮ್ಮ ಆಯ್ಕೆಗೆ ಸಹಕರಿಸಿದ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್ ಅವರಿಗೆ ಮಧುಕುಮಾರ್ ಅಭಿನಂದನೆ ಸಲ್ಲಿಸಿದ್ದಾರೆ.

ಅಂಬಲಾರೆ ಡೈರಿ ವಾರ್ಷಿಕ ಮಹಾಸಭೆ


ಅಂಬಲಾರೆ ಡೈರಿ ವಾರ್ಷಿಕ ಮಹಾಸಭೆ ನಡೆಯಿತು.

ಬೆಟ್ಟದಪುರ, ಸೆ.22– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಅಂಬಲಾರೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ 2024–25ನೇ ಸಾಲಿನ ವಾರ್ಷಿಕ ಮಹಾಸಭೆ ಸಂಘದ ಮೇಲ್ವಿಚಾರಕ ಅವಿನಾಶ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೈಮುಲ್ ನಿವೃತ್ತ ವ್ಯವಸ್ಥಾಪಕ ಸಣ್ಣತಮ್ಮೇಗೌಡ ಮಾತನಾಡಿ, ರೈತರು ಸಂಘದಿಂದ ದೊರೆಯುವ ಸೌಲಭ್ಯಗಳನ್ನು ಬಳಸಿಕೊಂಡು ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು. ಅಲ್ಲದೇ ಸಂಘಕ್ಕೆ ಗುಣಮಟ್ಟದ ಹಾಲು ಸರಬರಾಜು ಮಾಡಬೇಕು ಎಂದರು.

ಸಂಘದ ಮೇಲ್ವಿಚಾರಕ ಅವಿನಾಶ್ ಮಾತನಾಡಿದರು. ವಿಸ್ತರಣಾಧಿಕಾರಿ ಸತೀಶ್, ಮುಖಂಡರಾದ ಕೃಷ್ಣೇಗೌಡ, ಎ.ಆರ್.ಮಲ್ಲಿಕಾರ್ಜುನ್, ರತ್ನಮ್ಮ, ಹಾಲಯ್ಯ, ವಸಂತ್ ಕುಮಾರ್, ಸಿಇಓ ವೆಂಕಟೇಶ್ ಹಾಗೂ ಹಾಲು ಪರೀಕ್ಷಕ ಅವಿನಾಶ್, ಗುಮಾಸ್ತ ಸತೀಶ್, ಸಹಾಯಕ ಲೋಕೇಶ್ ಸೇರಿದಂತೆ ಇನ್ನಿತರರಿದ್ದರು.

ಕೇಂದ್ರ ಸರ್ಕಾರದಿಂದ ಜಿಎಸ್‌ಟಿ ಇಳಿಸಿ ನವರಾತ್ರಿ ಉಡುಗೊರೆ

ತಿ.ನರಸೀಪುರದಲ್ಲಿ ಬಿಜೆಪಿ ಕಾರ್ಯಕರ್ತರ ಸಂಭ್ರಮಾಚರಣೆ


ತಿ.ನರಸೀಪುರದಲ್ಲಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ತಿ.ನರಸೀಪುರ, ಸೆ.22– ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಸರಕು ಮತ್ತು ಸೇವಾ ತೆರಿಗೆ(ಜಿಎಸ್‌ಟಿ) ದರ ಇಳಿಕೆ ಮಾಡಿರುವುದನ್ನು ಸ್ವಾಗತಿಸಿ ತಿ.ನರಸೀಪುರ ಹಾಗೂ ವರುಣ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಸೋಮವಾರ ಪಟ್ಟಣದಲ್ಲಿ ಸಂಭ್ರಮಾಚರಣೆ ನಡೆಸಿದರು.

ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಬಳಿ ಜಮಾಯಿಸಿದ ತಿ.ನರಸೀಪುರ ಹಾಗೂ ವರುಣ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಜಿಎಸ್‌ಟಿ ಇಳಿಕೆ ಮಾಡುವ ಮೂಲಕ ನವರಾತ್ರಿ ಉಡುಗೊರೆ ನೀಡಿದ ಪ್ರಧಾನಿ ನರೇಂದ್ರ ಮೋದಿ ಹಾಗೂ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಧನ್ಯವಾದಗಳು ಎಂದು ಘೋಷಣೆ ಕೂಗಿ ಪಟಾಕಿ ಸಿಡಿಸಿ, ಸಂತಸ ವ್ಯಕ್ತಪಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

> "ಇಂದಿನಿಂದ ಆರಂಭವಾಗಿರುವ ನವರಾತ್ರಿ ಉತ್ಸವದೊಂದಿಗೆ ಪ್ರಧಾನಿಗಳು ಘೋಷಿಸಿದ ಜಿಎಸ್‌ಟಿ ಉಳಿತಾಯದ ಘೋಷಣೆ ದೇಶದ ಮೂಲೆ ಮೂಲೆಗಳಲ್ಲೂ ಮೊಳಗುತ್ತಿದೆ. ನಾಗರಿಕ ಬಂಧುಗಳೆಲ್ಲರೂ ಜಿಎಸ್‌ಟಿ ಇಳಿಕೆಯಾಗಿರುವ ಕುರಿತು ನೆರೆಹೊರೆಯವರೊಂದಿಗೆ ಮಾಹಿತಿ ಹಂಚಿಕೊಂಡು ಸುಲಲಿತ ಜೀವನ ನಡೆಸುವ ಮೂಲಕ ಸ್ವದೇಶಿ ಉತ್ಪನ್ನಗಳನ್ನು ಬಳಸಿ, ಬೆಂಬಲಿಸುವ ಸಂಕಲ್ಪ ಮಾಡಬೇಕು.
> – ಶಿವಕುಮಾರ್, ತಿ.ನರಸೀಪುರ ಕ್ಷೇತ್ರಾಧ್ಯಕ್ಷ.

ವರುಣ ಕ್ಷೇತ್ರಾಧ್ಯಕ್ಷ ನಗರ್ಲೆ ಮಹದೇವಸ್ವಾಮಿ ಮಾತನಾಡಿ, ಕೇಂದ್ರ ಸರ್ಕಾರ ಜಿಎಸ್‌ಟಿ ಇಳಿಕೆ ಮಾಡಿ ಜನರಿಗೆ ನವರಾತ್ರಿ ಉಡುಗೊರೆ ನೀಡಿದೆ. ದೇಶದ ಇತಿಹಾಸದಲ್ಲಿ ಜಿಎಸ್‌ಟಿ ಇಷ್ಟು ದೊಡ್ಡ ಮಟ್ಟದಲ್ಲಿ ಇಳಿಸಿದ ಉದಾಹರಣೆ ಇಲ್ಲ. ಪ್ರಧಾನಿ ಮೋದಿ ಈ ಕೆಲಸ ಮಾಡಿ ಬಡ, ಮಧ್ಯಮ ವರ್ಗದ ಜನರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ಪ್ರಧಾನಿ ಮೋದಿ ಅವರ ಐತಿಹಾಸಿಕ ನಿರ್ಧಾರದಿಂದ ಬಡ, ಮಧ್ಯಮ, ಸಣ್ಣ ಕೈಗಾರಿಕೆಗಳಿಗೆ ಅನುಕೂಲವಾಗಲಿದ್ದು, 375 ವಸ್ತುಗಳ ಮೇಲಿನ ತೆರಿಗೆ ಇಳಿಕೆಯಾಗಲಿದೆ. ರಾಜ್ಯದಲ್ಲಿ ನವರಾತ್ರಿ ಆರಂಭವಾಗಿ ತಾಯಿ ಚಾಮುಂಡೇಶ್ವರಿ ಪೂಜೆ ದಿನದಂದೇ ದೇಶದ ಹೆಮ್ಮೆಯ ಪ್ರಧಾನಿಗಳು ಮಧ್ಯಮ ವರ್ಗದ ಜನತೆಗೆ ಅನುಕೂಲ ಮಾಡಿಕೊಡುವ ಮೂಲಕ ದಸರಾ ಉಡುಗೊರೆ ನೀಡಿದ್ದಾರೆ. ಜಿಎಸ್‌ಟಿ ಕಡಿತದಿಂದ ಆಹಾರ ಪದಾರ್ಥಗಳು, ದಿನನಿತ್ಯದ ವಸ್ತುಗಳು, ಎಲೆಕ್ಟ್ರಾನಿಕ್ ವಸ್ತುಗಳು, ರೈತರ ಕೃಷಿ ಪರಿಕರಗಳು, ಔಷಧಗಳು, ಕಾರು, ಬೈಕ್ ಸೇರಿದಂತೆ ಹಲವು ವಸ್ತುಗಳ ಬೆಲೆ ಕಡಿಮೆಯಾಗಲಿದೆ. ಶ್ರೀಮಂತರೂ ಸೇರಿದಂತೆ ಪ್ರತಿಯೊಬ್ಬರಿಗೂ ಮೋದಿ ಅವರ ಐತಿಹಾಸಿಕ ನಿರ್ಧಾರದಿಂದ ಒಳ್ಳೆಯದಾಗಲಿದೆ ಎಂದರು.

ಪ್ರಧಾನಿ ಮೋದಿ ತಮ್ಮ ಕುಟುಂಬಕ್ಕೆ ಆಸ್ತಿ ಮಾಡಲು ಹೋಗಿಲ್ಲ. ಜನತೆಯನ್ನೇ ತಮ್ಮ ಆಸ್ತಿ ಎಂದು ಜನಸೇವೆಗೆ ತಮ್ಮ ಜೀವನವನ್ನು ಮುಡುಪಾಗಿಟ್ಟು ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸ್ ನಾಯಕರು ತಮ್ಮ ಸ್ವಕುಟುಂಬಕ್ಕೋಸ್ಕರ ಹೋರಾಟ ಮಾಡುತ್ತಿದ್ದರೆ, ಮೋದಿಯವರು ದೇಶದ ಜನತೆಗೆ ಬದುಕು ಕಟ್ಟಿಕೊಡಲು ಹೋರಾಟ ಮಾಡುತ್ತಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರುವ ಎಲ್ಲರ ಪರವಾಗಿ ಅವರಿಗೆ ಪಕ್ಷದ ಕಾರ್ಯಕರ್ತರು ಧನ್ಯವಾದ ಸಲ್ಲಿಸುತ್ತೇವೆ ಎಂದರು.

ಈ ವೇಳೆ ತಾಲೂಕು ಅಧ್ಯಕ್ಷ ಸತ್ಯಪ್ಪ, ಪ್ರಧಾನ ಕಾರ್ಯದರ್ಶಿ ಆಲಗೂಡು ವೆಂಕಟರಮಣಶೆಟ್ಟಿ, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಟೌನ್ ಅಧ್ಯಕ್ಷ ನಂಜುಂಡಸ್ವಾಮಿ, ಲೋಕೇಶ್, ಎಸ್ಎಂಆರ್ ಪ್ರಕಾಶ್, ಪಿ.ಎಂ.ಕುಮಾರ್, ರಾಜಶೇಖರ್, ದರ್ಶನ್, ಸಿದ್ದಲಿಂಗಸ್ವಾಮಿ, ಲಕ್ಷ್ಮಿ ಸೇರಿದಂತೆ ಇತರರಿದ್ದರು.

ಬನ್ನೂರಿನಲ್ಲೂ ಬಿಜೆಪಿ ಸಂಭ್ರಮಾಚರಣೆ


ಬನ್ನೂರಿನಲ್ಲಿ ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು.


ಬನ್ನೂರು, ಸೆ.22– ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಜಿಎಸ್‌ಟಿ ಕಡಿತಗೊಳಿಸಿರುವುದನ್ನು ಸ್ವಾಗತಿಸಿ, ಬನ್ನೂರಿನಲ್ಲೂ ಬಿಜೆಪಿ ಕಾರ್ಯಕರ್ತರು ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಿದರು.

ಈ ವೇಳೆ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಎನ್.ಎಂ.ರಾಮಚಂದ್ರ, ಪುರಸಭೆ ಮಾಜಿ ಸದಸ್ಯ ಪ್ರಭಾಕರ್, ಟೌನ್ ಅಧ್ಯಕ್ಷ ಕಾಳೇಗೌಡ, ಗಣೇಶ್, ರವಿ, ಸುಂದರ್, ಮಹದೇವು, ಭವ್ಯ, ನಂದೀಶ್, ಕೆಂಪಣ್ಣ ಸೇರಿದಂತೆ ಇತರರಿದ್ದರು.

ಮಾವಿನಹಳ್ಳಿ ಡೇರಿ ವಾರ್ಷಿಕ ಮಹಾಸಭೆ


ಮೈಸೂರು ತಾಲೂಕಿನ ಮಾವಿನಹಳ್ಳಿ ಬಿಎಂಸಿ ಕೇಂದ್ರದ ಆವರಣದಲ್ಲಿ ಡೇರಿ ಅಧ್ಯಕ್ಷ ಎಸ್.ಸಿದ್ದೇಗೌಡರ ಅಧ್ಯಕ್ಷತೆಯಲ್ಲಿ ಸೋಮವಾರ ವಾರ್ಷಿಕ ಮಹಾಸಭೆ ನಡೆಯಿತು. ಈ ವೇಳೆ ಉಪಾಧ್ಯಕ್ಷೆ ಬಸಮ್ಮಣ್ಣಿ, ನಿರ್ದೇಶಕರಾದ ಕೆ.ಎಸ್.ಕೆಂಪೇಗೌಡ, ಎಂ.ಸಿ.ನಾಗರಾಜೇಗೌಡ, ಕೆ.ಕೆಂಪೇಗೌಡ, ಎಸ್.ಚಿಕ್ಕಣ್ಣೇಗೌಡ, ಸಿ.ಸಿದ್ದೇಶ್, ಸಿ.ಸಿದ್ದೇಗೌಡ, ಚಾಮರಾಜು, ಸರೋಜಮ್ಮ, ಇಂದ್ರಮ್ಮ, ಸಣ್ಣತಾಯಮ್ಮ, ಮೈಮುಲ್ ವಿಸ್ತರಣಾಧಿಕಾರಿ ಮೇಘನಾ, ಸಿಇಓ ಎಂ.ಜವರೇಗೌಡ, ಹಾಲು ಪರೀಕ್ಷಕ ಶ್ರೀಕಂಠ, ಕಂಪ್ಯೂಟರ್ ಆಪರೇಟರ್ ಶಿವಮಂಜು, ಸಹಾಯಕ ಮನು ಮತ್ತು ಗ್ರಾಮಸ್ಥರು ಭಾಗವಹಿಸಿದ್ದರು.

ನರಸಿಂಹೇಗೌಡ ನಿಧನ



ಹೆಚ್.ಡಿ.ಕೋಟೆ, ಸೆ.22– ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ನರಸಿಂಹೇಗೌಡ(48) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕಿನ ಸಣಬದಕೊಪ್ಪಲು ಗ್ರಾಮದಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉಮೇಶ್



ತಿ.ನರಸೀಪುರ, ಸೆ.22– ತಾಲೂಕಿನ ಬೆನಕನಹಳ್ಳಿ ಗ್ರಾಮದ ಲೇಟ್ ಮಹದೇವಪ್ಪನವರ ಪುತ್ರ ಉಮೇಶ್(51) ಸೋಮವಾರ ರಾತ್ರಿ ನಿಧನರಾದರು. ಮೃತರು ಪತ್ನಿ ಸೌಮ್ಯ, ಇಬ್ಬರು ಪುತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಕುಟುಂಬ ಮೂಲಗಳು ತಿಳಿಸಿವೆ.

ದಸರಾ ಸಂಭ್ರಮಕ್ಕೆ ವಿಂಟೇಜ್ ಕಾರುಗಳ ಆಕರ್ಷಣೆ



ನಾಡಹಬ್ಬ ಮೈಸೂರು ದಸರಾ ಮಹೋತ್ಸವ-2025ರ ಅಂಗವಾಗಿ ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದ ಎಂಜಿಎಸ್ ವಿಂಟೇಜಸ್‌ನಲ್ಲಿ ಹಮ್ಮಿಕೊಂಡಿರುವ 'ವಿಂಟೇಜ್ ಹಾಗೂ ಕ್ಲಾಸಿಕ್ ಕಾರುಗಳ ಪ್ರದರ್ಶನ'ಕ್ಕೆ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಸೋಮವಾರ ಚಾಲನೆ ನೀಡಿದರು. ಕೈಗಾರಿಕೋದ್ಯಮಿ ಎಂ.ಗೋಪಿನಾಥ್ ಶೆಣೈ, ಶ್ರೀಮತಿ ಸಾವಿತ್ರಿ ಗೋಪಿನಾಥ್ ಶೆಣೈ, ಉದ್ಯಮಿ ಮಾಧವ ಶೆಣೈ, ಶ್ರೀಮತಿ ವಿಜೇತ ಯೋಗಿರಾಜ್, ಬಿಜೆಪಿ ಮುಖಂಡ ಹೆಚ್.ಜಿ.ಗಿರಿಧರ್ ಮತ್ತಿತರರಿದ್ದರು.



ಶಿಲ್ಪಿ ಅರುಣ್ ಯೋಗಿರಾಜ್ ದಂಪತಿ ವಿಂಟೇಜ್ ಕಾರಿನಲ್ಲಿ ಕುಳಿತು ಸಂಭ್ರಮಿಸಿದರು

50ಕ್ಕೂ ಹೆಚ್ಚು ವಿಂಟೇಜ್ ಕಾರುಗಳ ಪ್ರದರ್ಶನ...!

'ವಿಂಟೇಜ್ ಹಾಗೂ ಕ್ಲಾಸಿಕ್ ಕಾರುಗಳ ಪ್ರದರ್ಶನ'ದಲ್ಲಿ 'ಫೋರ್ಡ್ ಜಿಪಿಡಬ್ಲ್ಯೂ (ಯುಎಸ್ ಆರ್ಮಿ ಟ್ರಕ್)', '1970ರ ಲ್ಯಾಂಡ್ ರೋವರ್ ಸರಣಿ-3', '1949ರ ಬೆಡ್ ಫೋರ್ಡ್', '1937ರ ಮರ್ಸಿಡಿಸ್ ಬೆಂಜ್ 170 ವಿ', '1966ರ ವೋಕ್ಸ್‌ವ್ಯಾಗನ್ ಬೀಟಲ್ 1300' ಸೇರಿದಂತೆ 50ಕ್ಕೂ ಹೆಚ್ಚು ಆತ್ಯಾಕರ್ಷಕ ವಿಂಟೇಜ್ ಕಾರುಗಳನ್ನು ಬೆಳಗ್ಗೆ 10.30 ರಿಂದ ಮಧ್ಯಾಹ್ನ 4 ಗಂಟೆಯವರೆಗೆ ವೀಕ್ಷಣೆ ಮಾಡಬಹುದಾಗಿದೆ.





ಮೈಸೂರು, ಸೆ.22(ಎಂಕೆ)- ನಾಡಹಬ್ಬ ಮೈಸೂರು ದಸರಾ ಮಹೋತ್ಸವ-2025ರ ಅಂಗವಾಗಿ ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶ (ಇನ್‌ಫೋಸಿಸ್ ಕ್ಯಾಂಪಸ್ ಹತ್ತಿರ)ದಲ್ಲಿನ ಎಂಜಿ ಎಸ್(ಎಂ.ಗೋಪಿನಾಥ್ ಶೆಣೈ) ವಿಂಟೇಜಸ್‌ನಲ್ಲಿ ಸೆ.26ರವರೆಗೆ 5 ದಿನಗಳ ಕಾಲ ಹಮ್ಮಿಕೊಂಡಿರುವ 'ವಿಂಟೇಜ್ ಹಾಗೂ ಕ್ಲಾಸಿಕ್ ಕಾರುಗಳ ಪ್ರದರ್ಶನ'ಕ್ಕೆ ಸೋಮವಾರ ಚಾಲನೆ ನೀಡಲಾಯಿತು.

ಆಕರ್ಷಕ 1967ರ ಮರ್ಸಿಡಿಸ್ ಬೆಂಜ್ 230 ಎಸ್ ಹಾಗೂ 1932ರ ಎಂಜಿ ಮೊರಿಸ್ ಕಾರಿನಲ್ಲಿ ಕುಳಿತು ಸುತ್ತು ಹಾಕುವ ಮೂಲಕ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ವಿಂಟೇಜ್ ಕಾರುಗಳ ಪ್ರದರ್ಶನಕ್ಕೆ ವಿದ್ಯುಕ್ತ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಮೈಸೂರಿಗರು ಹಾಗೂ ಮೈಸೂರಿಗೆ ಆಗಮಿಸುವ ಪ್ರವಾಸಿಗರು ತಮ್ಮ ನೆಚ್ಚಿನ ಹಳೆ ಕಾರುಗಳ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿದೆ. ಅಪರೂಪದ ಆಕರ್ಷಕ ಹಳೆ ಕಾರುಗಳನ್ನು ನೋಡಬಹುದಾಗಿದ್ದು, ಸಂಗ್ರಹ ಮಾಡಿರುವುದು ಅತ್ಯಂತ ಶ್ಲಾಘನೀಯ. ಇಂದಿಗೂ ಇಲ್ಲಿರುವ ಕಾರುಗಳ ನಿರ್ವಹಣೆ ಅಚ್ಚುಕಟ್ಟಾಗಿದ್ದು, ರೈಡ್ ಮಾಡಲು ರೆಡಿಯಾಗಿವೆ ಎಂದು ಸಂತಸ ವ್ಯಕ್ತಪಡಿಸಿದರು.

ಕೈಗಾರಿಕೋದ್ಯಮಿ ಎಂ.ಗೋಪಿನಾಥ್ ಶೆಣೈ ಮಾತನಾಡಿ, ದಸರಾ ಅಂಗವಾಗಿ ಕಳೆದ ನಾಲ್ಕು ವರ್ಷಗಳಿಂದ ವಿಂಟೇಜ್ ಕಾರುಗಳ ರ್‍ಯಾಲಿ ನಡೆಸಲಾಗುತ್ತಿತ್ತು. ರ್‍ಯಾಲಿ ವೇಳೆ ಸಾಕಷ್ಟು ಜನರಿಗೆ ವಿಂಟೇಜ್ ಕಾರುಗಳನ್ನು ನೋಡುವ ಅವಕಾಶ ದೊರೆಯುತ್ತಿರಲಿಲ್ಲ. ಹಾಗಾಗಿ ಈ ವರ್ಷ ಐದು ದಿನಗಳ ಪ್ರದರ್ಶನವನ್ನು ಹಮ್ಮಿಕೊಂಡಿದ್ದೇವೆ. 1909 ರಿಂದ 1970ರವರೆಗಿನ ಸುಮಾರು 50ಕ್ಕೂ ಹೆಚ್ಚು ಅಪರೂಪದ ವಿಂಟೇಜ್ ಕಾರುಗಳು ಹಾಗೂ 40ಕ್ಕೂ ಹೆಚ್ಚು ಬೈಕ್‌ಗಳು ಇದ್ದು ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿದೆ ಎಂದರು.

ಶ್ರೀಮತಿ ಸಾವಿತ್ರಿ ಗೋಪಿನಾಥ್ ಶೆಣೈ, ಉದ್ಯಮಿ ಮಾಧವ ಶೆಣೈ, ಶ್ರೀಮತಿ ವಿಜೇತ ಯೋಗಿರಾಜ್, ಬಿಜೆಪಿ ಮುಖಂಡ ಹೆಚ್.ಜಿ.ಗಿರಿಧರ್, ಸತ್ಯನಾರಾಯಣ ಭಟ್, ಶಿವಕುಮಾರ್, ಮಾಧವ ಪೈ, ಎನ್.ರವಿ, ಅನಿಲ್, ಬಿಜೆಪಿ ಮುಖಂಡರಾದ ಕೇಬಲ್ ಮಹೇಶ್, ಜೋಗಿ ಮಂಜು, ಸುರೇಶ್ ನಾಯಕ್ ಮತ್ತಿತರರಿದ್ದರು.







ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನವರಾತ್ರಿ ಉತ್ಸವ ಆರಂಭ

ಮೈಸೂರು-ಊಟಿ ರಸ್ತೆಯ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಸೋಮವಾರದಿಂದ ನವರಾತ್ರಿ ಉತ್ಸವ ಆರಂಭಗೊಂಡಿತು. ಶ್ರೀ ಸಚ್ಚಿದಾನಂದ ಸ್ವಾಮೀಜಿ ಅವರು ಮೊದಲಿಗೆ ಕುಮಾರಿ ಪೂಜೆ ನೆರವೇರಿಸಿದರು. ಬಳಿಕ ನಾದಮಂಟಪದ ಸಾಮೂಹಿಕ ಪ್ರಾರ್ಥನಾ ಸಭಾಂಗಣದಲ್ಲಿ ದೇವಿ ಉತ್ಸವ ಸ್ವಾಮೀಜಿಯವರ ನೇತೃತ್ವದಲ್ಲಿ ನೆರವೇರಿತು. ಈ ವೇಳೆ ಆಶ್ರಮದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಉಪಸ್ಥಿತರಿದ್ದರು.

ದಸರಾ ವಸ್ತು ಪ್ರದರ್ಶನಕ್ಕೆ ಚಾಲನೆ ; 90 ದಿನಗಳ ಕಾಲ ಪ್ರದರ್ಶನ

ಶ್ರೀ ಅಜ್ಜೀಜ್ ಸೇಠ್ ಸಂಗೀತ ಕಾರಂಜಿ, ಶ್ರೀ ಸಿದ್ದರಾಮಯ್ಯ ಅಂಕಣ ಉದ್ಘಾಟನೆ



ವಸ್ತು ಪ್ರದರ್ಶನ ಆವರಣದಲ್ಲಿ ಸೋಮವಾರ ಶ್ರೀ ಅಜ್ಜೀಜ್ ಸೇಠ್ ಸಂಗೀತ ಕಾರಂಜಿ ಉದ್ಘಾಟಿಸುವ ಜೊತೆಗೆ 90 ದಿನಗಳ ವಸ್ತು ಪ್ರದರ್ಶನಕ್ಕೂ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿದರು.

ಮೈಸೂರು,ಸೆ.22(ಪಿಎಂ)- ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ 90 ದಿನಗಳ ದಸರಾ ವಸ್ತು ಪ್ರದರ್ಶನಕ್ಕೆ ಅದ್ಧೂರಿ ಚಾಲನೆ ದೊರೆಯಿತು.

ವಸ್ತು ಪ್ರದರ್ಶನ ಆವರಣದಲ್ಲಿ ಬಣ್ಣಗಳ ಕಾರಂಜಿ ಚಿಮ್ಮಿಸುವ ಶ್ರೀ ಅಜ್ಜೀಜ್ ಸೇಠ್ ಸಂಗೀತ ಕಾರಂಜಿ ಹಾಗೂ 153 ವಾಣಿಜ್ಯ ಮಳಿಗೆಗಳನ್ನು ಒಳಗೊಂಡ ತಮ್ಮದೇ ಹೆಸರಿನ ಶ್ರೀ ಸಿದ್ದರಾಮಯ್ಯ ಅಂಕಣ ಉದ್ಘಾಟಿಸುವ ಜೊತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ದಸರಾ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿದರು.

ಅಲ್ಲದೆ, ಟ್ರ್ಯಾಲಿಯಲ್ಲಿ ಸಿದ್ದರಾಮಯ್ಯ ಅಂಕಣದಲ್ಲಿ ಸುತ್ತಾಡಿ ಮಳಿಗೆಗಳನ್ನು ವೀಕ್ಷಣೆ ಮಾಡಿದರು. 10 ಕೋಟಿ ರೂ. ವೆಚ್ಚದಲ್ಲಿ ಈ ಅಂಕಣ ಸಜ್ಜುಗೊಳಿಸಿದ್ದು, ಇದನ್ನು ಬೇಲೂರು-ಹಳೇಬೀಡು ವಾಸ್ತುಶಿಲ್ಪ ಶೈಲಿಯಲ್ಲಿ ವಿನ್ಯಾಸಗೊಳಿಸಿರುವುದು ವಿಶೇಷವಾಗಿದೆ.

ಜೊತೆಗೆ 10 ಕೋಟಿ ರೂ. ವೆಚ್ಚದಲ್ಲಿ 425 ಅಡಿ ಉದ್ದ ಹಾಗೂ 45 ಅಡಿ ಅಗಲ ವಿಸ್ತೀರ್ಣದಲ್ಲಿ ಶ್ರೀ ಅಜ್ಜೀಜ್ ಸೇಠ್ ಸಂಗೀತ ಕಾರಂಜಿ ಅಭಿವೃದ್ಧಿಪಡಿಸಲಾಗಿದೆ. ಉದ್ಘಾಟನಾ ಸಮಾರಂಭದಲ್ಲಿ ನಾಡಗೀತೆಯ ಸಂಗೀತಕ್ಕೆ ಸದರಿ ಕಾರಂಜಿಯಲ್ಲಿ ಚಿಮ್ಮುತ್ತಿದ್ದ ನೀರಿನ ನರ್ತನ ನೋಡುಗರಲ್ಲಿ ಪುಳಕ ಉಂಟು ಮಾಡಿತು. ಅಲ್ಲದೆ, ಬಣ್ಣ ಬಣ್ಣದ ವಿದ್ಯುತ್ ದೀಪಗಳ ಬೆಳಕು ನೀರಿನಲ್ಲಿ ಪ್ರತಿ ಬಿಂಬಿಸಿ, ಬಣ್ಣದೋಕುಳಿ ಮೂಡಿಸಿತು. ಅಲ್ಲದೆ, ಭಾರತೀಯ ನೌಕಾಪಡೆಯ ಐಎನ್‌ಎಸ್ ಕದಂಬ ತಂಡವು ಉದ್ಘಾಟನಾ ಸಮಾರಂಭದಲ್ಲಿ ಸಾದರಪಡಿಸಿದ ಬ್ಯಾಂಡ್ ಸಂಗೀತ, ನಿನಾದದ ಹೊನಲು ಸೂಸಿತು.

ಇದಕ್ಕೂ ಮುನ್ನ ವಸ್ತು ಪ್ರದರ್ಶನದ ಪ್ರವೇಶದ್ವಾರದಲ್ಲಿ ನಿರ್ಮಿಸಿರುವ ಡಾ.ರಾಜ್‌ಕುಮಾರ್ ಅವರ ಪುತ್ಥಳಿಯನ್ನು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಅನಾವರಣಗೊಳಿಸಿದರು. ಇದೇ ಮೊದಲ ಬಾರಿಗೆ ವಾಯು ಸೇನೆ, ನೌಕ ಸೇನೆ, ಭೂ ಸೇನೆ ಮತ್ತು ಭಾರತೀಯ ಬಾಹ್ಯಾಕಾಶ (ಇಸ್ರೋ) ಸಂಸ್ಥೆಗಳಿಂದ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಇಲಾಖೆ, ನಿಗಮ, ಪ್ರಾಧಿಕಾರಗಳಿಂದ 34 ಮಳಿಗೆಗಳನ್ನು ಇಲ್ಲಿ ಕಾಣಬಹುದು.

ಈ ಬಾರಿಯ ವಸ್ತು ಪ್ರದರ್ಶನದಲ್ಲಿ ಎಲ್ಲಾ 153 ವಾಣಿಜ್ಯ ಮಳಿಗೆಗಳು, 40 ಆಹಾರ ಮಳಿಗೆಗಳು ಹಾಗೂ ಸುಮಾರು 45 ವಿವಿಧ ರೀತಿಯ ಅಮ್ಯೂಸ್‌ಮೆಂಟ್ ಆಟಿಕೆಗಳು ಇವೆ. ಇಂದಿನಿಂದ ವೀಕ್ಷಣೆಗೆ ವಸ್ತು ಪ್ರದರ್ಶನ ತೆರೆದಿದ್ದು, 90 ದಿನಗಳ ಕಾಲ ಮಧ್ಯಾಹ್ನ 3ರಿಂದ ರಾತ್ರಿ 10ರವರೆಗೆ ಸಾರ್ವಜನಿಕರು ಭೇಟಿ ನೀಡಬಹುದು. ಟಿಕೆಟ್ ದರವನ್ನು ವಯಸ್ಕರಿಗೆ 40 ರೂ. ಹಾಗೂ ಮಕ್ಕಳಿಗೆ 30 ರೂ. ನಿಗದಿ ಮಾಡಲಾಗಿದೆ.

ಸರ್ಕಾರಿ ಮಳಿಗೆಗಳಲ್ಲಿ ಬಹುತೇಕವು ಪ್ರಾರಂಭ: ಇದೇ ಮೊಟ್ಟ ಮೊದಲ ಬಾರಿಗೆ ಉದ್ಘಾಟನಾ ದಿನದಂದೇ ಸರ್ಕಾರಿ ಮಳಿಗೆಗಳು ಬಹುತೇಕ ಎಲ್ಲವೂ ಪ್ರಾರಂಭವಾಗಿವೆ ಎಂದು ಇದೇ ವೇಳೆ ಶಾಸಕ ತನ್ವೀರ್ ಸೇಠ್ ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ತಿಳಿಸಿದರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಶಿವರಾಜ್ ತಂಗಡಗಿ, ಕೆ.ವೆಂಕಟೇಶ್, ಶಾಸಕ ಟಿ.ಎಸ್.ಶ್ರೀವತ್ಸ, ಸಂಸದ ಸುನೀಲ್ ಬೋಸ್, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಕೆ.ಶಿವಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಸಿಇಒ ರುದ್ರೇಶ್ ಮತ್ತಿತರರು ಹಾಜರಿದ್ದರು.



ವಸ್ತು ಪ್ರದರ್ಶನದಲ್ಲಿನ ಸಂಗೀತ ಕಾರಂಜಿ ಬಣ್ಣದ ಬೆಳಕಲ್ಲಿ ಚಿಮ್ಮುತ್ತಿರುವುದು.

ಚಾಮುಂಡಿಬೆಟ್ಟದಲ್ಲಿ ಬೂಕರ್ ಪ್ರಶಸ್ತಿ ವಿಜೇತ ಬಾನು ಮುಷ್ತಾಕ್ ಅವರಿಂದ ಧಾರ್ಮಿಕ ವಿಧಿ-ವಿಧಾನ







ಚಾಮುಂಡಿಬೆಟ್ಟದಲ್ಲಿ ಸೋಮವಾರ ದಸರಾ ಉದ್ಘಾಟನೆಗೂ ಮೊದಲು ಚಾಮುಂಡೇಶ್ವರಿ ದೇವಿ ಸನ್ನಿಧಾನದಲ್ಲಿ ಬಾನು ಮುಷ್ತಾಕ್ ಅವರು ಮಂಗಳಾರತಿ ತೆಗೆದುಕೊಂಡರು. (ಮೇಲಿನಿಂದ ಮೊದಲ ಚಿತ್ರ). ದೇವಸ್ಥಾನದ ಪ್ರಧಾನ ಆಗಮಿಕ ಡಾ.ಶಶಿಶೇಖರ ದೀಕ್ಷಿತ್ ಅವರಿಂದ ಬಾನು ಮುಷ್ತಾಕ್ ಅವರು ಪ್ರಸಾದ ಸ್ವೀಕರಿಸಿದರು(ಎರಡನೇ ಚಿತ್ರ). ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಚಾಮುಂಡೇಶ್ವರಿ ಕ್ಷೇತ್ರ ಕಾರ್ಯದರ್ಶಿ ರೂಪಾ ಅವರಿಂದ ಫಲತಾಂಬೂಲ ಸ್ವೀಕರಿಸಿದರು. (ಮೂರನೇ ಚಿತ್ರ).

ಮೈಸೂರು ಮಲ್ಲಿಗೆ, ಮೈಸೂರು ಸಿಲ್ಕ್ ಉಡುಗೆ-ತೊಡುಗೆಯಲ್ಲಿ ಅತೀವ ಸಂಭ್ರಮ







ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಸೋಮವಾರ ನಡೆದ ವಿಶ್ವ ವಿಖ್ಯಾತ ಮೈಸೂರು ದಸರಾ ಉದ್ಘಾಟನಾ ಸಮಾರಂಭದಲ್ಲಿ (ಎಡದಿಂದ) ಬಾನು ಮುಷ್ತಾಕ್, ಗ್ಯಾರಂಟಿ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್ ಹಾಗೂ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪಾ ಅವರು ಸಾಂಪ್ರದಾಯಿಕ ಉಡುಗೆಯಲ್ಲಿ ಸಂಭ್ರಮಿಸಿದರು.

ಮೈಸೂರು, ಸೆ.22(ಬಿಎಲ್‌ಯು)- ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಇಂದು ಬಾನು ಮುಷ್ತಾಕ್ ಸೇರಿದಂತೆ ಹಲವು ಮಹಿಳಾ ಅಧಿಕಾರಸ್ಥರು ಕೇಶಾಲಂಕಾರಕ್ಕೆ ಪರಿಮಳಯುಕ್ತ ಮೈಸೂರು ಮಲ್ಲಿಗೆ ಮುಡಿದು ಸಂಭ್ರಮಿಸಿದರು.

ದಕ್ಷಿಣ ಭಾರತೀಯ ಸಂಪ್ರದಾಯದಲ್ಲಿ ಗಜ್ರಾ ಅಥವಾ ವೇಣಿ ಎಂದು ಕರೆಯಲ್ಪಡುವ ವೃತ್ತಾಕಾರದ ಜಡೆಗೆ ಮಲ್ಲಿಗೆ ಹೂವಿನ ಅಲಂಕಾರ ಮಾಡಿಕೊಳ್ಳುತ್ತಾರೆ. ಇದು ಭಾರತೀಯ ಸಂಪ್ರದಾಯ ಹಾಗೂ ಸೌಂದರ್ಯವನ್ನು ಸಂಕೇತಿಸುತ್ತದೆ. ಬಾನು ಮುಷ್ತಾಕ್ ಅವರು ನೀಲಿ ರೇಷ್ಮೆ ಸೀರೆಯಲ್ಲಿ ಕಂಗೊಳಿಸಿದರೆ, ಗ್ಯಾರಂಟಿ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್ ಹಸಿರು ರೇಷ್ಮೆ ಸೀರೆಯಲ್ಲಿ ಮಿಂಚಿದರು. ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪಾ ಅವರು ಕ್ರೀಂ ಕಲರ್ ರೇಷ್ಮೆ ಸೀರೆ ಧರಿಸಿ ಆಕರ್ಷಿಸಿದರು. ಇವರ ವೇಷಭೂಷಣ, ಉತ್ಸಾಹ ಕಂಡು ನೆರೆದವರು ಸಂತೋಷ ವ್ಯಕ್ತಪಡಿಸಿದರು.

ಹೈದರಾಲಿ, ಟಿಪ್ಪು ಸುಲ್ತಾನ್ ಕೂಡ ದಸರಾ ಆಚರಣೆ ಮಾಡಿದ್ದರು: ಸಚಿವ ಡಾ.ಮಹದೇವಪ್ಪ ಪ್ರಸ್ತಾಪ



ಮೈಸೂರು, ಸೆ.22(ಬಿಎಲ್‌ಯು)- ಹೈದರಾಲಿ ಹಾಗೂ ಟಿಪ್ಪು ಸುಲ್ತಾನ್ ಕೂಡ ದಸರಾ ಆಚರಣೆ ಮಾಡುತ್ತಿದ್ದರು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು.

ದಸರಾ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸರ್ ಮಿರ್ಜಾ ಇಸ್ಮಾಯಿಲ್ ಅವರನ್ನು ಅಂಬಾರಿಯಲ್ಲಿ ಕೂರಿಸಿಕೊಂಡು ಹೋಗಿದ್ದರು ಎಂದು ತಿಳಿಸಿದರು.

ಅಂದು ಕೂಡ ಮತೀಯವಾದಿಗಳು ವಿರೋಧ ಮಾಡಿದ್ದರು. ಆದರೆ ಇದ್ಯಾವುದಕ್ಕೂ ಕಿವಿಗೊಡದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಧರ್ಮಾತೀತ ಹಾಗೂ ಜಾತ್ಯಾತೀತ ಭಾವನೆ ವ್ಯಕ್ತಪಡಿಸಿದರು ಎಂದು ಹೇಳಿದರು.

ಮೈಸೂರು ದಸರಾ ಜಾತಿ, ಧರ್ಮವನ್ನು ಮೀರಿದ ನಾಡಿನ ಉತ್ಸವವಾಗಿದೆ. ಬಿಬಿಸಿ ಸೇರಿದಂತೆ ಹಲವು ಅಂತರರಾಷ್ಟ್ರೀಯ ಮಾಧ್ಯಮಗಳು ದಸರಾ ಹಬ್ಬವನ್ನು ಕೊಂಡಾಡಿವೆ ಎಂದರು.

ಸೆ.24ಕ್ಕೆ ಮಹಿಷ ದಸರಾ ಆಚರಣೆ

ಮೈಸೂರು, ಸೆ.22– ರಾಜ್ಯದ ಪ್ರಗತಿಪರ ಚಿಂತಕರು, ಜಿಲ್ಲಾ ಮತ್ತು ತಾಲೂಕು ಮಟ್ಟದ ದಲಿತ ಸಂಘಟನೆಗಳು, ದಲಿತ ವಿದ್ಯಾರ್ಥಿಗಳ ಒಕ್ಕೂಟ, ಅಂಬೇಡ್ಕರ್ ಸಂಘಟನೆಗಳ ಸಹಯೋಗದೊಂದಿಗೆ ಸೆ.24ರಂದು ಮಹಿಷ ದಸರಾ ಆಚರಿಸಲಾಗುತ್ತಿದೆ ಎಂದು ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ತಿಳಿದಿದ್ದಾರೆ.

ಹಲವು ವರ್ಷಗಳಿಂದ ನವರಾತ್ರಿ ವೇಳೆ ಮಹಿಷ ಮಂಡಲೋತ್ಸವ ರಾಜ್ಯದ ಮೂಲ ನಿವಾಸಿಗಳಿಂದ ಮಹಿಷ ಸಾಂಸ್ಕೃತಿಕ ಹಬ್ಬವನ್ನು ಆಚರಿಸಲಾಗುತ್ತಿದೆ. ಮಹಿಷ ಕುಲದ ಸ್ವಾಭಿಮಾನದ ಚಕ್ರವರ್ತಿಯೇ ಮಹಿಷಾಸುರ. ಅಂದಿನ ಮಹಿಷ ಮಂಡಲವೇ ಇಂದಿನ ಮೈಸೂರು ರಾಜ್ಯವಾಗಿದ್ದು, ಸೆ. 24ರಂದು ಬೆಳಗ್ಗೆ 9 ಗಂಟೆಗೆ ಚಾಮುಂಡಿಬೆಟ್ಟದಲ್ಲಿರುವ ಮಹಿಷಾಸುರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಲಾಗುತ್ತದೆ. ಬಳಿಕ 11 ಗಂಟೆಗೆ ಪುರಭವನದ ಆವರಣದಲ್ಲಿ ಸಮಾವೇಶ ಆಯೋಜಿಸಲಾಗಿದೆ. ದಲಿತ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಅವರು ಕೋರಿದ್ದಾರೆ.

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಪದವಿಪೂರ್ವ ಕಾಲೇಜು ಬೋಧಕರ ಹಾಗೂ ಬೋಧಕೇತರ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

ನಂ.255/8, ಅರಮನೆ ಜಪದ ಕಟ್ಟೆ ಮಠ, ಲಷ್ಕರ್ ಮೊಹಲ್ಲಾ, ಅಶೋಕ ರಸ್ತೆ, ಮೈಸೂರು 570001 ಮೊ. ನಂ. : 9449082111

ಮೇಲ್ಕಂಡ ಸಹಕಾರ ಸಂಘದ 2024-2025 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ.23-09-2025ನೇ ಮಂಗಳವಾರ ಬೆಳಿಗ್ಗೆ 11-00 ಗಂಟೆಗೆ ಸರಿಯಾಗಿ ಮೈಸೂರು ನಗರದ ಜೆ.ಎಲ್.ಬಿ.ರಸ್ತೆಯಲ್ಲಿರುವ **ಶ್ರೀ ಗೋವಿಂದರಾವ್ ಮೆಮೋರಿಯಲ್ ಹಾಲ್** ನಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಹೆಚ್.ಜಿ ಸುರೇಶ್ ಬಾಬು ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲಾಗುವುದು.

ಸಂಘದ ಮಾನ್ಯ ನಿರ್ದೇಶಕರುಗಳು ಹಾಗೂ ಎಲ್ಲಾ ಸದಸ್ಯರುಗಳು ಈ ಮಹಾ ಸಭೆಗೆ ಸಕಾಲಕ್ಕೆ ಆಗಮಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಕೋರಲಾಗಿದೆ. ಸಹಿ/- ಕಾರ್ಯದರ್ಶಿ

ದಿ. ಮಾಡೆಲ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ)

ನಂ. 59/ಎ, ಚಾಮುಂಡಿವನಂ, (ವಿದ್ಯಾರಣ್ಯಪುರಂ) ಮೈಸೂರು–08
ದೂ: 9449622242, 9945566356

ಪ್ರಕಟಣೆ

ಈ ಮೇಲ್ಕಂಡ ಸಂಘದ 2024–25 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ: 28–09–2025 ರಂದು 11-00 ರಂದು ಬೆಳಿಗ್ಗೆ 11–00 ಘಂಟೆಗೆ ಸಂಘದ ಆವರಣದಲ್ಲಿ ಏರ್ಪಡಿಸಲಾಗಿದೆ. ಸಂಘದ ಸದಸ್ಯರು ದಯಮಾಡಿ ಸಭೆಗೆ ಹಾಜರಾಗಬೇಕಾಗಿ ಆಡಳಿತ ಮಂಡಳಿ ಅನುಮತಿ ಮೇರೆಗೆ ಕಾರ್ಯದರ್ಶಿಯವರು ವಿನಂತಿಸಿರುತ್ತಾರೆ.

ದಿನಾಂಕ: 22–09–2025
ಸ್ಥಳ: ಮೈಸೂರು

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/- ಕಾರ್ಯದರ್ಶಿ